# ಸಾಗಸಂದ್ರ ಕೆಂಪಮ್ಮದೇವಿ

## ಕ್ಷೇತ್ರದರ್ಶನ

**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**

***ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ***

ಎಸ್.ಕೆ. ಸಿದ್ದಣ್ಣ ಕಟ್ಟಡ, ಕಾಳಿದಾಸನಗರ,

ಸಿರಾ, ತುಮಕೂರು ಜಿಲ್ಲೆ

Sagasandra Kempammadevi Kshetradarshana: by Dr.Chikkanna Yennekatte, Professor and Ph.D Guide, GFGC, Sira, Tumkur Dist.

ಮೊದಲ ಮುದ್ರಣ: 2015

ಪುಟ : 80

ಆಕಾರ : ಡೆಮಿ 1/8

ಕಾಗದ : 70 ಜಿಎಸ್‌ಎಂ ಎನ್‌ಎಸ್ ಮ್ಯಾಪ್ಲಿಥೋ

ಬೆಲೆ : ರೂ. 40/-

ಹಕ್ಕುಗಳು : ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

ಪ್ರಕಾಶಕರು : ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ
ಎಸ್.ಕೆ.ಸಿದ್ದಣ್ಣ ಬಿಲ್ಡಿಂಗ್, ಕಾಳಿದಾಸನಗರ
ಸಿರಾ-572137, ತುಮಕೂರು ಜಿಲ್ಲೆ
ದೂ.9945975509. yannekatte@gmail.com

# ಹೂವು ಹೊಂಬಾಳೆ

ಸಾಗಸಂದ್ರ ಗುಬ್ಬಿ ತಾಲ್ಲೂಕಿನ ನಿಟ್ಟೂರು ಹೋಬಳಿಯ ಒಂದು ಪುಟ್ಟ ಗ್ರಾಮ. ಆ ಗ್ರಾಮದ ಹೆಸರಿನಲ್ಲಿಯೇ ಹೆಸರುವಾಸಿಯಾಗಿರುವ ಸಾಗಸಂದ್ರದ ಕೆಂಪಮ್ಮ ಒಂದು ಗ್ರಾಮದೇವತೆಯ ಸ್ವರೂಪದಲ್ಲಿದ್ದರೂ ಕರ್ನಾಟಕದಾದ್ಯಂತ ಅಪಾರ ಒಕ್ಕಲುಗಳನ್ನು, ಭಕ್ತರನ್ನು ಹೊಂದಿರುವುದು ಈ ದೇವತೆಯ ವಿಶೇಷ. ಈ ಬಗೆಯ ಶಕ್ತಿದೇವತೆಗಳು ಕರ್ನಾಟಕದ ಭಕ್ತಿಭಾವದ, ನಂಬಿಕೆ ಸಂಪ್ರದಾಯದ ಕೇಂದ್ರಗಳಾಗುತ್ತಿರುವುದು ಸಂತಸದ ಸಂಗತಿಯಾಗಿದೆ. ಈ ಬಗೆಯ ಶಕ್ತಿ ದೇವತೆಗಳು ನಮ್ಮ ತಳಸಮುದಾಯದ ಜನಾಂಗಿಕ ನಿರ್ವಹಣೆ, ಪೂಜೆ, ಕಲಾಕುಣಿತಗಳಲ್ಲಿ ಈ ಸಮುದಾಯಗಳೇ ಸಿಂಹಪಾಲು ಎಂಬುದು ಮತ್ತೂ ವಿಶೇಷವಾಗಿದೆ.

ಎರೆಕಟ್ಟೆ ರಾಂಪುರದಮ್ಮ, ಸಾಕ್ಷಿಹಳ್ಳಿಯ ಮಣ್ಣಮ್ಮ, ಮಣ್ಣೆ ಮಾದಾಪುರದ ಮಣ್ಣಮ್ಮ, ದೊಡ್ಡೇನಹಳ್ಳಿಯ ಕೆಂಪಮ್ಮ ಹೀಗೆ ಬಹುತೇಕ ಶಕ್ತಿದೇವತೆಗಳು ಹಾಗೂ ಅದರ ಸಂಬಂಧಿ ಕತೆ, ಪುರಾಣ, ಸಂಸ್ಕೃತಿಯ ಸಂಕಥನಗಳು ಚೆಲ್ಲಿಕೊಳ್ಳುವುದು ತಳಸಮುದಾಯಗಳ ಸುತ್ತ ಎಂಬುದು ವಿಶೇಷ. ಈ ಮೂಲಕ ಆರ್ಯಸಂಸ್ಕೃತಿಯ ಪುರೋಹಿತ ಪರಂಪರೆಗೆ, ಅದರ ಹಿಡಿತದಿಂದ ಬಿಡಿಸಿಕೊಂಡು ಪರ್ಯಾಯ ಸಂಸ್ಕೃತಿಯನ್ನು, ಆರಾಧನೆಯ ಒಳಗೂ ಪಡೆದದ್ದು ಧಾರ್ಮಿಕ ಆಂದೋಲನವೇ ಸರಿ. ಈ ಬಗೆಯ ಧಾರ್ಮಿಕ ಪಲ್ಲಟದ ಮೂಲಕ ಪರ್ಯಾಯ ಸಂಸ್ಕೃತಿ ಹುಟ್ಟುಹಾಕಿದ, ದೇಶೀ ನೆಲೆಯ ಈ ಬಗೆಯ ದೇವತೆಗಳು ಕರ್ನಾಟಕ ಸಂಸ್ಕೃತಿಯ ಪ್ರಧಾನ ಸಂಸ್ಕೃತಿಯಲ್ಲಿ ಒಂದೊಂದು ವಾಹಿನಿಗಳಾಗಿ ಸೇರ್ಪಡೆಗೊಂಡೇ ಒಟ್ಟು ಕರ್ನಾಟಕ ಸಂಸ್ಕೃತಿಯ ರೂಪವಾಗಿದೆ. ಗ್ರಾಮ ಸಂಸ್ಕೃತಿಯ ಭಾಗವಾಗಿಯೇ ಆರಂಭವಾಗುವ ಈ ಬಗೆಯ ಅಧ್ಯಯನದ

ಹಿಂದೆ ಆ ಸಂಸ್ಕೃತಿಯ ಹಿನ್ನೆಲೆಯಿಂದ ಬಂದವರು ತೊಡಗಿಸಿಕೊಳ್ಳುವುದು ಮತ್ತೂ ವಿಶೇಷ.

ಈ ಹಿನ್ನೆಲೆಯಲ್ಲಿ ಸಾಗಸಂದ್ರದ ಕೆಂಪಮ್ಮದೇವಿಯ ಈ ಕ್ಷೇತ್ರದರ್ಶನ ಸಮಕಾಲೀನರೊಂದಿಗೆ ಮುಂದಿನ ತಲೆಮಾರಿನವರಿಗೂ ಸಶಕ್ತವಾಗಿ ಮಾರ್ಗದರ್ಶನ ಮಾಡುತ್ತದೆ. ಕೆಂಪಮ್ಮದೇವಿಯ ಚರಿತ್ರೆ, ಪುರಾಣದ ಜೊತೆಜೊತೆಗೆ ಸಾಗಸಂದ್ರದೊಂದಿಗಿನ ಅವಿನಾಭಾವ ಸಂಬಂಧ ಹೊಂದಿರುವ ಇತರೆ ಸ್ಥಳಗಳನ್ನು ಧಾರ್ಮಿಕ ಭಾವೈಕ್ಯತೆ, ಅನನ್ಯತೆಗಳನ್ನು ಈ ಪುಟ್ಟ ಪುಸ್ತಕ ಕಟ್ಟಿಕೊಟ್ಟಿರುವುದು ಗ್ರಾಮಚರಿತ್ರೆ, ಸಂಸ್ಕೃತಿಯ ಅಧ್ಯಯನಕಾರರಿಗೆ, ಅಧ್ಯಾಪಕರಿಗೆ, ಶಿಕ್ಷಣಾರ್ಥಿಗಳಿಗೆ ಉತ್ತಮ ಆಕರವಾಗಿದೆ.

ಈ ಬಗೆಯ ದಾಖಲೀಕರಣದ ಕೆಲಸ ನಾಡು ಮೆಚ್ಚುವ ಕೆಲಸ ಎಂದು ಭಾವಿಸಿದ್ದೇನೆ. ಏಕೆಂದರೆ ನಾವೆಲ್ಲರೂ ಭಕ್ತರೇ, ಸಮಯ ಸಂದರ್ಭಗಳಲ್ಲಿ ದೇವರ ಮೊರೆಹೋಗುತ್ತೇವೆ. ಹರಕೆ, ಪೂಜೆ, ಆಚರಣೆಗಳಲ್ಲಿ ನಮ್ಮ ಕಾರ್ಯ ಮುಗಿದುಬಿಡುತ್ತದೆ. ಅದರಾಚೆಗೂ ಆ ದೇವಿಯ ಬಗೆಗಿನ ಇತಿಹಾಸ, ಪುರಾಣ, ಸಂಪ್ರದಾಯ ನಡಾವಳಿ ನಮಗೆ ತಿಳಿದಿರುವುದಿಲ್ಲ. ಈ ಪುಸ್ತಕ ಅಂಥ ಕೊರತೆಯನ್ನು ಸಮರ್ಥವಾಗಿ ಆಗುಮಾಡಿದೆ.

ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ನಮ್ಮ ನಡುವಣ ಅಪರೂಪದ ಸಂಸ್ಕೃತಿ ಚಿಂತಕ. ಪ್ರಾದೇಶಿಕ ಅಧ್ಯಯನಕ್ಕೆ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡು ಕಳೆದ ಎರಡೂವರೆ ದಶಕಗಳಿಂದಲೂ ತುಮಕೂರು ಜಿಲ್ಲೆಯ ಮಟ್ಟಿಗೆ ಅತ್ಯುಪಯುಕ್ತವಾದ ಕೆಲಸ ಮಾಡಿದ್ದಾರೆ. ವೀರಜುಂಜಪ್ಪ ಮೊದಲಾದ ಬುಡಕಟ್ಟು ಕಾವ್ಯಗಳನ್ನು ಸಂಗ್ರಹಿಸಿ, ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯಗಳ ಸಂಶೋಧನೆಗೂ ಬಹುದೊಡ್ಡ ಆಕರ ಒದಗಿಸಿರುವುದು ಇವರ ವಿಶೇಷ ಮಾತ್ರವಲ್ಲ ಇಂಥ ಅಪರೂಪದ ಪುಸ್ತಕಗಳನ್ನು ಅಂತರ್ಜಾಲಕ್ಕೂ ಒಳಪಡಿಸುವ

ಮೂಲಕ ಜಗತ್ತಿನ ಮಟ್ಟದಲ್ಲಿ ನಮ್ಮ ಊರುಗಳು, ವೀರಪುರುಷರು, ಕಲೆ-ಕಲಾಕಾರರನ್ನು ಪರಿಚಯ ಮಾಡಿಕೊಡುತ್ತಿರುವ ಇವರ ಕೆಲಸ ಬಹುದೊಡ್ಡದು. ಗಡಿನಾಡ ಜಾನಪದ ಸಂಪರ್ಕ ಕೇಂದ್ರ ಈ ಬಗೆಯ ಸಂಸ್ಕೃತಿ ಸಂಬಂಧಿ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಸಾಗಸಂದ್ರ ಕ್ಷೇತ್ರದರ್ಶನ ಈ ಪುಸ್ತಕವನ್ನು ಪ್ರಕಟಿಸಲು ನಮಗೆ ಹೆಮ್ಮೆ ಅಂದೆನ್ನಿಸುತ್ತದೆ. ಈ ಬಗೆಯ ಪುಸ್ತಕಗಳನ್ನು ರಚಿಸುವ ಮೂಲಕ ಸಂಸ್ಕೃತಿ ಕಟ್ಟಿಕೊಡುತ್ತಿರುವ ನಮ್ಮ ಜಾನಪದ ಕೇಂದ್ರದ ಸಂಚಾಲಕ, ಪ್ರಾಧ್ಯಾಪಕ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಅವರನ್ನು ಅಭಿನಂದಿಸುತ್ತೇನೆ.

**ಟಿ.ಬಿ.ಜಯಚಂದ್ರ**
ಕಾನೂನು, ಸಂಸದೀಯ ವ್ಯವಹಾರ ಹಾಗೂ
ಉನ್ನತ ಶಿಕ್ಷಣ ಸಚಿವರು ಮತ್ತು
ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು

ಗೌ|| ಅಧ್ಯಕ್ಷರು
ಗಡಿನಾಡ ಜಾನಪದ ಸಂಪರ್ಕ ಕೇಂದ್ರ
ಕಾಳಿದಾಸನಗರ, ಸಿರಾ

# ಧನ್ಯತೆಯ ಕೆಲಸ

ಸಾಗಸಂದ್ರ ನಮ್ಮ ಸೀಮೆಯ ಧಾರ್ಮಿಕ, ಭಾವನಾತ್ಮಕ, ಭಕ್ತಿಭಾವದ ಕೇಂದ್ರ. ಸಾಗಸಂದ್ರದಮ್ಮ ಎಂದೇ ಜನಪದರು ಊರ ಹೆಸರಿನಲ್ಲೇ ಕರೆದು ಗೌರವಿಸುವ, ಪೂಜಿಸಿ, ಧನ್ಯತೆ ತೋರುವುದು ರೂಢಿಯಾಗಿದೆ. ತೇರು, ಅಗ್ನಿಕೊಂಡ, ಮಡೆ, ಬಾನ, ಆರತಿ ಉತ್ಸವಗಳಲ್ಲಿ ಸಾಗಸಂದ್ರವನ್ನು ಕೇಂದ್ರವಾಗಿರಿಸಿಕೊಂಡು, ಸುತ್ತಲ ಎಪ್ಪತ್ತೇಳು ಹಳ್ಳಿಯ ಜನರೂ ಭಾಗವಹಿಸುವುದು, ಹರಕೆ-ಗೌರವ ತೋರುವುದು, ಹಣ್ಣು-ಕಾಯಿ ಮಾಡಿಸುವುದು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದ ಸತ್‌ಸಂಪ್ರದಾಯ. ವಾಲ್ಮೀಕಿ ಮಕ್ಕಳು, ನಾಯಕರು, ಪಾಳೆಯಗಾರರು ಎಂದೆಲ್ಲಾ ಕರೆಯಲ್ಪಡುವ ಈ ಬುಡಕಟ್ಟು ಗಿರಿಜನ ಸಮುದಾಯ ಸಾಗಸಂದ್ರದಮ್ಮನ ಜೀವಚೇತನವಾಗಿ ಆಕೆಯ ಮಹಿಮೆ, ಭಕ್ತಿ ಪವಾಡಗಳನ್ನು ಮೈದುಂಬಿಕೊಂಡು ದೇವಿಯ ಮಹಿಮಾವಳಿಯನ್ನು ನಿರಂತರವಾಗಿ ಜನಪದರಲ್ಲಿ ಬಿಂಬಿಸುತ್ತಾ ಅಪಾರ ಒಕ್ಕಲಾಗಿಸುತ್ತಾ ದೇವಿಯ ಬಳಗವನ್ನು ದೊಡ್ಡದಾಗಿಸಿದ್ದಾರೆ.

ಸಾಗಸಂದ್ರವನ್ನು ನಾನು ಕಳೆದ 50 ವರ್ಷಗಳಿಂದಲೂ ಒಕ್ಕಲಾಗಿ, ಹತ್ತಿರದಿಂದ ಗಮನಿಸಿದ್ದೇನೆ. ಕೆಂಪಣ್ಣ, ಕೆಂಪಕ್ಕ, ಚಿಕ್ಕ ಕೆಂಪ, ದೊಡ್ಡಕೆಂಪಯ್ಯ ಹೀಗೆ ನಮ್ಮೂರಿನ ಜನಸಂಖ್ಯೆಯ ಅರ್ಧದಷ್ಟು ಹೆಸರುಗಳು, ಸಾಗಸಂದ್ರವನ್ನು ಕೇಂದ್ರೀಕರಿಸಿ ರೂಪಿತವಾಗಿವೆ. ಗೊರವ ಪರಂಪರೆಯ, ಮೈಲಾರದೇವರ ಒಕ್ಕಲುಗಳು ಪ್ರಧಾನವಾದರೂ ಸಾಗಸಂದ್ರಕ್ಕೆ ಅಷ್ಟೇ ಭಕ್ತಿ-ಗೌರವಗಳಿಂದ ನಡೆದುಕೊಳ್ಳುವುದು ರೂಢಿಯಾಗಿದೆ. ಹೀಗಾಗಿ ಸಾಗಸಂದ್ರದಮ್ಮ ನಮ್ಮೂರ ಗೌರವದ ರೂಪವೂ ಹೌದು. ಸಾಗಸಂದ್ರದಮ್ಮನ ಆವೇಶಭರಿತ ಕುಣಿತ, ಸೋಮನ ಕುಣಿತ, ಚಾಟಿ ಹೊಡೆದುಕೊಳ್ಳುವ ರೀತಿ ನನಗೆ ಮೊದಲಿಂದಲೂ ಕುತೂಹಲದ ಸಂಗತಿ. ನಾನು ಜಾನಪದ ಸಾಹಿತ್ಯದ ವಿದ್ಯಾರ್ಥಿಯಾದುದರಿಂದ ಅಲ್ಲಿನ ಸೋಮನ ಕುಣಿತ ಹಾಗೂ ದೇವರನ್ನು ಕುರಿತು ಹೊಗಳುವ ಪದಗಳು

ನನಗೆ ವಿಶೇಷ ಆಸಕ್ತಿ ಮೂಡಿಸಿದ ವಿಷಯವಾಗಿತ್ತಾದರೂ ಆ ಬಗೆಗೆ ಸಾಹಿತ್ಯಕವಾಗಿ ನನಗೆ ಯಾವುದೇ ಮಾಹಿತಿ ದೊರೆಯದ, ಹಾಗೂ ಆ ಬಗೆಗಿನ ಪ್ರೇರಣೆಯೂ ಇಲ್ಲದ ಕಾರಣ ನಾನು ಸಾಗಸಂದ್ರದ ಬಗೆಗೆ ಬರೆಯಲು ಸಾಧ್ಯವೂ ಆಗಿರಲಿಲ್ಲ. ಇತ್ತೀಚೆಗೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಹತ್ವಾಕಾಂಕ್ಷಿ ಯೋಜನೆಯಾದ ಕರ್ನಾಟಕ ಗ್ರಾಮ ಚರಿತ್ರೆ ಕೋಶದ ತುಮಕೂರು ಜಿಲ್ಲಾ ಸಂಪಾದಕನಾಗಿ ನಾನು ಕಳೆದ ಮೂರು ವರ್ಷದಿಂದ ಕೆಲಸ ಮಾಡಿದೆನು. ಆಗ ಸಾಗಸಂದ್ರ ಕುರಿತು ಮಾಹಿತಿ ಸಂಗ್ರಹದ ಸಂದರ್ಭದಲ್ಲಿ ಗ್ರಾಮಾಧ್ಯಯನ, ಅಲ್ಲಿನ ಮಾಸ್ತಿಕಲ್ಲು, ಬಸವನಗುಡ್ಡೆ, ಹಿರಿಯರ ಸಮಾಧಿ, ಈಶ್ವರ, ಭೂತಪ್ಪ, ಮಾರಮ್ಮ ದೇವಾಲಯಗಳ ಬಗೆಗೆ ಮಾಹಿತಿ ಸಂಗ್ರಹಿಸುತ್ತಾ ಹೋದಂತೆ ಊರು-ಕೇರಿ, ಜನ-ಬದುಕು, ಗ್ರಾಮ ರಚನೆಯ ಬಗೆಗೂ ಒಂದಿಷ್ಟು ಮಾಹಿತಿ ಲಭ್ಯವಾಯಿತು.

ಸಾಗಸಂದ್ರದ ಹೊರವಲಯದಲ್ಲಿ ಇಂದಿಗೂ ಇರುವ ಒಂದು ಮಾಸ್ತಿಕಲ್ಲು ಸಾಗಸಂದ್ರದಮ್ಮ ಗ್ರಾಮಸಂಸ್ಕೃತಿಯ ರೂಪವೆ. ಹೇಳುವಾಗ ಆಕೆಯ ವಿವಾಹಸ್ಥಳಾಗಿ ಚೇಳೂರಿನಿಂದ ಮೂಗನಾಯಕನಕೋಟೆಗೆ ಬರುವಾಗ ಮಾರ್ಗ ಮಧ್ಯೆ ಹುತ್ತದ ಕ್ಷಾವೆಯೊಳಗೆ ಸೇರಿ ಐಕ್ಯವಾದ ಹೆಣ್ಣು. ಆಕೆಯೇ ಕೆಂಪಮ್ಮ ದೇವತೆಯಾಗಿ ರೂಪುಗೊಂಡಳೆಂದು ಹೇಳುವ ಜನಪದ ಐತಿಹ್ಯ. ಈ ಗ್ರಾಮದ ಮಾಸ್ತಿಕಲ್ಲಿಗೂ ಸಂಬಂಧ ಇರಬಹುದೆ? ಈ ಮೂಲದಿಂದ ಈಕೆ ಗ್ರಾಮವೊಂದರ ಸಂರಕ್ಷಣೆ ಅಥವಾ ಆ ಸಂಬಂಧಿ ಗೌರವಾರ್ಥವಾಗಿ ಹುತಾತ್ಮಳಾಗಿ ಈಕೆಯೇ ಅಕ್ಕನವರ ದೇವತೆಯಾಗಿರಬಹುದೆ? ಈ ಬಗೆಗೆ ವಿಫುಲ ಸಂಶೋಧನೆಗೆ ಇಲ್ಲಿ ಆಕರ ಒದಗಿಸಲಾಗಿದೆ.

ಸಾಗಸಂದ್ರ ಈಗ ಬೆಳೆದಿದೆ. ಈ ಗ್ರಾಮದ ಹಿರಿಯರಾದ ಶ್ರೀ ಎಸ್.ಸಿ. ದೊಡ್ಡಯ್ಯನವರು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿದ್ದವರು, ಪ್ರತಿಭಾವಂತ ಅಧಿಕಾರಿ. ಇದೆಲ್ಲದಕ್ಕಿಂತ ಸುಸಂಸ್ಕೃತ ವ್ಯಕ್ತಿತ್ವ, ಕಲೆ, ಸಾಹಿತ್ಯ, ಸಂಸ್ಕೃತಿ, ಧರ್ಮ ಕೇಂದ್ರೀಯ ನೆಲೆಗಳಲ್ಲಿ ಅಪಾರವಾದ ಪ್ರೀತಿ-ಗೌರವವುಳ್ಳವರು. ಇವರು ತಮ್ಮ ಊರು,

ದೇವಾಲಯ, ಬದುಕಿನ ಬಗೆಗೆ ಅಪಾರ ಒಲವುಳ್ಳ ಪ್ರಗತಿಪರರು. ಸಾಗಸಂದ್ರದ ಕೆಂಪಮ್ಮ ದೇವಾಲಯ ಸಮಿತಿಯ ಅಧ್ಯಕ್ಷರೂ ಹೌದು. ಈಗ ದೇವಾಲಯದ ರಾಜಗೋಪುರ ಬೃಹತ್ ಪ್ರಮಾಣದಲ್ಲಿ ನಿರ್ಮಾಣವಾಗುತ್ತಿದೆ. ಈ ನೆನಪಿಗೆ ದೇವಾಲಯದ ಬಗೆಗೆ ಮಾಹಿತಿಯ ಹಿನ್ನೆಲೆಯಲ್ಲಿ ಪುಸ್ತಕವೊಂದರ ಅಗತ್ಯತೆಯನ್ನು ನನ್ನೊಂದಿಗೆ ಚರ್ಚಿಸಿದರು. ನನ್ನ ವಿದ್ಯಾರ್ಥಿ ಜೀವನದಿಂದಲೂ ಇವರ ಒಡನಾಡಿಯಾಗಿ, ಇವರ ಸಹವಾಸದಲ್ಲಿ ಬೆಳೆದ ನನಗೆ ಈ ಪುಸ್ತಕ ರಚನೆಯ ಸಲಹೆ ನನ್ನಲ್ಲಿ ಅತ್ಯಂತ ಖುಷಿ ತಂದಿತು. ಮಾಹಿತಿ ಸಂಗ್ರಹದಲ್ಲಿ ಗ್ರಾಮಪಂಚಾಯ್ತಿ ಸದಸ್ಯರು, ಈ ದೇವಾಲಯದ ಅಭಿವೃದ್ಧಿ ಸಮಿತಿಯ ಸದಸ್ಯರೂ ಆದ ಎಸ್.ಕೆ.ದೊಡ್ಡಕೆಂಪಯ್ಯ ಹಲವು ವಿಧದಲ್ಲಿ ಸಹಕರಿಸಿದರು. ಮಾಹಿತಿ ನೀಡುವಲ್ಲಿ ಬಣ್ಣದ ಕೆಂಪರಾಜು, ಚೇಳೂರಿನ ಪಟೇಲರ ವಂಶಸ್ಥರಾದ ಶ್ರೀಮತಿ ಗೌರಮ್ಮ, ನಲ್ಲೂರಿನ ಗಾಳಿಸಿದ್ದಪ್ಪನವರ ವಂಶಸ್ಥರಾದ ಶ್ರೀ ಹೇಮಂತಕುಮಾರ್, ನನ್ನ ವಿದ್ಯಾಗುರುಗಳಾದ ಪ್ರೊ|| ಎಸ್. ಬಸವರಾಜು, ದೇವಸ್ಥಾನದ ಕಾರ್ಯಕಾರಿ ಮಂಡಳಿ ಸದಸ್ಯರಾದ ಕೆ.ಸಂಜೀವಯ್ಯ ಅಳಿಲಘಟ್ಟ, ಚೇಳೂರಿನ ಎಸ್.ಕೆ. ನಾರಾಯಣಪ್ಪ, ಸೀಗೇನಹಳ್ಳಿ ಎಸ್.ಕೆ. ಮಹಾಲಿಂಗಪ್ಪ, ಅಳಿಲಘಟ್ಟ ಅ.ನ. ಲಿಂಗಪ್ಪನವರು, ದಂಡಿನಶಿವರದ ಡಿ.ಎಸ್. ಗಂಗಾಧರಗೌಡ, ಮಾರಸಂದ್ರದ ಚಂದ್ರಶೇಖರ್, ಬೆಂಗಳೂರಿನ ಕೆಂಪರಾಮಯ್ಯ ಎ.ಎನ್. ಹಾಗೂ ಚೆಲುವರಾಜೇಗೌಡರು, ಸಾಗಸಂದ್ರದ ಎಸ್.ಆರ್. ಗೋವಿಂದಯ್ಯ, ಕೊಡಿಯಾಲ ಮಿಲ್ಟ್ರಿಸೂರಪ್ಪ, ಕಚ್ಚೇನಹಳ್ಳಿ ಕೆ.ಜಿ. ಸಿದ್ದಪ್ಪ, ಸಾಗಸಂದ್ರದ ಸಾ.ಸಿದ್ದಲಿಂಗಪ್ಪ, ಕಳಸನಹಳ್ಳಿ ಸಿದ್ದಲಿಂಗಪ್ಪ, ನಲ್ಲೂರು ಎಸ್.ಜಿ. ನಟರಾಜ್, ಚೇಳೂರಿನ ಸಿ.ಟಿ. ರಾಜು, ಅಳಿಲಘಟ್ಟದ ಎ.ಸಿ. ಮುರಳೀಧರ್, ಅರ್ಚಕರಾದ ಕೆಂಪಯ್ಯ, ಶ್ರೀ ಬಸವರಾಜು, ಕೆಂಪಯ್ಯ ಬಿ. ಇವರೆಲ್ಲರೂ ಸಹಕರಿಸಿದ್ದಾರೆ. ಇವರೆಲ್ಲರಿಗೂ ನಾನು ಋಣಿಯಾಗಿದ್ದೇನೆ.

**ಡಾ.ಚಿಕ್ಕಣ್ಣ ಯಣ್ಣೆಕಟ್ಟೆ**
ಪ್ರಾಧ್ಯಾಪಕ ಮತ್ತು ಸಂಶೋಧನಾ ಮಾರ್ಗದರ್ಶಿ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ

# ಶ್ರೀಕ್ಷೇತ್ರ ಸಾಗಸಂದ್ರ

ಸಾಗಸಂದ್ರ ಗುಬ್ಬಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ 20 ಕಿ.ಮೀ. ದೂರದಲ್ಲಿದೆ. ನಿಟ್ಟೂರು ಹೋಬಳಿಗೆ ಸೇರಿರುವ ಈ ಗ್ರಾಮ ಕಂದಾಯ ಗ್ರಾಮವಾಗಿದ್ದು ಸುಮಾರು 700 ಎಕರೆ ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಕಪ್ಪು ಮಿಶ್ರಿತ ಕೆಂಪು ಮಣ್ಣಿನ ಭೂಪ್ರದೇಶ. ರಾಗಿ, ಜೋಳ, ಶೇಂಗಾ ಬೆಳೆಗೆ ಉತ್ಕೃಷ್ಟ ನೆಲ. ತಗ್ಗು ಭೂಪ್ರದೇಶದಿಂದ ಕೂಡಿದೆ. ತೆಂಗು, ಅಡಿಕೆ, ಮಾವು, ಹುಣಸೆ, ಹೊಂಗೆ, ಬೇವು, ಹಿಪ್ಪೆ ಮರಗಳಿಂದ ಕೂಡಿದೆ. ಸಮೃದ್ಧ ಸಸ್ಯಭೂನೆಲ. ಪೂರ್ವಕ್ಕೆ ಗ್ಯಾರೇಹಳ್ಳಿ, ಮೂಗನಾಯಕನಕೋಟೆ, ಪಶ್ಚಿಮಕ್ಕೆ ಬಂಡನಹಳ್ಳಿ, ಉತ್ತರಕ್ಕೆ ಅಳಿಲಘಟ್ಟ, ದಕ್ಷಿಣಕ್ಕೆ ಸೌರನಕೋಟೆ, ಅದಲಗೆರೆ ಸಾಗಸಂದ್ರದ ಗಡಿ ಗ್ರಾಮಗಳಾಗಿವೆ. ಐವತ್ತೇಳು ಹಳ್ಳಿಗಳ ಪಂಚಮ ಸ್ಥಾನದಲ್ಲಿರುವ ಸಾಗಸಂದ್ರ ಈಶಾನ್ಯಕ್ಕೆ ಬೆಟ್ಟದಹಳ್ಳಿ ವೀರಭದ್ರೇಶ್ವರ, ವಾಯವ್ಯಕ್ಕೆ ಬ್ರಹ್ಮಲಿಂಗೇಶ್ವರ ಕಂತೆಮಠ, ನೈಋತ್ಯಕ್ಕೆ ಕೋಟೆಗುಡ್ಡದ ರಂಗನಾಥ, ಆಗ್ನೇಯ ಮೂಲೆಗೆ ಮೂಗನಾಯಕನಕೋಟೆ ದೊಡ್ಡಮಠ ಹೀಗೆ ಬಹು ದೈವಗಳ ನಟ್ಟನಡುವಿನ ಗ್ರಾಮ. ನಾಯಕ ಬುಡಕಟ್ಟು ಜನಾಂಗ ಈ ಗ್ರಾಮದ ದೊಡ್ಡ ಸಮುದಾಯವಾಗಿದ್ದು ವೀರಶೈವರು, ಸರ್ಪ ಒಕ್ಕಲಿಗರು, ಮಡಿವಾಳರು ಕಿರು ಸಮುದಾಯದವರಾಗಿದ್ದಾರೆ. ಸಮುದಾಯದ ಆರಾಧನಾ ದೇವರುಗಳಾದ ಕೆಂಪಮ್ಮ, ಈಶ್ವರ, ಭೂತಪ್ಪ, ಆಂಜನೇಯ ಹಾಗೂ ಮಾರಮ್ಮ ಈ ಗ್ರಾಮದ ದೈವಸಂಬಂಧಿ ನೆಲೆಗಳಾಗಿದ್ದು ಕ್ರಮವಾಗಿ ನಾಯಕರು, ವೀರಶೈವರು, ಸರ್ಪ ಒಕ್ಕಲಿಗರು, ಮಡಿವಾಳ ಜನಾಂಗದವರು ಈ ದೇವರುಗಳ ಪೂಜಾ ವ್ಯವಸ್ಥೆಯ ಹೊಣೆಗಾರಿಕೆ ಹೊತ್ತಿದ್ದಾರೆ. ಗ್ರಾಮದ ಪ್ರಧಾನ ದೇವತೆ ಶ್ರೀಕೆಂಪಮ್ಮದೇವಿ. ಗ್ರಾಮದ ಸರ್ವಜನಾಂಗದ ಆರಾಧನಾ ದೇವಿಯಾದಂತೆ ಅಖಂಡ ಕರ್ನಾಟಕದ ಆರಾಧ್ಯ ದೈವವಾಗಿ, ಇಷ್ಟಾರ್ಥ ಶಕ್ತಿಯಾಗಿ ಭಕ್ತಿಭಾವದಿಂದ ನಡೆದುಕೊಳ್ಳುವುದು ಇಲ್ಲಿನ ವಿಶೇಷ. ಸಾಗಸಂದ್ರ ಬಯಲುನಾಡಿನಿಂದ ಕೂಡಿದ ಒಂದು ಸಾಮಾನ್ಯ

ಹಳ್ಳಿ. ರಾಷ್ಟ್ರೀಯ ಹೆದ್ದಾರಿ ನಿಟ್ಟೂರಿನಿಂದ ತಿಪಟೂರು ರಸ್ತೆಯಲ್ಲಿ 3 ಕಿ.ಮೀ ಮುಂದುವರಿದು ತ್ಯಾಗಟೂರು, ಮೂಗನಾಯಕನಕೋಟೆ ಕ್ರಾಸ್‌ನಲ್ಲಿ ಬಲಭಾಗಕ್ಕೆ ತಿರುಗಿ 10 ಕಿ.ಮೀ. ಕ್ರಮಿಸಿದರೆ ಈ ಗ್ರಾಮ ಸಿಕ್ಕುತ್ತದೆ. ಚೇಳೂರು-ಹಾಗಲವಾಡಿ ಮಾರ್ಗದ ಹೊಸಕೆರೆಯಿಂದ ಅಳಿಲಘಟ್ಟದ ಮಾರ್ಗದಲ್ಲಿ 4 ಕಿ.ಮೀ. ದೂರದಲ್ಲಿ ಸಾಗಸಂದ್ರವಿದೆ.

ಸಾಗಸಂದ್ರ ಪದನಾಮ ಈ ಗ್ರಾಮಕ್ಕೆ ಹೇಗೆ ಪ್ರಾಪ್ತವಾಯಿತೆಂಬುದಕ್ಕೆ ಯಾವುದೇ ಖಚಿತ ದಾಖಲೆಗಳಿರುವುದಿಲ್ಲ. ಆದರೂ ಸಹ ಚಾಲ್ತಿಯಲ್ಲಿರುವ ಜನಪದ ಐತಿಹ್ಯದ ಪ್ರಕಾರ ಈ ಸ್ಥಳದಲ್ಲಿ ಸಾಗಸಾಗಿಯರೆಂಬ ಶಿವಶರಣರು ವಾಸವಾಗಿದ್ದರು. ವಿಜಯನಗರ ಸಾಮ್ರಾಜ್ಯದ ಒಬ್ಬ ರಾಜ ಇವರು ವಾಸವಿದದ್ ಜಾಗದ ಮೇಲ್ಭಾಗದಲ್ಲಿ ಹರಿಯುತ್ತಿದ್ದ ಎರಡು ಹಳ್ಳಗಳನ್ನು ಒಟ್ಟುಗೂಡಿಸಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿದ. ಸಮುದ್ರದೋಪಾದಿಯಲ್ಲಿ ಶೇಖರಣೆಯಾದ



ಹೊಸದಾಗಿ ನಿರ್ಮಾಣಗೊಂಡಿರುವ ಕೆಂಪಮ್ಮ ದೇವಾಲಯದ ರಾಜಗೋಪುರ

ಈ ಜಲರಾಶಿಯನ್ನು ಕಂಡು ಹರ್ಷಿತನಾದ ರಾಜನು ಈ ಕೆರೆಗೆ ಇಲ್ಲಿ ವಾಸವಿದ್ದ ಸಾಗ-ಸಾರಿ ಶಿವಶರಣರ ನೆನಪನ್ನು ಚಿರಸ್ಥಾಯಿಯಾಗಿಸುವ ಉದ್ದಿಶ್ಯದಿಂದ ಈ ಕೆರೆಗೆ ಸಾಗಸಮುದ್ರವೆಂದು ನಾಮಕರಣ ಮಾಡಿದ ಕಾಲಾನಂತರದಲ್ಲಿ ಸಾಗಸಮುದ್ರ ನಾಮವು ಪರಿವರ್ತನೆಗೊಂಡು ಸಾಗಸಂದ್ರವೆಂದು ಕರೆಯಲಾಯಿತು. ಇದೇ ಹೆಸರು ಇಂದಿಗೂ ಮುಂದು ವರಿದಿದೆ. ಅದೇ ವಿಜಯನಗರದ ರಾಜನು ಕೆರೆಯನ್ನು ಕಟ್ಟಿಸಿದ ನಂತರ ಈ ಭಾಗದಲ್ಲಿ ನೆಲೆಸಿರುವ ಊರಿನ ಜನಗಳ ಧಾರ್ಮಿಕ ಕಾರ್ಯಕ್ರಮಗಳ ಉಪಯೋಗಕ್ಕಾಗಿ ಕೆರೆಯ ಹಿಂಬದಿಯಲ್ಲಿ ಒಂದು ಶಿವದೇವಾಲಯುವನ್ನು ಒಂದೇ ರಾತ್ರಿಯಲ್ಲಿ ನಿರ್ಮಿಸಿದನೆಂದು, ಈ ದೇವಾಲಯವನ್ನು ಕಟ್ಟುವುದಕ್ಕೆ ಬೇಕಾಗಿದ್ದ ನೀರಿಗಾಗಿ ದೇವಾಲಯುದ ಪಕ್ಕದಲ್ಲಿ ಒಂದು ಚಿಕ್ಕ ಬಾವಿಯನ್ನು ತೆಗೆಸಿ ಬಾವಿಯ ಮಣ್ಣುಗಡ್ಡೆಗಳನ್ನು ಕಲ್ಲಿನಿಂದ ಗೋಡೆ ಕಟ್ಟುವುದರ ಮೂಲಕ ರಕ್ಷಿಸಿದ್ದನೆಂದು, ಇದರಿಂದ ಈ ಬಾವಿಯುಲ್ಲಿ ಅಮೃತದಷ್ಟೇ ಸಿಹಿಯಾದ ನೀರು ಇತ್ತೀಚಿನವರೆಗೆ ಲಭ್ಯವಿದ್ದಿತೆಂದು ಈ ನೀರಿನ ಸೇವನೆಯಿಂದ ಅನೇಕ ರೋಗ-ರುಜಿನಗಳು ವಾಸಿಯಾಗುತ್ತಿದ್ದವೆಂದು, ಈ ಬಾವಿಯ ನೀರನ್ನು ಕುಡಿದಿದ್ದ ಹಳ್ಳಿಯ ಅನೇಕ ಹಿರಿಯರು ಜ್ಞಾಪಿಸಿಕೊಳ್ಳುತ್ತಾರೆ. ಈ ಶಿವದೇವಾಲಯವು ವಿಜಯನಗರದ ಕಾಲದ ವಿನ್ಯಾಸವನ್ನು ಹೊಂದಿದ್ದು ಈ ಶಿವದೇವಾಲಯವನ್ನು ಏಕನಾಥೇಶ್ವರ ದೇವಾಲಯವೆಂದು ನಾಮಕರಣ ಮಾಡಿ ಈ ದೇವಸ್ಥಾನದ ಪೂಜಾ ಕೈಂಕರ್ಯ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ದತ್ತಿಯ ರೂಪದಲ್ಲಿ ಭೂಮಿಯನ್ನು ನೀಡಿದನೆಂದೂ ಹೇಳಲಾಗುತ್ತಿದೆ.

ಸಾಗಸಂದ್ರ ಹಳೆಯ ಊರಿನ ದಿಕ್ಕಿನಲ್ಲಿ ಒಂದು ಶಿಥಿಲವಾಗಿರುವ ಮಾಸ್ತಿಕಲ್ಲನ್ನು ಪರೀಕ್ಷಿಸಿದಾಗ ಈ ಗ್ರಾಮದಲ್ಲಿ ಅನೇಕ ವೀರಪುರುಷರು, ವೀರ ಮಹಿಳೆಯರು ವಾಸಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಇಲ್ಲಿನ ಸ್ತ್ರೀಯರು ಪತಿಪಾರಾಯಣೆಯರಾಗಿ ತಮ್ಮ ಪತಿಯಂದಿರು ಯುದ್ಧ ಮುಂತಾದ ಕಡೆ ಶೌರ್ಯ ಪ್ರದರ್ಶಿಸಿ ಹುತಾತ್ಮರಾದ ವೇಳೆ ಸಹಗಮನ ಮಾಡುತ್ತಿದ್ದರೆಂದು

ಊಹಿಸಬಹುದಾಗಿದೆ. ಇಲ್ಲಿ ಶಿಥಿಲಾವಸ್ಥೆಯಲ್ಲಿ ನಿಂತಿರುವ ಮಾಸ್ತಿಕಲ್ಲು ಇಂತಹ ಒಬ್ಬ ಪತಿವ್ರತಾ ಶಿರೋಮಣಿ ಮಹಿಳೆಯು ತನ್ನ ಪತಿಯ ವೀರಮರಣದ ನಂತರದಲ್ಲಿ ಸಹಗಮನ ಮಾಡಿರಬಹುದು. ಆ ಪತಿವ್ರತಾ ಶಿರೋಮಣಿಯ ನೆನಪಿಗಾಗಿ ಈ ಮಾಸ್ತಿಕಲ್ಲನ್ನು ಸ್ಥಾಪಿಸಿರಬಹುದೆಂದು ಊಹಿಸಬಹುದಾಗಿದೆ.

ಕೆಂಪಮ್ಮ ದೇವಾಲಯದ ಪ್ರಾಂಗಣದಲ್ಲಿರುವ ಅಕ್ಕನವರ ಶಿಲಾ ವಿಗ್ರಹವನ್ನು ನೋಡಿದರೆ, ಶ್ರೀ ಕೆಂಪಮ್ಮನು ಇಲ್ಲಿಗೆ ಬಂದು ನೆಲೆಸುವ ಮುನ್ನವೇ ಈ ವಿಗ್ರಹಕ್ಕೆ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದವೆಂದೂ, ಈ ಅಕ್ಕನವರು ತಮ್ಮ ಗಂಡನು ವೀರಮರಣ ಹೊಂದಿದ ಮೇಲೆ ಸಹಗಮನ ಮಾಡಿದ ಒಬ್ಬ ಪತಿವ್ರತಾ ಶಿರೋಮಣಿಯನ್ನು ದೇವರಾಗಿಸಿ ವಿಗ್ರಹವನ್ನು ಕಡೆದು ಅಲ್ಲಿದ್ದ ಜನ ಪೂಜೆ ಮಾಡುತ್ತಿದ್ದರೆಂದೂ ಗೌರವಾನ್ವಿತರಾದ ಹೆಣ್ಣುಮಕ್ಕಳನ್ನು ಅಕ್ಕ ಎಂದು ಕರೆಯುವುದು ರೂಢಿಯಾದ್ದರಿಂದಲೂ ಈ ತಾಯಿಯು ಮಾಂಸಾಹಾರಿಯಾಗಿದ್ದುದರಿಂದ ಆಕೆಗೆ ಮಾಂಸದ ಎಡೆಯನ್ನು ಮಾಡಲಾಗುತ್ತಿತ್ತೆಂಬುದು ಅಕ್ಕನವರ ಗುಡಿ ಎಂದು ಪ್ರಸಿದ್ಧಿ ಹೊಂದಿತ್ತೆಂದು ಜನಪದರ ನಂಬಿಕೆಯಾಗಿದೆ.

ಸಾಗಸಂದ್ರದಮ್ಮ ಎಂಬ ಹುಟ್ಟು ಹೆಸರಿನಿಂದಲೇ ಪ್ರಸಿದ್ಧವಾಗಿರುವ ಕೆಂಪಮ್ಮ ದೇವತೆಯ ಬಗೆಗೆ ಸ್ಥಳನಾಮ ಐತಿಹ್ಯವಾಗಿ ದಂತಕಥೆಗಳಿವೆ. ಇದೊಂದು ಗ್ರಾಮದೇವತೆಯ ಸ್ವರೂಪದಲ್ಲಿದ್ದರೂ ಇದರ ಒಕ್ಕಲುಗಳು, ಕ್ಷೇತ್ರವ್ಯಾಪ್ತಿ, ಅಖಂಡ ಕರ್ನಾಟಕವನ್ನು ವ್ಯಾಪಿಸಿದೆ. ದೇವಿಯ ಮಹಿಮೆ, ಪವಾಡ, ಕಷ್ಟ ಪರಿಹಾರಗಳ ಮೂಲಕ ಅಪಾರ ಒಕ್ಕಲುಗಳನ್ನು, ಶಿಶು ಮಕ್ಕಳನ್ನು, ಕೆಂಪಮ್ಮದೇವಿ ಭಕ್ತ ಸಮೂಹವನ್ನು ಒಳಗೊಂಡಿದೆ. ಭಕ್ತರು ತಮಗೊದಗಿದ ನಾನಾ ಕಷ್ಟಗಳಿಗೆ ಪರಿಹಾರ ಪಡೆದ ಬಗೆಗೆ ನಾನಾ ಬಗೆಯಲ್ಲಿ ವರ್ಣಿಸುತ್ತಾರೆ. ದೇವಿಯ ಭಕ್ತಿಯ ಮಹಿಮೆ ಅಪಾರವಾದುದೆಂದು ಹರ್ಷ, ಹೆಮ್ಮೆ ವ್ಯಕ್ತ ಪಡಿಸುತ್ತಾರೆ. ಇದೊಂದು ಜಾತ್ಯಾತೀತ ದೈವ. ಇದರ ಒಕ್ಕಲುಗಳಲ್ಲಿ ಬ್ರಾಹ್ಮಣ, ವೀರಶೈವ, ನಾಯಕ, ಕುರುಬ, ಒಕ್ಕಲಿಗ, ಆದಿಕರ್ನಾಟಕ, ಆದಿದ್ರಾವಿಡ ಹೀಗೆ

ನಾನಾ ಕುಲ ಮೂಲದವರು ಈ ದೇವಿಯ ಒಕ್ಕಲುಗಳು ಎಂಬುದೇ ಇದರ ವಿಶೇಷ. ಅಪ್ಪಟ ಶೈವ ಪರಂಪರೆ. ಈ ದೇವಿ ಶಿವನ ಕುಮಾರಿ ಎಂದೇ ಕರೆಸಿಕೊಳ್ಳುವ ಶೈವ ಆಚಾರ-ವಿಚಾರಗಳ ಆಚರಣೆ ರೂಢಿಯಲ್ಲಿದೆ.

## ಕೆಂಪಮ್ಮ ದೇವಿಯ ಉಗಮ:

ಕೆಂಪಮ್ಮ ದೇವಿಯ ಉಗಮ, ಒಡಮೂಡಿರುವುದರ ಬಗೆಗೆ ಈ ಭಾಗದಲ್ಲಿ ಏಕರೂಪದ ದಂತಕಥೆಯಿದೆ. ಮಾನವರೂಪಿಯಾದ ಕೆಂಪಮ್ಮ ಚೇಳೂರಿನ ಹೆಣ್ಣುಮಗಳು. ಆರಂಭದಿಂದಲೂ ಶಿವಭಕ್ತಿ, ವೈರಾಗ್ಯದ ಬದುಕನ್ನು ನಡೆಸುತ್ತಿದ್ದ ಹೆಣ್ಣುಮಗಳು. ವೀರಶೈವ ಪರಂಪರೆಗೆ ಸೇರಿದವಳು. ಮಹಾಶಿವಭಕ್ತರು, ಸುಸಂಸ್ಕೃತರೂ ಆದ ಕೆಂಪಮ್ಮನ ತಂದೆತಾಯಿಗಳು ವಯಸ್ಸಿಗೆ ಬಂದ ಹೆಣ್ಣು ಮಗಳಿಗೆ ಲಗ್ನ ಮಾಡಲು ನಿಶ್ಚಯಿಸುತ್ತಾರೆ. ಮೊದಲಿನಿಂದಲೂ ಶಿವಧ್ಯಾನ,



ಕೆಂಪಮ್ಮ ಮೂಲ ಹುತ್ತದ ದೇವಸ್ಥಾನ



ಕೆಂಪಮ್ಮ ಶಿವೈಕ್ಯಳಾಗಿ ಹುತ್ತದೇವತೆಯಾಗಿರುವ ಸ್ಥಳ

ಶಿವಪೂಜೆಗಳಲ್ಲಿ ಆಸಕ್ತಳಾಗಿದ್ದ ಮಗಳ ಮನಸ್ಸು ಲೌಕಿಕ ಬದುಕಿನ ಕಡೆ ಆಸಕ್ತಿಯನ್ನು ಕಳೆದುಕೊಂಡಿದೆ ಎಂಬ ಸತ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾದ ತಂದೆ-ತಾಯಿಗಳು ತಮ್ಮ ಕರ್ತವ್ಯಪಾಲನಾ ದೃಷ್ಟಿಯಿಂದ ಕೆಂಪಮ್ಮನನ್ನು ಮೂಗನಾಯಕನ ಕೋಟೆಯ ತಮ್ಮ ಸಂಬಂಧಿಕರೊಬ್ಬರಿಗೆ ಕೊಟ್ಟು ಲಗ್ನ ಮಾಡಲು ನಿರ್ಧರಿಸುತ್ತಾರೆ. ತನಗೆ ಇಷ್ಟವಿಲ್ಲದಿದ್ದರೂ ಸಹ ತಂದೆ-ತಾಯಿಗಳಿಗೆ ವಿಧೇಯಳಾಗಿದ್ದ ಕೆಂಪಮ್ಮ ತನ್ನ ಮನದ ಅನಿಸಿಕೆಯನ್ನು

ತಂದೆ-ತಾಯಿಗಳಿಗೆ ತಿಳಿಸಲಾಗದೆ ಮೌನಕ್ಕೆ ಶರಣಾಗಿ ಸುಮ್ಮನಿರುತ್ತಾಳೆ. ಇವಳ ಮೌನವೇ ಇವಳ ಒಪ್ಪಿಗೆ ಎಂದು ತಿಳಿದ ತಂದೆ-ತಾಯಿಗಳು ತಾವು ನಿರ್ಧರಿಸಿದ್ದ ಮೂಗನಾಯಕನಕೋಟೆಯ ವರನಿಗೆ ಕೊಟ್ಟು ಲಗ್ನವನ್ನು ನೆರವೇರಿಸುತ್ತಾರೆ.

ಕೆಲವು ದಿನಗಳ ನಂತರ ಸಂಪ್ರದಾಯದಂತೆ ಗಂಡಿನ ತಂದೆಯು ಸೊಸೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಚೇಳೂರಿಗೆ ಬರುತ್ತಾರೆ. ತಂದೆ-ತಾಯಿಗಳು ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡು ಸಿದ್ಧರಾಗಿ ಮಗಳಿಗೆ ಮಾನವ ಜೊತೆ ಹೋಗಲು ಸಿದ್ಧತೆ ಮಾಡಿಕೊಳ್ಳಲು ತಿಳಿಸುತ್ತಾರೆ. ಕೆಂಪಮ್ಮನು ಒಲ್ಲದ ಮನಸ್ಸಿನಿಂದ ಮಾವನ ಜೊತೆ ಹೊರಡಲು ಸಿದ್ಧಳಾಗುತ್ತಾಳೆ. ಅಂದಿನ ಕಾಲದಲ್ಲಿ ಯಾವುದೇ ವಾಹನಗಳ ವ್ಯವಸ್ಥೆ ಇಲ್ಲದಿದ್ದರಿಂದ ಕಾಲು ನಡಿಗೆಯಲ್ಲಿ ಪ್ರಯಾಣ ಮಾಡುತ್ತಿರುತ್ತಾರೆ. ಒಲ್ಲದ ಮನಸ್ಸಿನಿಂದಲೇ ಬರುತ್ತಿದ್ದ ಕೆಂಪಮ್ಮನಿಗೆ ಶಿವಧ್ಯಾನವನ್ನು ಬಿಟ್ಟು ಬೇರೆ ಆಲೋಚನೆ ಇರಲಿಲ್ಲ. ಗಂಡನ ಮನೆಗೆ ಈಗ ಹೋದದ್ದೇ ಆದರೆ ನಾನು ಶಿವಧ್ಯಾನದಲ್ಲಿ ಮಗ್ನಳಾಗಲು ಸಾಧ್ಯವಿಲ್ಲ. ಲೌಕಿಕ ಬದುಕಿಗೆ ಸಿಲುಕಿ ನನ್ನ ಜೀವನವು ನರಕವಾಗುವುದೆಂದು ಭಾವಿಸಿಕೊಂಡು ನಡುಗಿಹೋಗುತ್ತಾಳೆ. ಈಗ ಸಾಗಸಂದ್ರದ ಕೆಂಪಮ್ಮನ ತೇರುಬೀದಿಯಲ್ಲಿರುವ ಹುತ್ತದ ಗುಡಿಯ ಪ್ರದೇಶಕ್ಕೆ ಬರುವ ವೇಳೆಗೆ ಕೆಂಪಮ್ಮನ ಮನಸ್ಸು ಸ್ಥಿರವಾಗುತ್ತದೆ. ಸಂಸಾರ ಜೀವನವನ್ನು ಶಾಶ್ವತವಾಗಿ ತಿರಸ್ಕರಿಸಲು ನಿರ್ಧರಿಸುತ್ತಾಳೆ. ಅದೇ ವೇಳೆಗೆ ಆಕೆಯು ಅಲ್ಲಿದ್ದ ಒಂದು ದೊಡ್ಡ ಹುತ್ತದ ಕೋವೆಯನ್ನು ನೋಡುತ್ತಾಳೆ. ಆ ಹುತ್ತದ ಕೋವೆಯಲ್ಲಿ ಪ್ರವೇಶ ಮಾಡಿ ಶಿವನಲ್ಲಿ ಐಕ್ಯವಾಗಬೇಕೆಂದು ನಿರ್ಧರಿಸಿ ಮುಂದೆ ಹೋಗುತ್ತಿದ್ದ ಮಾವನಿಗೆ 'ನಾನು ಬಹಿರ್ದೆಸೆಗೆ ಹೋಗಬೇಕಾಗಿದೆ, ನೀವು ಮುಂದೆ ನಡೆಯುತ್ತಿರಿ, ನಾನು ಬರುತ್ತೇನೆ' ಎಂದು ಹೇಳಿ ಮಾವನು ಮುಂದೆ ಹೋದದ್ದನ್ನು ದೃಢಪಡಿಸಿಕೊಂಡು ಕೂಡಲೇ ಆ ಹುತ್ತದ ಕೋವೆಯನ್ನು ಪ್ರವೇಶ ಮಾಡಿ ಆಳದವರೆಗೆ ಉಳಿದು ಹೋಗಿ ಹುತ್ತದಲ್ಲಿ ಲೀನವಾಗುತ್ತಾಳೆ.

ಕೆಂಪಮ್ಮ ಬಹಳ ಹೊತ್ತಿನ ತನಕ ಎದ್ದು ಬಾರದಿರಲು ಗಾಬರಿ ಹಾಗೂ ಸಂಶಯಗೊಂಡ ಮಾವ ಹಿಂತಿರುಗಿ ನೋಡಿದನು. ಆಕೆಯ ಸುಳಿವೇ ಕಾಣಲಿಲ್ಲ. ಗಾಬರಿಗೊಂಡು ಹಿಂದಕ್ಕೆ ಬಂದು ಆಕೆ ನಡೆದುಕೊಂಡು ಬರುತ್ತಿದ್ದ ದಾರಿಯ ಸುತ್ತಮುತ್ತ ನೋಡುತ್ತಾನೆ. ದಾರಿಯ ಬಲಬದಿಗೆ ಎರಡಾಳು ಉದ್ದದ ಒಂದು ದೊಡ್ಡ ಹುತ್ತ ಕೋವೆಗಳಿಂದ ಕೂಡಿದ್ದು ಕೆಂಪಮ್ಮ ಆ ಹುತ್ತದ ಕೋವೆಯೊಳಗೆ ಹೋಗಿರುವುದು ಆಕೆಯ ಸೀರೆಯ ತುಂಡು, ಚೆಲ್ಲಾಡಿರುವ ಹೂವು, ಒಡೆದು ಬಿದ್ದಿರುವ ಬಳೆಯ ಚೂರುಗಳು ಇವುಗಳಿಂದ ಕಂಡುಬರುತ್ತದೆ. ಇದರಿಂದ ಮತ್ತೂ ಆತಂಕಗೊಂಡ ಈಕೆಯ ಮಾವ ಆ ಹುತ್ತದ ಕೋವೆಯನ್ನು ವೀಕ್ಷಿಸಲಾಗಿ ಕೆಂಪಮ್ಮ ಆ ಹುತ್ತದಲ್ಲಿ ಐಕ್ಯಳಾಗಿರುವ ನೋಟ, ಆಕೆಯ ಸೀರೆಯ ಸೆರಗಿನ ಮೂಲಕ ದರ್ಶನವಾಗುತ್ತದೆ. ಆತನಿಗೆ ಗಾಬರಿಯಾಗಿ ಆ ವಿಚಿತ್ರ ನಡೆ ಒಂದು ಕಡೆಯಾದರೆ, ಸೊಸೆ ಇಲ್ಲವಾದ ಭಯ, ಆಕೆಯ ತವರು ಮನೆಯವರಿಗೆ ಏನೆಂದು ಉತ್ತರಿಸಬೇಕೆಂಬ ಆತಂಕವಾಗುತ್ತದೆ. ಮತ್ತೆ ಮತ್ತೆ ಹುತ್ತದ ಬಳಿಯೇ ನಿಂತು ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ಹೀಗೆ ಮಾವನ ತೀವ್ರ ದುಃಖ ಆಲಿಸಿದ ಕೆಂಪಮ್ಮ ಹೀಗೆ ಹೇಳುತ್ತಾಳೆ. 'ನಾನು ಶಿವನ ವರದಿಂದ ಹುಟ್ಟಿದವಳು. ನನಗೆ ಲಿಂಗಪೂಜೆ, ಶಿವಧ್ಯಾನದ ಹೊರತು ಬೇರೆ ಕೆಲಸ ಇಷ್ಟವಾಗುವುದಿಲ್ಲ. ಮದುವೆಯ ಬಗೆಗೂ ಮೋಹವಿಲ್ಲ. ಗಂಡ, ಮಕ್ಕಳು, ಸಂಸಾರ ಬಂಧನಕ್ಕೆ ನನ್ನನ್ನು ಸಿಕ್ಕಿಸಬಾರದೆಂದು ಬಗೆಬಗೆಯಾಗಿ ಕೇಳಿಕೊಂಡರೂ ನನಗೆ ಮದುವೆ ಮಾಡಿದರು. ಶಿವಧ್ಯಾನ, ಪೂಜೆಯನ್ನು ಬಿಟ್ಟರೆ ನನಗೆ ಸಂಸಾರ ಇಷ್ಟವಾಗುತ್ತಿಲ್ಲ. ನನಗೆ ಸಂಸಾರ ಎಂಬುದು ಹಿಂಸೆಯ ಸಂಗತಿ. ನಾನು ನನ್ನ ತವರು ನೆಲದಲ್ಲಿಯೇ ಶಿವೈಕ್ಯಳಾಗಬೇಕೆಂದು ತೀರ್ಮಾನಿಸಿದ್ದೆ. ಆದರೆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎಂದು ನನ್ನ ಹೆಣವನ್ನಾದರೂ ಗಂಡನ ಮನೆಯವರು ತಂದು ಸಮಾಧಿ ಮಾಡಿ ನಿಮ್ಮವಳನ್ನಾಗಿಸಿಕೊಳ್ಳುತ್ತೀರಿ ಎಂದು ಅಂಜಿದೆ. ಆದ್ದರಿಂದ ಇಲ್ಲಿಂದ ಮುಂದಕ್ಕೆ ಬರಲಾರದೆ ಇಲ್ಲಿ ಸೇರಿದ್ದೇನೆ. ಇದೇ ನನ್ನ ಪಾಲಿನ ಕೈಲಾಸ, ಶಿವಾಲಯ.

ನಾನು ಶಿವಗಣಗಳ ಸೇವೆಗಾಗಿ ಈ ಭೂಲೋಕದಿಂದ ದೇವಲೋಕಕ್ಕೆ ಹೋಗುತ್ತಿದ್ದೇನೆ. ಹುಟ್ಟಿದ ಮನೆ ಚೇಳೂರಿಗೂ, ಕೊಟ್ಟು ಮದುವೆ ಮಾಡಿದ ಮೂಗನಾಯಕನ ಕೋಟೆಗೂ ಕೀರ್ತಿ ತರಬಯಸುತ್ತೇನೆ. ನಾನು ಶಿವೈಕ್ಯಳಾದರೂ ದೇವರೂಪದಲ್ಲಾದರೂ ನಿಮ್ಮಗಳ ಸೇವೆ ಮಾಡುತ್ತೇನೆ. ನನ್ನನ್ನು ನಂಬಿದ, ಆಶ್ರಯಿಸಿ ಬರುವ ಎಲ್ಲ ಭಕ್ತರಿಗೂ ಅವರವರ ಇಷ್ಟಾರ್ಥ ಈಡೇರಿಸುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುತ್ತೇನೆ. ನಾನು ಆತ್ಮಹತ್ಯೆ ಮಾಡಿಕೊಂಡವಳೆಂಬ ಕಳಂಕ ಬೇಡ. ಇದನ್ನು ನೀವು ಸಮುದಾಯಕ್ಕೆ ತಿಳಿಸಿ. ನನ್ನ ಹೆಸರಿನಲ್ಲಿ ಗುಡಿ ನಿರ್ಮಿಸಿ, ಪೂಜೆಗೆ ಅಣಿಮಾಡಬೇಕು' ಎಂದು ಅಪ್ಪಣೆ ನೀಡಿ, ನೋಡು ನೋಡುತ್ತಿದ್ದಹಾಗೆ ಒಂದು ಸಣ್ಣ ಸುಳಿವೂ ಇಲ್ಲದ ಹಾಗೆ ಕೆಂಪಮ್ಮ ಹುತ್ತದ ಕೋವೆಯೊಳಗೆ ಕಣ್ಮರೆಯಾದಳು.

ಹೀಗೆ ಮರೆಯಾದ ಕೆಂಪಮ್ಮನ ಬಗೆಗೆ ಅವಳ ಮಾವ ತನ್ನ ಗ್ರಾಮವಾದ ಮೂಗನಾಯಕನಕೋಟೆಗೆ ಬಂದು ನಡೆದ ಸಂಗತಿಗಳನ್ನು ತಿಳಿಸಿದನು. ಇದೊಂದು ಬಗೆಯ ನಂಬುವ ಹಾಗೂ ನಂಬಬಾರದ ಸಂಗತಿಯಾಗಿ ಎಲ್ಲರಿಗೂ ಕುತೂಹಲ ಮೂಡಿತು. ಮತ್ತೆ ಕೆಂಪಮ್ಮನ ತವರು ಮನೆ ಚೇಳೂರಿಗೂ ಸುದ್ದಿ ಮುಟ್ಟಿಸಿದರು. ಅವರಿಗೆ ಇದೊಂದು ಆತಂಕದ ಸಂಗತಿಯಾಗಿ ತೋರಿತು. ಗಂಡನ ಮನೆಯವರು ಕೆಂಪಮ್ಮನಿಗೆ ತೊಂದರೆ ನೀಡಿ, ಆಕೆಯ ಸಾವಿಗೆ ಕಾರಣರಾಗಿರಬಹುದೆ ಎಂತೆಲ್ಲಾ ಯೋಚಿಸಿದರು. ಕೆಂಪಮ್ಮ ತಾನು ಬೆಳೆದು ಬುದ್ದಿಬಂದ ದಿನಗಳಿಂದಲೂ ಮನೆಯಿಂದ ಸ್ವಲ್ಪ ದೂರವಿದ್ದ ಸಂಗಮೇಶ್ವರನ ಗುಡಿಗೆ ಹೋದವಳು ಅಲ್ಲೇ ಕೂರುತ್ತಿದ್ದಳು. ಕಣ್ಣು ಮುಚ್ಚಿ ಕೂತವಳು ಮೇಲೇಳುವುದಕ್ಕೆ ಅಪಾರ ಸಮಯ ತೆಗೆದುಕೊಳ್ಳುತ್ತಿದ್ದಳು. ಮೊದಲಿಂದಲೂ ಜಂಗಮ ಪ್ರೇಮಿ. ಭಿಕ್ಷೆಗೆ ಯಾರಾದರೂ ಜಂಗಮರು ಬಂದರೆ, ತನ್ನ ಹತ್ತಿರದ ಬಂಧು ಎಂಬಂತೆ ಆದರಿಸುತ್ತಿದ್ದಳು. ಅವರಿಗೆಲ್ಲಾ ಅಕ್ಕಿಪಡಿ, ಹಣ್ಣು ನೀಡುತ್ತಿದ್ದಳು. ಯಾವಾಗಲೂ ಶಿವಧ್ಯಾನ. ಇದನ್ನು ಗಮನಿಸಿಯೇ ಮನೆಯವರು ಮಗಳು ಸನ್ಯಾಸಿನಿಯಾಗಬಾರದು ಎಂದು

ಬೇಗ ಮದುವೆಯನ್ನು ಮಾಡಿದ್ದರು. ಹೀಗಾಗಿ ಕೆಂಪಮ್ಮ ಸಾಗಸಂದ್ರದ ದಿಣ್ಣೆಯ ಹುತ್ತದ ಕೋವೆಯಲ್ಲಿ ಶಿವೈಕ್ಯಳಾಗಿದ್ದಾಳೆ ಎಂಬ ಸಂಗತಿ ಗಾಬರಿ, ಆತಂಕ, ನೋವಿನ ಸಂಗತಿಯಾಗಿ ಚೇಳೂರಿನ ಜನಗಳನ್ನು ಕಾಡುತ್ತದೆ. ಗೌಡಾಳಿಕೆ, ಪಟೇಲರು ಗಾಡಿ ಕಟ್ಟಿಕೊಂಡು ಸಾಗಸಂದ್ರಕ್ಕೆ ಬರುತ್ತಾರೆ. ಅಷ್ಟು ವೇಳೆಗೆ ಕೆಂಪಮ್ಮ ಹುತ್ತದೊಳಗೆ ಪ್ರವೇಶಿಸಿರುವ ವಿಷಯ ಸುತ್ತಲ ಹಳ್ಳಿಗಳಿಗೆಲ್ಲಾ ತಿಳಿದು, ಜನಗಳ ಜಾತ್ರೆಯೇ ಸೇರಿರುತ್ತದೆ. ಚಿಕ್ಕ ಚಿಕ್ಕ ಕೋವೆ, ಅದರೊಳಗೆ ಮನುಷ್ಯರು ಹೋಗುವುದು ಅಸಾಧ್ಯ ಎಂದು ಕೆಲವರ ಅಭಿಪ್ರಾಯ. ಇನ್ನು ಕೆಲವರು ದೇವರ ಇಚ್ಛೆಯಂತೆ ಚಿಕ್ಕ ಕೋವೆ ದೊಡ್ಡದೂ ಆಗಬಹುದು ಎಂಬ ತರ್ಕ. ಹೀಗೆ ತರ್ಕ, ವಾದ-ವಿವಾದಗಳಲ್ಲಿ ಸಾಗಸಂದ್ರದ ಹುತ್ತದ ಬಾರೆ ಒಂದು ಜಾತ್ರೆಯಾಗಿ ಪರಿವರ್ತಿತವಾಗುತ್ತದೆ. ಆ ವೇಳೆಗೆ ಚೇಳೂರಿನಿಂದ ಬಂದವರು ಆ ಹುತ್ತವನ್ನು ನೋಡಿದರು. ಅವರಿಗೆ ಅದ ದೇವರ ಗುಡಿಯಾಗಿ, ಆ ಗುಡಿಯಲ್ಲಿ ಕೆಂಪಮ್ಮ ಶಿವ-ಪಾರ್ವತಿಯರೊಂದಿಗೆ, ಶಿವಗಣಗಳೊಂದಿಗೆ ಕೂಡಿ ಕೊಂಡಿರುವಂತೆ ಕಂಡುಬರುತ್ತದೆ. ಬೇರೆಯವರಿಗೆ ಹುತ್ತದಂತೆ ಕಂಡರೆ ಚೇಳೂರಿನವರಿಗೆ ಶಿವಮಂದಿರವಾಗಿ, ಕೆಂಪಮ್ಮ ಪಾರ್ವತಿಯಂತೆ ಕಾಣುತ್ತಾಳೆ. ಮಾತುಕತೆ ಮುಗಿಸಿ ಎಲ್ಲರೂ ಕೂಡಿ ಕೆಂಪಮ್ಮನು ಶಿವೈಕ್ಯಳಾದ ಹುತ್ತಕ್ಕೆ ಮೊದಲ ಪೂಜೆಯನ್ನು ಮೂಗನಾಯಕನಕೋಟೆಯ ಕೆಂಪಮ್ಮನ ಗಂಡ, ಮಾವ ಮಾಡಿದರು. ನಂತರ ತವರು ಮನೆಯವರು ಪೂಜೆ ನೆರವೇರಿಸಿದರು. ಹರಿವಾಣಗಳಲ್ಲಿ ಹಾಲು-ತುಪ್ಪವನ್ನು ಕೋವೆಯ ಮೂಲಕ ಹಾಕಿದರು. ಕೆಂಪಮ್ಮ ಕೆಲವರಿಗೆ ಸಮಾಧಿಯಂತೆ ಕಂಡರೆ, ಕೆಲವರಿಗೆ ಶಿವಗುಡಿಯಂತೆ ಕಂಡಿತು.

ಹೀಗೆ ಕೆಂಪಮ್ಮ ಐಕ್ಯಳಾದ ಜಾಗವೇ ಸಾಗಸಂದ್ರದ ಕೆಂಪಮ್ಮ ದೇವಾಲಯ.

## ಒಂಟೆತ್ತಿನ ಗಾಡಿ ವ್ಯಾಪಾರಸ್ಥರು - ಗುಡಿ ನಿರ್ಮಾಣ:

ಸಾಗಸಂದ್ರದ ಕೆಂಪಮ್ಮದೇವಿಯ ಗುಡಿ ನಿರ್ಮಾಣದ ವಿಚಾರದಲ್ಲಿ ಒಂದು ಮೌಖಿಕ ಪರಂಪರೆ ಇದೆ. ಒಂದು ಮೂಲ, ಹುತ್ತದಲ್ಲಿ ಕೆಂಪಮ್ಮದೇವಿ ಶಿವೈಕ್ಯಳಾಗಿ ದೇವತೆಯಾದದ್ದು ಹಾಗಾಗಿಯೇ ಮೊದಲಿಗೆ ಹುತ್ತಕ್ಕೆ ಪೂಜೆ ನಡೆಯುತ್ತದೆ. ಪ್ರಧಾನವಾಗಿ ಮಕ್ಕಳ ಫಲ, ಸಂತಾನದ ಪ್ರಾಪ್ತಿಯ ಮೂಲದಿಂದಲೇ ಕೆಂಪಮ್ಮ ಪ್ರಸಿದ್ಧಳಾದಳು. ಕೆಂಪಮ್ಮ ಶಿವೈಕ್ಯಳಾದಳೆಂದು ಪರಿಭಾವಿಸಿದ ಒಕ್ಕಲುಗಳು ಆಕೆಯಲ್ಲಿ ದೈವೀಭಾವ ಕಂಡು, ಆಕೆಯು ಐಕ್ಯವಾದ ಸ್ಥಳವಾದ ಹುತ್ತಕ್ಕೆ ಪ್ರತಿನಿತ್ಯ ನೇಮದಿಂದ ಪೂಜಿಸುವ ವಾಡಿಕೆ ಬೆಳೆಯುತ್ತಾ ಬಂದಿದೆ. ಸ್ವಲ್ಪ ಕಾಲದ ತರುವಾಯ ಒಮ್ಮೆ ಒಂಟೆತ್ತಿನ ಗಾಡಿ ವ್ಯಾಪಾರಸ್ತರು ಪಯಣಿಸುತ್ತ ಈ ಹುತ್ತದ ಬಯಲಿನ, ಮರದ ತೋಪುಗಳ ಕೆಳಗೆ ಬಿಡಾರ ಹೂಡಿದರು. ಹೀಗೆ ಬಿಡಾರ ಬಿಟ್ಟ ಆ ಪರಿವಾರ ಅಡಿಗೆ ತಯಾರಿಕೆಯಲ್ಲಿ ತೊಡಗಿದರು. ಅಡಿಗೆ ಮಾಡಲು ಹುತ್ತದ ಪಕ್ಕಕ್ಕೆ ಕಲ್ಲು ಜೋಡಿಸಿ, ಒಲೆ ನಿರ್ಮಿಸಿದ್ದರು. ಅಡಿಗೆ ಸಿದ್ಧವಾಗಿ ಎಲ್ಲರೂ ಊಟಕ್ಕೆ ಕುಳಿತರು. ಊಟಕ್ಕೆ ಕುಳಿತ ವ್ಯಾಪಾರಸ್ಥರಿಗೆ ಅಡಿಗೆ ಸಿಬ್ಬಂದಿ ಊಟಕ್ಕೆ ಬಡಿಸುವಾಗ ಮಾಡಿದ ಅಡಿಗೆ ಸಂಪೂರ್ಣ ರಕ್ತಸ್ವರೂಪ ಪಡೆದುಕೊಂಡಿತ್ತು. ಒಂಟೆತ್ತಿನ ಗಾಡಿಯ ಎತ್ತುಗಳು ಮೂರ್ಛಿತವಾಗಿ ಬಿದ್ದುಕೊಂಡವು. ಹೀಗಾದುದಕ್ಕೆ ಏನು ಮಾಡಬೇಕೆಂದು ದಿಕ್ಕು ತೋಚದೆ ಚಿಂತಾಕ್ರಾಂತರಾಗಿ ಕುಳಿತಿದ್ದ ವೇಳೆ ಕೆಂಪಮ್ಮ ಒಬ್ಬ ಮುತ್ತೈದೆ ರೂಪದಲ್ಲಿ ಬಂದು ಆ ವ್ಯಾಪಾರಸ್ಥರನ್ನು ಕುರಿತು ಕಣಿ ಹೇಳುವವಳ ರೀತಿಯಲ್ಲಿ 'ನೀವು ಅಡಿಗೆ ಮಾಡಲು ಹುತ್ತಕ್ಕೆ ಕಲ್ಲು ಹೂಡಿ ಒಲೆ ಮಾಡಿಕೊಂಡು ಅಡಿಗೆ ಮಾಡಿದ್ದೀರಿ. ಇದು ಅಕ್ಷಮ್ಯ ಅಪರಾಧವಾಗಿದೆ. ಏಕೆಂದರೆ ಈ ಹುತ್ತವು ಸಾಮಾನ್ಯವಾದ ಹುತ್ತವಲ್ಲ, ಈ ಹುತ್ತದಲ್ಲಿ ಮಹಾಶಿವಭಕ್ತೆಯೊಬ್ಬಳು ಐಕ್ಯವಾಗಿದ್ದಾರೆ. ಆದ್ದರಿಂದಲೇ ಈ ಅನಾಹುತವು ಸಂಭವಿಸಿದೆ. ಇದಕ್ಕೆ ಪರಿಹಾರವಾಗಿ ಈ ಹುತ್ತದ ಮೇಲೆ ಒಂದು ಗುಡಿಯನ್ನು ನಿರ್ಮಾಣ ಮಾಡಿ

ಈ ಹುತ್ತಕ್ಕೆ ಪೂಜೆ ಮಾಡಲು ವ್ಯವಸ್ಥೆ ಮಾಡುವುದಾಗಿ ಮಾತುಕೊಟ್ಟರೆ ಎಲ್ಲವೂ ಸರಿಹೋಗುತ್ತದೆ. ಇಲ್ಲದೇ ಇದ್ದಲ್ಲಿ ನೀವು ಇನ್ನೂ ಹೆಚ್ಚು ತೊಂದರೆ ಪಡಬೇಕಾಗುತ್ತದೆ. ಒಂದು ವೇಳೆ ಮಾತುಕೊಟ್ಟು ಮಾತು ತಪ್ಪಿದರೂ ಸಹ ದಾರುಣ ಕಷ್ಟಗಳನ್ನು ಅನುಭವಿಸುವಿರಿ' ಎಂದು ಕಡ್ಡಿ ಮುರಿದಂತೆ ನುಡಿಯುತ್ತಾಳೆ. ಭಯಗ್ರಸ್ಥರಾಗಿದ್ದ ಒಂಟೆತ್ತಿನ ವ್ಯಾಪಾರಸ್ಥರು ಅಲ್ಲಿ ಗುಡಿ ಕಟ್ಟಿಸಿ ಪೂಜೆಗೆ ವ್ಯವಸ್ಥೆ ಮಾಡುವುದಾಗಿ ದೇವರ ಮೇಲೆ ಪ್ರಮಾಣ ಮಾಡಿ ವಾಗ್ದಾನ ಮಾಡುತ್ತಾರೆ. ಆಗ ತಕ್ಷಣ ತಾವು ಮಾಡಿದ್ದ ಅಡಿಗೆಯೆಲ್ಲವೂ ಸಹಜ ರೂಪು ತಾಳಿ, ಮೂರ್ಛೆ ಹೋಗಿದ್ದ ಎತ್ತುಗಳು ಎಚ್ಚೆತ್ತು ಚೈತನ್ಯಭರಿತವಾಗಿ ಮೇಲೇಳುತ್ತವೆ. ಸಂತೋಷಗೊಂಡ ವ್ಯಾಪಾರಸ್ಥರು ಅಡಿಗೆಯನ್ನು ಊಟ ಮಾಡಿ ಕಣಿಹೇಳಿದ ಮುತ್ತೈದೆ ರೂಪದ ಕೆಂಪಮ್ಮನಿಗೆ ನಮಸ್ಕರಿಸಿ ತಮ್ಮ ಪ್ರಯಾಣವನ್ನು ಮುಂದುವರಿಸುತ್ತಾರೆ. ಸ್ವಲ್ಪ ದಿನಗಳ ನಂತರದಲ್ಲಿ ಹುತ್ತದ ಮೇಲೆ ಒಂದು ಗುಡಿಯನ್ನು ಕಟ್ಟಿ ಅಲ್ಲಿ ಪೂಜೆಗೆ ವ್ಯವಸ್ಥೆ ಮಾಡುತ್ತಾರೆ.

ಹೀಗೆ ಹುತ್ತದ ಗುಡಿ ನಿರ್ಮಾಣವಾದಾಗ ಸಾಗಸಂದ್ರ ಮೂಗನಾಯಕನ ಕೋಟೆಗೆ ಸಮೀಪದ ಪುಟ್ಟಹಳ್ಳಿಯಾಗಿತ್ತು. ಈ ವೇಳೆಗೆ ಹಾಗಲವಾಡಿ ಸಂಸ್ಥಾನ ಪ್ರಬಲ ಪಾಳೆಯಪಟ್ಟು ಆಗಿತ್ತು. ಅದರ ಮತ್ತೊಂದು ಪಾಳೆಯಪಟ್ಟು ಮೂಗನಾಯಕನ ನೇತೃತ್ವದಲ್ಲಿ ಮೂಗನಾಯಕನಕೋಟೆ ತಲೆ ಎತ್ತಿತ್ತು. ಮೂಗನಾಯಕ ಕ್ರಿ.ಶ.1750 ರ ಸುಮಾರಿಗೆ ಮೂಗನಾಯಕನ ಕೋಟೆ ಸೀಮೆಯಲ್ಲಿ ಜನಪರ ಹಾಗೂ ಜನನಾಯಕನಾಗಿ ಗುರುತಿಸಿಕೊಂಡಿದ್ದವನು. ಈತನ ಕಾಲದಲ್ಲಿ ಮೂಗನಾಯಕನ ಕೋಟೆ ವಿಶಾಲವಾದ ಕೇರಿಗಳಿಂದ ಕಟ್ಟಲ್ಪಟ್ಟಿತ್ತು. ಸಂತೆ ಬೀದಿ, ಕುಂಬಾರರ ಬೀದಿ, ಕುರುಬರ ಬೀದಿ ಹೀಗೆ ಕೇರಿಗಳು ವಿಂಗಡಣೆಯಾಗಿದ್ದವು. ಮೂಗನಾಯಕನನು ತನ್ನ ಊರಿನ ಸುತ್ತಲೂ ಬಲವಾದ ಕೋಟೆಯನ್ನು ಕಟ್ಟಿದ್ದನು. ಈತನ ವೈಭವ, ಸಂಪತ್ತಿನ ಮೇಲೆ ಸಿರಾ ನಗರದಲ್ಲಿ ಆಳ್ವಿಕೆ ಮಾಡುತ್ತಿದ್ದ ಮರಾಠರ, ಪರಶುರಾಮ ಭಾವೆಯು ಕ್ರಿ.ಶ.1750 ರ

ಸುಮಾರಿನಲ್ಲಿ ಮೂಗನಾಯಕನ ಮೇಲೆ ದಂಡೆತ್ತಿ ಬಂದಿದ್ದನು. ಸಿರಾದ ಮರಾಠರಿಗೂ ಮೂಗನಾಯಕನಿಗೂ ಸತತವಾಗಿ 2 ತಿಂಗಳ ಕಾಲ ಯುದ್ಧ ನಡೆದು ಕೊನೆಗೆ ಮೂಗನಾಯಕನು ಮರಾಠರನ್ನು ಹಿಮ್ಮೆಟ್ಟಿಸಿದನು. ಈ ವೇಳೆಗಾಗಲೇ ಅಲ್ಲಿ ನೆಲೆಸಿದ್ದ ಕೆಂಪಮ್ಮ ದೇವಿಯ ಪ್ರಭಾವದಿಂದಲೇ ನನಗೆ ಜಯ ದೊರಕಿತೆಂಬ ನಂಬಿಕೆಯಿಂದ ಮೂಗನಾಯಕನು ಕೆಂಪಮ್ಮನಿಗೆ ಭೂಮಿಯನ್ನು ದತ್ತಿಯಾಗಿ ನೀಡಿ ಅಲ್ಲಿ ಒಂದು ಶಾಶ್ವತವಾದ ಗುಡಿಯನ್ನು ಆಗಲೇ ಇದ್ದ ಅಕ್ಕನವರ ಗುಡಿಯ ಪಕ್ಕದಲ್ಲಿ ನಿರ್ಮಿಸಿರಬಹುದೆಂದು ಹೇಳಲಾಗುತ್ತಿದೆ. ಜೊತೆಗೆ ಇದೇ ಅವಧಿಯಲ್ಲಿ ಪಶ್ಚಿಮದಲ್ಲಿ ಹಾಗಲವಾಡಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹಾಗಲವಾಡಿ ಪಾಳೆಯಗಾರರು ಆಳ್ವಿಕೆ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಹಾಗಲವಾಡಿ ಪಾಳೆಯಗಾರರಿಗೂ ಮೂಗನಾಯಕನಿಗೂ ಉತ್ತಮ ಸಂಬಂಧವಿದ್ದು ಈ ಎರಡು ಪಾಳೆಯಗಾರರು ಪ್ರತ್ಯೇಕವಾದರೂ ಕೊಡು-ಕೊಳ್ಳುವಿಕೆ ಹಾಗೂ ಇತರೆ ವ್ಯವಹಾರದಲ್ಲಿ ಪರಸ್ಪರ ಸ್ನೇಹ ಸಂಬಂಧದಿಂದ ಕೂಡಿದ್ದರು. ಈ ಸಂದರ್ಭದಲ್ಲಿ ಹಾಗಲವಾಡಿಯ ಪಾಳೆಯಗಾರರ ರಾಣಿಯೊಬ್ಬಳು ಮೂಗನಾಯಕನಕೋಟೆಗೆ ಬಂದು ಹೋಗುತ್ತಿದ್ದು ಒಮ್ಮೆ ಬರುವಾಗ ಸಾಗಸಂದ್ರದ ಪಶ್ಚಿಮಭಾಗದಲ್ಲಿದ್ದ ಸಾಗಸಮುದ್ರ ಕೆರೆಯು ಒಡೆದು ಹೋಗಿದ್ದನ್ನು ಕಂಡು ರಾಣಿಯು ಅಮ್ಮನವರು ಕೆರೆ ನಿರ್ಮಿಸಿದಳೆಂದು, ಈ ಭಾಗದಲ್ಲಿ ಇಂದಿಗೂ ಹೇಳಲಾಗುತ್ತಿದೆ. ಹಾಗಲವಾಡಿ ಪಾಳೆಯಗಾರರು ಕ್ರಿ.ಶ.1776 ರವರೆಗೆ ಹಾಗಲವಾಡಿ ಹಾಗೂ ಅದರ ಭಾಗವಾಗಿ ಮೂಗನಾಯಕನ ಕೋಟೆಯಲ್ಲಿ ಆಳ್ವಿಕೆ ಮಾಡಿದ್ದಾರೆ. 1776 ರಲ್ಲಿ ಹೈದರಾಲಿಯ ಪ್ರವೇಶ ಹಾಗೂ ರಾಜ್ಯ ವಿಸ್ತರಣೆಯ ದಾಹದಿಂದಾಗಿ ಹೈದರಾಲಿ ಹಾಗಲವಾಡಿಯ ಮೇಲೆ ದಂಡೆತ್ತಿ ಬಂದು, 1776 ರಲ್ಲಿ ಹಾಗಲವಾಡಿಯನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳುತ್ತಾನೆ. ಆದುದರಿಂದ ಸಾಗಸಂದ್ರದ ಕೆಂಪಮ್ಮದೇವಿಯ ಗುಡಿ ಕೆಲಸ, ಮೂಗನಾಯಕ ಅಥವಾ ಅವನ ಸಮಕಾಲೀನರಾದ ಹಾಗಲವಾಡಿ

ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿರುವ ಸಾಧ್ಯತೆಯೇ ಹೆಚ್ಚಾಗಿದೆ. ಏಕೆಂದರೆ ಹಾಗಲವಾಡಿ ಪಾಳೆಯಗಾರರ ಕಾಲದ ದೇಗುಲ ನಿರ್ಮಾಣ, ಗುಡಿ ಕೆಲಸ ಹೆಚ್ಚಾಗಿ ಶಿವಸಂಬಂಧಿ ದೇಗುಲ ನಿರ್ಮಾಣಗಳಾಗಿದ್ದು ಈಶ್ವರ, ವೀರಭದ್ರ ಈ ಬಗೆಯ ದೇಗುಲಗಳಿಗೆ ವಿಶೇಷ ಒತ್ತು ನೀಡಿರುವುದನ್ನು ಕಾಣಬಹುದಾಗಿದೆ. ಶಕ್ತಿದೇವತೆ ಹಾಗೂ ಪಾರ್ವತಿಯ ಸ್ವರೂಪದ ಕೆಂಪಮ್ಮದೇವಿಯ ದೇವಾಲಯದ ನಿರ್ಮಾಣ ಕಾರ್ಯ ಹಾಗೂ ಆ ದೇವಾಲಯಕ್ಕೆ ಹೊಂದಿಕೊಂಡ ಪ್ರಾಂಗಣ, ರಥಬೀದಿ, ಸಾಲುತೋಪು ಈ ಬಗೆಯ ಭೂಮಿಯನ್ನು ಮೀಸಲಿಟ್ಟ ರೀತಿ ಈ ದೇವಿಯ ಗುಡಿಕೆಲಸದ ನಿರ್ಮಾಣ ಕಾರ್ಯದ ಹಿಂದೆ ಪ್ರಭಾವಿ ಅರಸು ಮನೆತನ ಅಥವಾ ಈ ಸಂಬಂಧಿ ಮಾಂಡಲೀಕರ ಕೃಪೆ ಇರಲೇಬೇಕಾಗುತ್ತದೆ. ಕೆಂಪಮ್ಮ ದೇವಿಯು ಊರ ಒಳಗಿನ ಗುಡಿಗೆ ಎದುರಾಗಿ ಊರ ಹೊರಗೆ ನಿರ್ಮಾಣವಾಗಿರುವ ಈಶ್ವರನ ದೇವಾಲಯ, ಅದರ ವಿನ್ಯಾಸ, ವಿಶಾಲವಾದ ತೇರುಬೀದಿ, ಮಜ್ಜನದ ಬಾವಿ, ಸಾಲುತೋಪು, ಹೂತೋಟ ಈ ಎಲ್ಲವೂ ಸಾಗಸಂದ್ರ, ಒಂದು ಪುಟ್ಟ ಹಳ್ಳಿಯಾದರೂ ಅದರ ಸಾಂಸ್ಕೃತಿಕ, ಧಾರ್ಮಿಕ ಅನನ್ಯತೆಯನ್ನು ತೋರುತ್ತದೆ. ಜೊತೆಗೆ ಸಾಗಸಂದ್ರದಲ್ಲಿ ಭೂತಪ್ಪ, ಮಾರಮ್ಮ ದೇವಸ್ಥಾನಗಳಿವೆ. ಭೂತಪ್ಪನ ಪೂಜಾರಿಕೆ ಹಾಗೂ ನಿರ್ವಹಣೆಯ ಹೊಣೆಗಾರಿಕೆನ್ನು ಸರ್ಪಒಕ್ಕಲಿಗ ಸಮುದಾಯದವರು ನಿರ್ವಹಿಸುತ್ತಿದ್ದಾರೆ. ಶನಿವಾರ ವಾರದ ಪೂಜೆಯ ಭೂತಪ್ಪನಿಗೆ ಹರಿಗೆ ಸೇವೆ, ಬಲಿಪೂಜೆ ನಡೆಯುತ್ತದೆ.

ನೆಲೆದೇವರ ಸ್ವರೂಪದಲ್ಲಿರುವುದರಿಂದ ಜಾತ್ರೆ, ಮೆರವಣಿಗೆ ಈ ಆಚರಣೆಗಳಲ್ಲಿ ವಿಶೇಷತೆ ಭೂತಪ್ಪ ದೇವರಲ್ಲಿ ಕಂಡುಬರುವುದಿಲ್ಲ. ಅದರಂತೆ ಮಾರಮ್ಮನ ದೇವಾಲಯವೂ ಇದ್ದು, ಇದರ ನಿರ್ವಹಣೆಯನ್ನು ಈ ಗ್ರಾಮದ ಕಿರು ಸಮುದಾಯವಾದ ಮಡಿವಾಳ ಜನಾಂಗದವರು ಮೊದಲಿನಿಂದಲೂ ನಡೆಸುತ್ತಾ ಬಂದಿದ್ದಾರೆ. ಹೀಗಾಗಿ ಸಾಗಸಂದ್ರ ಒಂದು ಹಳ್ಳಿಯಾದರೂ ಇಲ್ಲಿ

ವಾಸ ಮಾಡುತ್ತಿರುವ ನಾಯಕ, ವೀರಶೈವ, ಸರ್ಪ ಒಕ್ಕಲಿಗ ಹಾಗೂ ಮಡಿವಾಳ ಸಮುದಾಯದವರು ತಲಾ ಒಂದೊಂದು ದೇವಸ್ಥಾನದ ನಿರ್ವಹಣೆಯ ಹೊಣೆ ಹೊತ್ತಿದ್ದಾರೆ. ಈ ಎಲ್ಲ ಸಮುದಾಯದವರೂ ಯಾವುದೇ ಭೇದ ತೋರದೆ ಗ್ರಾಮದ ನಾಲ್ಕು ದೇವಸ್ಥಾನಗಳ ಬಗೆಗೆ ಅತೀವ ಕಾಳಜಿ, ಶ್ರದ್ಧೆ, ನಂಬಿಕೆ ನಡಾವಳಿಯನ್ನು ಹೊಂದಿದ್ದಾರೆ. ಅವಸರದಮ್ಮ, ಅಕ್ಕನವರು, ಗಾಳಿಯಮ್ಮ ದೇವಾಲಯಗಳು ಜನಾಂಗಿಕ ಹಿನ್ನೆಲೆಯ ಪಾರುಪತ್ಯದಲ್ಲಿ ಇಂದಿಗೂ ನಡೆಯುತ್ತಿವೆ. ಆದರೂ ಒಂದೇ ಭಾವನೆ, ಐಕ್ಯತೆ ಇದೆ. ಜನಾಂಗಿಕ ನಂಬಿಕೆ ಆಚರಣೆಗಳಿಂದ ಕೆಂಪಮ್ಮ ಹೆಸರಿನಲ್ಲಿ ತಮ್ಮ ಸೇವೆಗೆ ಒಂದೊಂದು ಗುಡಿ ನಿರ್ಮಿಸಿಕೊಂಡಿದ್ದಾರೆ.

## ಅಮ್ಮನ ಸೇವೆಗೆ ದಾಸಿ:

ಸಾಗಸಂದ್ರದಮ್ಮ ಮೂಲತಃ ಶಕ್ತಿದೇವತೆ. ಶಕ್ತಿದೇವತೆಯ ಆರಾಧನಾ ಪರಂಪರೆಯಲ್ಲಿ ದೇವಸ್ಥಾನ ನಿರ್ವಹಣೆ, ಶುದ್ಧೀಕರಣ ಈ ಬಗೆಯ ದೈನಂದಿನ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಅಥವಾ ಆ ರೀತಿಯ ನಂಬಿಕೆಯ ಕಾರಣವೋ ದೇವದಾಸಿಯರನ್ನು ಸೃಷ್ಟಿಸಲಾಗಿದೆ. ಸೌದತ್ತಿ ಎಲ್ಲಮ್ಮ, ಚಂದ್ರಗುತ್ತಿ ಯಲ್ಲಮ್ಮ, ಉಚ್ಚಂಗಿದುರ್ಗದ ಎಲ್ಲಮ್ಮ ಈ ಬಗೆಯ ಪ್ರಭಾವಿ ಶಕ್ತಿದೇವತೆಗಳ ದೇವಸ್ಥಾನಗಳಲ್ಲಿ ದೇವದಾಸಿ ಪದ್ಧತಿ ವ್ಯಾಪಕವಾಗಿ ಬೆಳೆದಿದೆ. ಸಾಮಾನ್ಯವಾಗಿ ಕೆಳಸಮುದಾಯದ ಸ್ತ್ರೀಯರೇ ಈ ಬಗೆಯ ದೇವದಾಸಿ ಪದ್ಧತಿಗೆ ಒಳಗಾಗುತ್ತಿದ್ದಾರೆ. ಸರ್ಕಾರದ ದೇವದಾಸಿ, ಬಸವಿ ಈ ಬಗೆಯ ಕಾರ್ಯಪದ್ಧತಿಯ ವಿರುದ್ಧ ಹಲವಾರು ಸುಧಾರಣಾತ್ಮಕ ಕಾನೂನು ತಂದರೂ ವ್ಯವಸ್ಥೆ ಸುಧಾರಿಸಿಲ್ಲ. ಸೌದತ್ತಿಯ ಎಲ್ಲಮ್ಮ ದೇವಸ್ಥಾನದ ಆವರಣದಲ್ಲಿ ದೇವದಾಸಿಯರು ನೂರಾರು ಸಂಖ್ಯೆಯಲ್ಲಿ ಇಂದಿಗೂ ಕಂಡುಬರುತ್ತಾರೆ.

ದೇವದಾಸಿಯರಿಗೆ ದಾನ-ಧರ್ಮ ನೀಡುವುದರಿಂದ ಎಲ್ಲಮ್ಮ ದೇವಿಗೆ

ಸಂತೃಪ್ತಿ ಎಂಬ ಬಲವಾದ ನಂಬಿಕೆ ಭಕ್ತರಲ್ಲಿಯೂ ಇದೆ. ಅದರಂತೆ ದೇವದಾಸಿಯರೂ ನಡೆದುಕೊಳ್ಳುತ್ತಾರೆ. ಅಂಥ ಒಂದು ಪದ್ಧತಿಯ ಹಿನ್ನೆಲೆಯೂ ಕೆಂಪಮ್ಮ ದೇವಿಯ ಬಗೆಗಿದೆ. ಅನಾಮಧೇಯ ರಾಜವಂಶದವರು ಮೂಲ



ದೇವಿ ಕೆಂಪಮ್ಮ




ಗುಳ್ಳೆರಾಯ

ಹುತ್ತದ ದೇವರಿಗೆ ಒಂದು ಗುಡಿಯನ್ನು ನಿರ್ಮಿಸಿ, ಪೂಜೆ ಪುರಸ್ಕಾರದ ಹೊಣೆಯನ್ನು ಗ್ರಾಮದ ಸರ್ಪಒಕ್ಕಲಿಗ ಸಮುದಾಯದವರಿಗೆ ವಹಿಸುತ್ತಾರೆ. ಈ ಜನಾಂಗದವರು ದೇವರ ವಿಚಾರದಲ್ಲಿ ನಂಬಿಕೆ, ನಿಷ್ಠೆಯಿಂದಲೇ ಪೂಜೆ, ಗುಡಿ ಕೆಲಸ ಮಾಡುತ್ತಾ ಬಂದರೂ ಕಾಲ ಸರಿದಂತೆ, ದೇವಿ ಹುಡುಗನೊಬ್ಬನಿಗೆ ಮೈಮೇಲೆ ಬಂದು 'ನನ್ನ ಸೇವೆಗೆ ಓರ್ವ ಬಸವಿಯ ಅವಶ್ಯಕತೆ ಇದೆ. ಪೂಜಾರಿಕೆಯ ಮನೆತನದ ಒಂದು ಹೆಣ್ಣುಮಗಳನ್ನು ನನಗೆ ಬಸವಿಯಾಗಿ ಒಪ್ಪಿಸಬೇಕು' ಎಂದು ಹೇಳುತ್ತದೆ. ಹೀಗೆ ದೇವಿಯ ಅಪ್ಪಣೆಯನ್ನು ಪಾಲಿಸಲೂ ಆಗದೆ, ದೇವಾಲಯದ ಪೂಜಾರಿಕೆಯ ಹೊಣೆಗಾರಿಕೆಯನ್ನೂ ಬಿಡದ, ಪೂಜಾರಿ ಮನೆತನದವರಿಗೆ, ದೇವರು ನಾನಾ ತೊಂದರೆ ನೀಡಿತೆಂದೂ ಮನೆಯಲ್ಲಿ ಏಳಿಗೆ ಆಗದೆ, ಕೊನೆಗೆ ಅಮ್ಮನ ಸೇವೆಗೆ ಹೆಣ್ಣು ಮಗಳನ್ನು ದೇವದಾಸಿಯಾಗಿ ಬಿಡಲು ಸಮ್ಮತಿಸಿದೆ. ನಾಯಕ ಸಮುದಾಯದವರಿಗೆ ದೇವಿಯ ಪೂಜೆಯನ್ನು ವಹಿಸುತ್ತಾರೆ. ಆಗ ನಾಯಕ ಸಮುದಾಯದವರು ದೇವರಿಗೆ ಒಂದು ಹೆಣ್ಣು ಮಗುವನ್ನು ದೇವದಾಸಿಯನ್ನಾಗಿ ಬಿಟ್ಟರು. ಆಕೆ ದೇವಸ್ಥಾನದ ಆವರಣದ ಸ್ವಚ್ಛತೆ, ತೊಳೆಯುವುದು, ಗುಡಿಸುವ ಈ ಬಗೆಯ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಳು. ತೀರಾ ಇತ್ತೀಚಿನವರೆಗೆ, ಸಾಗಸಂದ್ರದ ಕೆಂಪಮ್ಮದೇವರಿಗೆ ಬಸವಿಯ ಪದ್ಧತಿ ನಡೆದುಕೊಂಡು ಬಂದು ಇತ್ತೀಚೆಗೆ ಆ ಪದ್ಧತಿ ತಪ್ಪಿದೆ. ಹೀಗೆ ಮೊದಲಿಗೆ



ರಾಕ್ಷಸ

ಸರ್ಪ ಒಕ್ಕಲಿಗರ ಪೂಜಾರಿಕೆಯ ಉಸ್ತುವಾರಿಯಲ್ಲಿದ್ದ ಕೆಂಪಮ್ಮ ದೇವಿ ನಂತರದ ದಿನಗಳಲ್ಲಿ ನಾಯಕ ಸಮುದಾಯದವರ ಪೂಜಾರಿಕೆ, ದೇವಾಲಯ ನಿರ್ವಹಣೆ,



ನಾಗರಹೆಡೆ ದೇವರು

ಉತ್ಸವ, ದೇವರು ಭಕ್ತರ ಮನೆಗಳಿಗೆ ಹೋದಾಗ ಅದರ ಜವಾಬ್ದಾರಿ ಈ ಎಲ್ಲ ಕೆಲಸ ಕಾರ್ಯಗಳನ್ನು ಇಂದು ದೇವಾಲಯದ ನಿರ್ವಹಣೆಯ ಸಮಿತಿ ನೋಡಿಕೊಳ್ಳುತ್ತದೆ. ಮಾತ್ರವಲ್ಲ ಸಾಗಸಂದ್ರದ ಕೆಂಪಮ್ಮ ದೇವಿಯ ಮಂದಿರ ನೇರವಾಗಿ ಸರ್ಕಾರದ ಮುಜರಾಯಿ ಇಲಾಖೆಗೆ ಒಳಪಟ್ಟಿದೆ. ಆದರೂ ದೇವರ ಉತ್ಸವ ಆಚರಣೆ, ನಿರ್ಮಾಣ, ಅನ್ನಛತ್ರ ಈ ಬಗೆಯ ದೈನಂದಿನ ಕಾರ್ಯ ನಿರ್ವಹಣೆಯ ಹೊಣೆಯುನ್ನು ದೇವಸ್ಥಾನದ ವಿಶ್ವಸ್ಥ ಮಂಡಳಿಯವರು ನೋಡಿಕೊಳ್ಳುತ್ತಾರೆ. ಹಾಗಾಗಿ ಸರ್ಕಾರದ ಹೊಣೆಗಾರಿಕೆಗಿಂತ ಗ್ರಾಮಸ್ಥರ ಕಾಳಜಿ, ಶ್ರದ್ಧೆ, ಸೇವಾಭಕ್ತಿ ದೇವರ ಕೀರ್ತಿ ಪ್ರಸಾರದಲ್ಲಿ ಎದ್ದು ಕಾಣುತ್ತದೆ.



ಹೆಣ್ಣು ರಾಕ್ಷಸ

## ಕೆಂಪಮ್ಮ ದೇವತೆಯ ಐಭೋಗ:

ಬಲಗೈಲಿ ಕತ್ತಿ, ತ್ರಿಶೂಲ, ಎಡಗೈಯಲ್ಲಿ ಡಮರುಗ, ಪಾಣಿಬಟ್ಟಲು, ಮುಡಿಯಲ್ಲಿ ಕಿರೀಟ, ಕೆದರಿದ ಕೂದಲು, ನಾಗರ ಹೆಡೆ, ಕೆಂಗರುಗಣ್ಣು, ವಜ್ರದ ಕಿವಿಯೋಲೆ, ಕೊರಳಲ್ಲಿ ಕರಡಿಗೆ, ಪಾಣಿಪೀಠಧಾರಿಣಿ, ಬಲದ ಕಾಲಲ್ಲಿ ರಾಕ್ಷಸರನ್ನು ತುಳಿಯುತ್ತಾ ಎಡಗಾಲನ್ನು ಮಡಿಸಿ ಪದ್ಮಪೀಠದಲ್ಲಿ ಪವಡಿಸಿರುವ ದೇವಿ ಕೆಂಗರುಗಣ್ಣಿನವಳು, ತಾಮಸ ಕಳೆಯವಳು. ಸೂರ್ಯನ ನೋಟಕ್ಕೆ ಮುಖ ಮಾಡಿ ನೆಲೆಸಿದವಳು. ಮುಂಜಾನೆಯ ಸೂರ್ಯನ ಬೆಳಕು ದೇವಿಯ ಮುಖಕ್ಕೆ ರಾಚಿ, ಮುಂದುವರಿಯುವುದು ಈ ದೇವಿಯ ವಿಶೇಷ. ಮುಂಜಾನೆ ದೇವಿಗೆ ಅಭಿಷೇಕ, ಮಜ್ಜನ, ಲಿಂಗಪೂಜೆ ನಡೆಯುತ್ತದೆ. ಸಕಲ ಅಲಂಕಾರ ಭೂಷಿತೆಯಾದ ದೇವಿಯ ಸೌಂದರ್ಯ, ಅಲಂಕಾರ ಮುಂಜಾನೆಯ ಕೆಂಪನೆಯ ಸೂರ್ಯ ತನ್ನ ಹೊಂಬಣ್ಣದ ಕಿರಣಗಳನ್ನು ದೇವಿಯ ಮೇಲೆ ಚೆಲ್ಲುವುದು, ಆಗ ದೇವಿಯ ಸೊಬಗು ಸೌಂದರ್ಯ ಚಿತ್ತಾಕರ್ಷಕವಾಗಿರುತ್ತದೆ.

ಕೆಂಪಮ್ಮದೇವಿ ಶಿವನ ಕುಮಾರತಿ, ವೀರಭದ್ರನೆ ತಂದೆ, ಸಂಗಪ್ಪನ ಬಸವನ ಶಿಷ್ಯೆ ಎಂದೆಲ್ಲಾ ಹೊಗಳುವುದು ರೂಢಿಯಾಗಿದೆ. ಮಾತ್ರವಲ್ಲ ವೀರಶೈವ ಕುಮಾರತಿ, ಜಂಗಮರ ಪ್ರೀತಿ ಎಂದೂ ಕರೆಯುತ್ತಾರೆ. ಕರಡಿಗೆಯೊಳಗಣ ಶಿವಪೂಜೆ ನಿನಗೆ, ಕಾವಿ ವಸ್ತ್ರಧಾರಿ, ಮೂರೂ ಹೊತ್ತಿನ ಶಿವಪೂಜೆಯವಳು ಎಂದೆಲ್ಲಾ ಕರೆಯಲಾಗುತ್ತದೆ. ಬಟ್ಟಮುಖದ ಕಡುಚೆಲುವೆ ಎಂದು ಉಲ್ಲೇಖಿಸುತ್ತಾರೆ. ಇಲ್ಲೆಲ್ಲಾ ದೇವಿಯ ವರ್ಣನೆ, ರೂಪ, ಪರಿಭಾವನೆ ಸ್ವಯಂ ಪಾರ್ವತಿಯ ದರ್ಶನ. ಡಮರುಗ, ತ್ರಿಶೂಲ, ಪಾಣಿಬಟ್ಟಲು, ಲಿಂಗಧಾರಣೆ ಹೀಗೆ ಒಂದೊಂದೊರ ವರ್ಣನೆ ಮತ್ತು ಅದರಂತೆ ಮಾಡಿರುವ ಅಲಂಕಾರಿಕ ದೃಶ್ಯಾವಳಿ ದೇವಿಯ ಮಹಿಮೆಯನ್ನು ಹೆಚ್ಚಿಸಿದೆ. ಇದರ ಜೊತೆಯಾಗಿ ಅಗ್ನಿಕುಂಡದ ವರ್ಣನೆಯೂ ಬರುತ್ತದೆ.

ಶನಿವಾರದ ಪುಣ್ಯಕಾಲದಲ್ಲಿ
ಕೆಂಡಕೊಂಡಕ್ಕೆ ಹೋಗಾ ಸಮಯದಲ್ಲಿ
ಮೂಡಾಪಡುವ ತೆಂಕ ಬಡು
ಉತ್ಸವದ ಮೆರವಣಿಗೆ ಹೊರಡಿಸಿ
ಒಂಬೈನೂರ ಏಳು ಕೊಮಾರಿಕೆಗೆ ಗೈದು
ಮೂರು ಮೂರು ಚಾಟಿ ಹೂಳುಗದವರು
ಮೂರು ಮೂರು ಕತ್ತಿ ಹೂಳುಗ
ನಿನ್ನ ಪಾದಕ್ಕೆ ಶರಣು ಶರಣು ಮಾಡೋ ಬಹುಪರಾಕ್

ಈ ಮಾತುಗಳಲ್ಲಿ ಕೆಂಪಮ್ಮದೇವಿ ಪಾರ್ವತಿಯ ಅಪರಾವತಾರ ಎಂಬ ಪರಿಕಲ್ಪನೆ ಇದೆ.

ಸಾಗಸಂದ್ರದ ಹೊರಭಾಗದ ಪೂರ್ವದಿಕ್ಕಿಗೆ ಕೆಂಪಮ್ಮ ದೇವಿಯ ಮೂಲ ದೇವಾಲಯವಿದೆ. ಇದಕ್ಕೆ ಸಾಗಸಂದ್ರದಮ್ಮನ ಗುಡಿ, ದೊಡ್ಡಮ್ಮನ ಗುಡಿ ಎಂದು ಕರೆಯುವುದು ವಾಡಿಕೆ. ದ್ರಾವಿಡ ಶೈಲಿಯ ಈ ದೇವಾಲಯ ವಿಶಾಲವಾದ ಪೌಳಿ, ಒಳಗಡೆ ಮೂರು ಹಂತದಲ್ಲಿ ದೇವಾಲಯದ ಪ್ರಾಂಗಣ, ನಡುಮನೆ, ಗರ್ಭಗುಡಿ ದೇವಾಲಯ ವರ್ಗೀಕರಣವಾಗಿದೆ. ಗರ್ಭಗುಡಿಯಲ್ಲಿ ದೇವಿಯ ಆಕರ್ಷಕವಾದ ಭವ್ಯಮೂರ್ತಿಯನ್ನು ಸುಣ್ಣಕಲ್ಲಿನ ಗಾರೆ ಮಿಶ್ರಿತ ಹುತ್ತದ ಮಣ್ಣಿನಲ್ಲಿ ಮಾಡಲಾಗಿದೆ. ಬಟ್ಟ ಮುಖ, ಕಿರುಗಟ್ಟು ನೋಟ ಆಕರ್ಷಕ ಮೂರ್ತಿ ಬಗೆಬಗೆಯ ವಸ್ತ್ರ, ಆಭರಣಗಳಿಂದ ದೇವಿಗೆ ಅಲಂಕಾರ ಮಾಡುತ್ತಾರೆ. ನೇರವಾಗಿ ಮೇಲ್ನೋಟಕ್ಕೆ ಎದ್ದು ಕಾಣುವ ಕರಡಿಗೆ, ಈಕೆ ಶೈವ ಸಂಸ್ಕಾರವಂತಳೆಂದೂ ಶಿವಪೂಜೆಯ ನೇಮನಿಷ್ಠೆ ಬಲ್ಲವಳೆಂದೂ ಮೊದಲ ನೋಟಕ್ಕೆ ಕಂಡುಬರುತ್ತದೆ. ದೇವಿಯ ಪೀಠಕ್ಕೆ ಸಮಾಂತರವಾಗಿ ಎಡ-ಬಲಕ್ಕೆ ಎರಡು ಗುಳ್ಳೆರಾಯಗಳನ್ನು ಕಡೆಯಲಾಗಿದೆ. ಗರ್ಭಗುಡಿಯ ಇಕ್ಕೆಲಗಳಲ್ಲಿ ಎರಡು ಭೇತಾಳಗಳನ್ನು ನಿರ್ಮಾಣ ಮಾಡಲಾಗಿದೆ. ಇವು ಗೋಡೆಯಲ್ಲಿ

ಒಡಮೂಡಿದಂತೆ, ಗರ್ಭಗುಡಿಯ ಪ್ರವೇಶದ ಎರಡೂ ಬದಿಗೆ ಬಾಗಿಲ ಬಳಿಯೇ ಇವೆ. ದೊಡ್ಡ ಹೊಟ್ಟೆ, ಕೆದರಿದ ಕೂದಲು, ಕೈಯಲ್ಲಿ ಕತ್ತಿ, ಕೋರೆಹಲ್ಲು, ತೆರೆದ ಬಾಯಿ, ದಪ್ಪ ಮೂಗು, ದಪ್ಪನೆಯ ಕಣ್ಣುಗುಡ್ಡೆ, ಹಸಿರು ಹಳದಿ ಸಣ್ಣಸಣ್ಣ ಗೆರೆಯ ಮೇಲುಡುಗೆಯ ಬಲಗಡೆಯ ಬೇತಾಳಕ್ಕೆ 'ಗುಳ್ಳೇರಾಯ' ಎಂದು ಕರೆಯುತ್ತಾರೆ. ಎಡಭಾಗದ ಭೇತಾಳಕ್ಕೆ ಹೆಣ್ಣು ಬೇತಾಳ ಎಂದೂ ಕರೆಯುವುದು ವಾಡಿಕೆಯಾಗಿದೆ. ದೇವಿಯ ಬಲಬದಿಗಿರುವ ಬೇತಾಳಕ್ಕೆ ಸಂಬಂಧಿಸಿದಂತೆ ಒಂದು ನಂಬಿಕೆಯಿದೆ. ಮಕ್ಕಳಿಗೆ ಸಹಜವಾಗಿ ಬರುವ ಗಳಗಂಟೆ, ಕೆಮ್ಮು, ಮೂಗು ಹಾಗೂ ಗಂಟಲಿಗೆ ಸಂಬಂಧಿಸಿದ ಎಲ್ಲಾ ಕಾಯಿಲೆಗಳನ್ನು ಈ ಗಳ್ಳೇರಾಯ ನಿವಾರಿಸುತ್ತಾನೆಂಬ ಬಲವಾದ ನಂಬಿಕೆಯಿದೆ. ಗಳಗಂಟೆಯಾಗಿ ಕೆನ್ನೆಯ ಊತ, ಉಗುಳು ನುಂಗುವುದಕ್ಕೆ ತೊಂದರೆ, ಈ ಬಗೆಯ ತೊಂದರೆ ಕಾಣಿಸಿಕೊಂಡ ಕೂಡಲೇ ಭಕ್ತರು ಈ ದೇವಾಲಯಕ್ಕೆ ಬಂದು ದೇವಿಗೆ ಮಂಗಳಾರತಿ ಮಾಡಿಸಿ ಗಳ್ಳೇರಾಯನ ಬಂಡಾರ, ದೂತಿ ಸವರಿಸಿಕೊಂಡರೆ ಗಳಗಂಟೆ ರೋಗ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಮತ್ತು ನಂಬಿಕೆಗೆ ತಕ್ಕ ಆಚರಣೆ ಈ ದೇವಿ ಮಹಿಮೆಯ ಸಂದರ್ಭದಲ್ಲಿ ಹೆಚ್ಚು ಬಳಕೆಯಲ್ಲಿದೆ. ದೇವಿಯ ಒಳಾಂಗಣ ದೇವಾಲಯದಲ್ಲಿಯೂ ಮತ್ತೊಂದು ಭೂತಪ್ಪನ ವಿಗ್ರಹವನ್ನು ಗೋಡೆಗೆ ಸಮಾಂತರವಾಗಿ ಕಡೆಯಲಾಗಿದೆ. ಮೊದಲು ದೊಡ್ಡಗಾತ್ರದ ಭೂತಪ್ಪನ ವಿಗ್ರಹವಿದ್ದು ದೇವಾಲಯ ಹೊಸ ವಿನ್ಯಾಸ ಪಡೆದ ನಂತರ ಭಊತಪ್ಪನ ವಿಗ್ರಹದ ಪ್ರಮಾಣವೂ ಕಡಿಮೆಯಾಗಿದೆ. ನಡುಗೋಡೆಯಲ್ಲಿಯೂ ಆಕರ್ಷಕವಾದ ಭೂತಪ್ಪ ಹಾಗೂ ನಾಗರ ಮೂರ್ತಿಯನ್ನು ಆಕರ್ಷಕವಾಗಿ ಗೋಡೆಯಲ್ಲಿ ಬಿಡಿಸಲಾಗಿದೆ.

## ಅಕ್ಕನವರ ಗುಡಿ:

ಇದು ಅಕ್ಕನವರು ಎಂದು ಕರೆಯುತ್ತಿರುವ ಒಬ್ಬ ಮಹಾ ಪತಿವ್ರತೆಯು ಸಹಗಮನ ಮಾಡಿದ ವೇಳೆ ಆಕೆಯನ್ನು ದೇವರಾಗಿಸಿ ಆಕೆಗೆ ಗುಡಿ ನಿರ್ಮಿಸಿ



ಅಕ್ಕನವರ ಅಮ್ಮನ ದೇವಸ್ಥಾನ

ಅಕ್ಕನವರೆಂದು ಪೂಜಿಸುತ್ತಿದ್ದ ಮತ್ತು ಪೂಜಿಸಲ್ಪಡುತ್ತಿರುವ ಒಬ್ಬ ಮಹಾಸಾಧ್ವಿ. ಕೆಂಪಮ್ಮದೇವಿಯ ಗುಡಿಯ ಪೌಳಿಯ ಗೋಡೆಯ ಬಲ ಭಾಗದಲ್ಲಿ ಒಂದು ಗುಡಿಯನ್ನು ನಿರ್ಮಿಸ ಲಾಗಿದೆ. ಇದೊಂದು ಬೆನಕನ ವಿಗ್ರಹದ ಪುಟ್ಟ ದೇವಾಲಯ. ಇದಕ್ಕೆ ಅಕ್ಕನವರು ಎಂದೇ ಕರೆದು ಪೂಜಿಸಲಾಗುತ್ತಿದೆ. ಇದಕ್ಕೆ ಮೂಗನಾಯಕನ ಕೋಟೆಯ ಸಂಬಂಧವಿದೆ. ಇಂದಿಗೂ ಕೆಂಪಮ್ಮದೇವಿಯ ಜಾತ್ರೆಯ ಮೊದಲಿಗೆ ಅಕ್ಕನವರ ಪೂಜೆ ನಡೆಯುತ್ತದೆ. ಇದಕ್ಕೆ ಕಾರಣ ಕೆಂಪಮ್ಮನು ಇಲ್ಲಿ ನೆಲೆಸುವುದಕ್ಕೆ ಮೊದಲು ಆಕೆಗೆ ಹೀಗೆ ಮಾಡುವುದಾಗಿ ಮಾತು ಕೊಟ್ಟು ಅಲ್ಲಿ ನೆಲೆಸಿದಳೆಂಬ ಪ್ರತೀತಿಯಿದೆ. ಮೂಗನಾಯಕನ ಕೋಟೆಯ ಕುರುಬ ಸಮುದಾಯದವರಿಂದ ಆರತಿ, ಬಾನದೊಂದಿಗೆ ಮೆರವಣಿಗೆಯಲ್ಲಿ ಬರುತ್ತಾರೆ. ಇದು ಸಾಗಸಂದ್ರಮ್ಮನ ಜಾತ್ರೆಯ ಹಿಂದಿನ ದಿನ ನಡೆಯುತ್ತದೆ. ವಿಶೇಷವಾಗಿ ಗುರುವಾರದ ಪೂಜೆ ವಿಶೇಷ. ಆರತಿ, ಉತ್ಸವಜಾತ್ರೆಯ ಸ್ವರೂಪದಲ್ಲಿ ಬರುತ್ತದೆ. ಮೂಗನಾಯಕನ ಕೋಟೆಯಿಂದ ವಿಶೇಷ ವಾದ್ಯ ಪರಿಕರ, ಪತ್ತು, ದೀವಟಿಗೆಯೊಂದಿಗೆ ಜಾತ್ರೆಯ ಬಾನ ಹೊರಡುತ್ತದೆ. ಸ್ಥಳೀಕರಿಗೆ ಇದೊಂದು ಸಾಂಸ್ಕೃತಿಕ ಸೌಹಾರ್ದ ಹಬ್ಬವಾಗಿ

ಜನಾಂಗಿಕ ಒಗ್ಗೂಡುವಿಕೆ ಸ್ನೇಹ ಸಂಬಂಧಗಳ ಪ್ರತೀಕವಾಗಿ ಅಕ್ಕನವರ ಆಚರಣೆ ನಡೆಯುತ್ತದೆ. ಸಾಗಸಂದ್ರ ಕೆಂಪಮ್ಮನ ಗಂಡನ ಮನೆಯ ಮೂಲ ಮೂಗನಾಯಕನಕೋಟೆಯಾದುದರಿಂದ ಆ ಮೂಲದವರು ಅಕ್ಕನವರ ದೇವಿಯ ಆರಾಧನೆ, ಉತ್ಸವದ ವ್ಯವಸ್ಥೆ ಮಾಡುವುದರಿಂದ ಇದು ಮೂಲದೇವತೆಯಾಗಿರುವ ಸಾಧ್ಯತೆಯೂ ಇದೆ. ದೇವಾಲಯದ ಕಾಂಪೌಂಡಿನ ಸುತ್ತ ಜಮಾಯಿಸುವ ಜನಸ್ತೋಮ, ಸೋಮನ ಕುಣಿತ, ಅರೆವಾದ್ಯ ಕಿರುಜಾತ್ರೆಯ ಸ್ವರೂಪದಲ್ಲಿ ನೆರವೇರುತ್ತದೆ. ಅಂದು ಬಾನದಲ್ಲಿ ಮರಿಯ ಮಾಂಸದ ಅಡಿಗೆಯ ನೈವೇದ್ಯವನ್ನು ರಾಕ್ಷಸಪ್ಪಗಳಿಗೆ ಅರ್ಪಿಸಲಾಗುತ್ತದೆ.

### ಗಾಳಿಯಮ್ಮ:

ಗಾಳಿಯಮ್ಮ ಕೆಂಪಮ್ಮದೇವಿಯ ಹೊರಭಾಗದಲ್ಲಿ ಮುಖ್ಯ ದ್ವಾರದ ಬಲಭಾಗದಲ್ಲಿರುವ ಒಂದು ಗುಡಿ. ಇದನ್ನು ಗಾಳಿಯಮ್ಮ ಎಂದು ಕರೆಯುತ್ತಾರೆ. ಗಾಳಿಯಮ್ಮ ದಾಳಿಯಮ್ಮ ಈ ಎರಡೂ ಪದಗಳ ಬಳಕೆ ಕೆಂಪಮ್ಮ ದೇವಿಯ ಒಂದೊಂದು ಮೂಲವನ್ನು ಕಟ್ಟಿ ಕೊಡುತ್ತವೆ. ಇದಕ್ಕೆ ಆದಿದ್ರಾವಿಡ ಅಥವಾ



ಗಾಳಿಯಮ್ಮ ದೇವಸ್ಥಾನ

ಛಲವಾದಿ ಸಮು ದಾಯದವರು ಪೂಜೆ ಮಾಡುತ್ತಾರೆ. ಇದರ ಪೂಜೆ, ಮೆರವಣಿಗೆ, ಆಚಾರ ವಿಚಾರಗಳು ಕೆಂಪಮ್ಮದೇವಿಯ ಉತ್ಸವದ ಒಳಗೇ ಸೇರಿಕೊಂಡಿವೆ. ಆದರೂ ಛಲವಾದಿ ಸಮುದಾಯದವರು ಈ ದೇವರ ಹಕ್ಕುದಾರಿಕೆಯನ್ನು ಪ್ರದರ್ಶಿಸುತ್ತಿರುವುದು. ಜಾತಿಯ ಕಟ್ಟುಪಾಡಿನ ಸಂಬಂಧ ಕೆಂಪಮ್ಮ ದೇವಿಯ ಗುಡಿಯೊಳಗೆ ಪ್ರವೇಶಿಸಲು ಇಷ್ಟಪಡದ ಈ ಸಮುದಾಯದವರಿಗೆ ಗಾಳಿಯಮ್ಮನ ಮೂಲಕ ಕೆಂಪಮ್ಮನನ್ನು ಪೂಜಿಸುವುದು ವಾಡಿಕೆ. ಪೂಜೆ, ಆ ಸಂಬಂಧಿ ಜವಾಬ್ದಾರಿಯನ್ನು ನಿರ್ವಹಿಸುವವರು ಈ ಸಮುದಾಯದವರೇ ಆಗಿದ್ದಾರೆ. ಈ ದೇವಿಯು ಗಾಳಿಯಮ್ಮ ಎಂಬ ವಿಶೇಷ ಪರಿಕಲ್ಪನೆಗೆ ಕಾರಣ. ಕೆಂಪಮ್ಮದೇವಿ ಮೂಲತಃ ಕಷ್ಟಪರಿಹಾರ ದೇವತೆ. ಗಾಳಿ ಸೋಂಕು, ಮಾಟ-ಮಂತ್ರ ಈ ಸಂಬಂಧಿ ಮನುಷ್ಯರು ಪರಸ್ಪರ ಅಸಹನೆ, ಅತೃಪ್ತಿ, ಅಸೂಯೆಯಿಂದ ಇನ್ನೊಬ್ಬರ ಏಳಿಗೆಯನ್ನು ಸಹಿಸುವುದಿಲ್ಲ. ಅಂಥ ಸಂದರ್ಭದಲ್ಲಿ ಆ ದುಷ್ಟತನ ತನ್ನ ಎದುರಾಳಿಯ ಮೇಲೆ ಮಾಂತ್ರಿಕ ವಿಧಾನದ ಪ್ರಯೋಗದ ಮೂಲಕ ಎದುರಾಳಿಗೆ ಕೇಡು ಬಯಸುತ್ತಾನೆ. ಈ ಬಗೆಯ ಮಾಟ-ಮಂತ್ರಗಳಿಗೆ ಮಾನವ ಬಲಿಯಾಗಿ ಬಳಲುತ್ತಾನೆ. ಕೆಲವೊಮ್ಮೆ ಅದೇ ದೊಡ್ಡದಾಗಿ ಜೀವ ಹೋಗುವುದು ಸಹಜವೇ. ಇಂಥ ಗಾಳಿಸೋಂಕು ಅಥವಾ ಸತ್ತ ಕೆಲವು ವ್ಯಕ್ತಿಗಳು ಗಾಳಿಯಾಗಿ, ಪ್ರೇತ, ದೆವ್ವದ ರೂಪದಲ್ಲಿ ಮನುಷ್ಯರಿಗೆ ತೊಂದರೆ ಕೊಡುತ್ತವೆ. ಇಂಥ ಪ್ರೇತಾತ್ಮಗಳನ್ನು ತಹಬಂದಿಗೆ ತರುವ, ಅವುಗಳ ನಿಗ್ರಹದ ವಿಧಾನವಾಗಿ ಕೆಂಪಮ್ಮದೇವಿಯ ಮೊರೆ ಹೋಗುತ್ತಾರೆ. ದೇವಿ ಪ್ರೇತವನ್ನು ಹೊಡೆದೋಡಿಸುವ, ಅದನ್ನು ಬಿಡಿಸುವ ತಂತ್ರವಾಗಿ ಗಾಳಿಕಲ್ಲು ಕಡೆಸುವುದು ಎಂದು ಕರೆಯುತ್ತಾರೆ. ಆ ಸಂಬಂಧಿ ಆಚರಣೆ, ಗಾಳಿಯಮ್ಮನ ಗದ್ದಿಗೆಯ ಬಳಿ ನಡೆಯುತ್ತದೆ.

ಸಾಮಾನ್ಯವಾಗಿ ಅಮಾವಾಸ್ಯೆ ಮತ್ತು ದೇವಿಯ ವಾರದ ದಿನಗಳಾದ ಮಂಗಳವಾರ, ಶುಕ್ರವಾರ ವಿಶೇಷವಾಗಿ ನಡೆಯುವ ಗಾಳಿಕಲ್ಲು ಆಚರಣೆ

ಕುತೂಹಲಕರವಾಗಿರುತ್ತದೆ. ಜಾನಪದ ಆಚರಣೆಯಾಗಿ ನಂಬಿಕೆ ಮತ್ತು ಆ ಸಂಬಂಧಿ ನಡೆಯುವ ಈ ಕ್ರಿಯೆಗಳು ರಾತ್ರಿಯ ಕಾಲದಲ್ಲಿ ಜರುಗುವುದು ವಿಶೇಷ. ಎರಡು ಅಡಿಯ ಉದ್ದದ ಒಂದು ಕಾಡುಗಲ್ಲಿನಲ್ಲಿ ಮನುಷ್ಯ ರೂಪದ ಚಿತ್ರವನ್ನು ಬಿಡಿಸಲಾಗುವುದು. ಹಾಗೆ ಬಿಡಿಸಿದ ಚಿತ್ರ ಈ ಹಿಂದೆ ಸತ್ತು ಹೋಗಿರುವ ವ್ಯಕ್ತಿ ಎಂದೇ ನಂಬುತ್ತಾರೆ. ಹಾಗೆ ಸತ್ತ ವ್ಯಕ್ತಿ ತನ್ನ ಅತೃಪ್ತ ಭಾವನೆಗಳಿಂದ ಪ್ರೇತಾತ್ಮನಾಗಿ ತನಗೆ ಇಷ್ಟವಾದವರ ಮೇಲೆ ಪರಕಾಯ ಪ್ರವೇಶ ಮಾಡಿ, ಜೀವಂತ ವ್ಯಕ್ತಿ ಆ ಕ್ಷಣಕ್ಕೆ ತನ್ನ ಪೂರ್ಣತನವನ್ನು ಕಳೆದುಕೊಂಡು ಈ ಹಿಂದಿನ ಸತ್ತ ವ್ಯಕ್ತಿಯ ನಡೆ, ಮಾತು, ಆಕ್ರೋಶ ಎಲ್ಲವನ್ನೂ ಪ್ರಕಟಿಸುತ್ತಾನೆ. ಅಂಥ ವ್ಯಕ್ತಿಯನ್ನು ಜನರು ಹಿಡಿದು ಹೊಡೆಯುವುದೂ ಉಂಟು. ಹುಣಸೆಕಡ್ಡಿ, ಕಸದ ಪೊರಕೆ, ಕೆಲವೊಮ್ಮೆ ಚಪ್ಪಲಿಯ ಮೂಲಕವೂ ಹೊಡೆಯುತ್ತಾರೆ. ಅಂಥ ಸಂದರ್ಭದಲ್ಲಿ ತಾನು ಯಾರು, ಯಾವ ಕಾರಣಕ್ಕೆ ಗಾಳಿಯ ರೂಪು ತಾಳಿದೆ, ತನ್ನ ಆಸೆ, ಆಕಾಂಕ್ಷೆಗಳ ಬೇಡಿಕೆಗಳನ್ನು ಜನಗಳ ಮುಂದೆ ಇಡುತ್ತದೆ. ಅಂದರೆ ಜೀವಂತ ವ್ಯಕ್ತಿಯೇ ಮಾತನಾಡುತ್ತಾನೆ. ಹೀಗೆ ಗಾಳಿ ಹಿಡಿದ ವ್ಯಕ್ತಿ ಜನರ ಬೆದರಿಕೆ, ಹೊಡೆತಗಳಿಂದ ಆ ಕ್ಷಣಕ್ಕೆ 'ಬಿಟ್ಟು ಹೊರಡುತ್ತೇನೆ, ಇನ್ನೆಂದೂ ಬರುವುದಿಲ್ಲ' ಎಂದೆಲ್ಲಾ ಆಶ್ವಾಸನೆ ನೀಡುತ್ತದೆ. ಆದರೂ ಅಮಾವಾಸ್ಯೆ ಸಮಯ, ಸಂದರ್ಭಗಳಲ್ಲಿ ಮತ್ತೆ ಮತ್ತೆ ಬರುವುದುಂಟು. ಇದಕ್ಕೆ ಶಾಶ್ವತ ಪರಿಹಾರ ಗಾಳಿಕಲ್ಲು ಕಡೆಸುವುದು ಎಂಬ ನಂಬಿಕೆ ಜನಪದರಲ್ಲಿ ಇಂದಿಗೂ ಬಲವಾಗಿದೆ. ಈ ಬಗೆಯ ಆಚರಣೆ ಶಕ್ತಿದೇವತೆಗಳಲ್ಲಿ ರೂಢಿಯಲ್ಲಿದ್ದರೂ ಸಾಗಸಂದ್ರದ ಕೆಂಪಮ್ಮದೇವಿ ಈ ಬಗೆಯ ಸಂಗತಿಗಳಲ್ಲಿ ಸಶಕ್ತ ಪರಿಹಾರದಾತೆ ಎಂಬ ನಂಬಿಕೆ ಭಕ್ತರಲ್ಲಿ ವ್ಯಾಪಕವಾಗಿದೆ.

### ಸಂಬಂಧ ನಿಷೇಧ ಗಾಳಿಕಲ್ಲು ಆಚರಣೆ:

ಗಾಳಿಕಲ್ಲು ಆಚರಣೆ ಸಾಗಸಂದ್ರದಲ್ಲಿ ಗಾಳಿಯಮ್ಮ ದೇವಿಯ ಗುಡಿಯ ಸನ್ನಿಧಿಯಲ್ಲಿ ನಡೆಯುತ್ತದೆ. ಈ ಹಿಂದೆ ಸತ್ತು ಅತೃಪ್ತಿಯಿಂದ ಗಾಳಿಯ ರೂಪದಲ್ಲಿ


ಸಂಬಂಧಿಕರಿಗೆ ತೊಂದರೆ ಕೊಡುವುದು ಗಾಳಿಯ ಗುಣಸ್ವಭಾವ. ಅಂಥ ವ್ಯಕ್ತಿಯ ರೂಪು ಇರುವ ಕಲ್ಲನ್ನು ಕಡೆಸಿ, ಅದನ್ನು ಗಾಳಿಯಮ್ಮ ದೇವತೆಯ ಬಳಿಯಿಟ್ಟು ಕಟ್ಟು ಮಾಡಿಸಿ, ನಂತರ ಹೊರಗೆ ತಂದು ಒಂದು ಬಯಲಿನಲ್ಲಿ ಇಟ್ಟು ಅಲ್ಲಿ ಸೇರಿರುವ ಬಂಧುಗಳು, ಪರಿಚಯಸ್ಥರು ಎಲ್ಲರೂ ಕೂಡಿಕೊಂಡು ಎಲೆ-ಅಡಿಕೆ ಜಗಿದು, ನಂತರ ಗಾಳಿಯಕಲ್ಲಿನ ಮೇಲೆ ಉಗಿದು 'ನನಗೂ ಗಾಳಿಯ ರೂಪದ ವ್ಯಕ್ತಿಗೂ ಯಾವುದೇ ಸಂಬಂಧವಿಲ್ಲ' ಎಂದು ಹೇಳುತ್ತಾರೆ. ಹೀಗೆ ಉಗಿಯುವ ಮೂಲಕ ಗಾಳಿ ರೂಪದ ವ್ಯಕ್ತಿಗೆ 'ನೀನು ನಮ್ಮ ಕುಲಕ್ಕೆ, ನಮ್ಮ ಸಂಬಂಧಿಗಳಿಗೆ ಕೆಟ್ಟ ಹೆಸರು ತಂದೆ. ಹಾಗಾಗಿ ನಿನ್ನನ್ನು ನಮ್ಮ ವಂಶ ಸಂಬಂಧದಿಂದ ಪರಿತ್ಯಜಿಸುತ್ತೇವೆ. ಇಂದಿನಿಂದ ನಿನಗೂ, ನಮಗೂ ಯಾವುದೇ ಸಂಬಂಧ ಇರುವುದಿಲ್ಲ. ನಾವ್ಯಾರೂ ನಿನಗೆ ರಕ್ತಸಂಬಂಧಿಗಳಲ್ಲ. ಆದುದರಿಂದ ಇಂದಿನಿಂದ ನಿನ್ನೊಂದಿಗೆ ನಿಜವಾದ ಸಂಬಂಧವನ್ನು ಕಳೆದುಕೊಳ್ಳುತ್ತೇವೆ' ಎಂದು ಆ ಕಲ್ಲಿನೊಂದಿಗೆ ಸಂಭಾಷಣೆ ನಡೆಸುತ್ತಾರೆ. ನಂತರ ಅದನ್ನು ಆಳವಾದ ಗುಂಡಿತೋಡಿ ಮುಚ್ಚುವ ಸಂಪ್ರದಾಯವಿದೆ. ಇದು ಒಂದು ಜನಪದರ ಪ್ರಬಲವಾದ ನಂಬಿಕೆಯಾಗಿದೆ.

ಗಾಳಿಯಮ್ಮನ ಸನ್ನಿಧಿಯಲ್ಲಿ ಈ ಆಚರಣೆ ಇಂದು ಮಹತ್ವದ ಆಚರಣೆಯಾಗಿ ಬಳಕೆಯಲ್ಲಿದೆ. ಯಂತ್ರ, ಮಂತ್ರ, ತಾಂತ್ರಿಕ ಪರಿಹಾರಗಳಿದ್ದರೂ ಜನಪದರು ಮರೆಹೋಗಿರುವುದು ಅದರಂತೆ ನಂಬಿ ಆಚರಿಸಿಕೊಂಡು ಬಂದಿದ್ದಾರೆ. ಗಾಳಿಯಮ್ಮನ ಪೂಜೆ, ಗಾಳಿಕಲ್ಲಿನ ವಿಧಿ ವಿಧಾನ ರೂಪಿಸುವವರು ಚಲವಾದಿ ಜನಾಂಗದವರು. ಅಳಿಲಘಟ್ಟದ ಕೆಂಪನರಸಯ್ಯನ ಕುಟುಂಬಸ್ಥರು ಪಾರಂಪರಿಕ ಆಚರಣೆಯಾಗಿ ಈ ಕಸುಬನ್ನು ನೆರವೇರಿಸುತ್ತಾ ಬರುತ್ತಿದ್ದಾರೆ. ಮಾತ್ರವಲ್ಲ ದೇವಾಲಯದ ಅರೆವಾದ್ಯದ ಜವಾಬ್ದಾರಿಯೂ ಇದೇ ಕುಟುಂಬದವರಿಗೆ ಸೇರಿದೆ. ಮೊದಲಿಗೆ ಸಾಗಸಂದ್ರದ ಮೂಲನಿವಾಸಿಗಳಾಗಿದ್ದ ಕೆಂಪನರಸಯ್ಯನವವ ಪಿರಕದವರು ನಾನಾ ಕಾರಣಗಳಿಂದ ಅಳಿಲಘಟ್ಟದಲ್ಲಿ

ನೆಲೆಸಿದ್ದಾರೆ. ಆದರೂ ಕೆಂಪಮ್ಮದೇವಿಯ ಗಾಳಿಯಮ್ಮನ ಪೂಜಾಸೇವೆ, ಅರೆವಾದ್ಯ ಸೇವೆಯನ್ನು ನಿಷ್ಠೆಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಗಾಳಿಯಮ್ಮನಿಗೂ ಶುಕ್ರವಾರ, ಮಂಗಳವಾರದ ಪೂಜಾಕ್ರಮವಿದೆ. ಸಾಗಸಂದ್ರಮ್ಮ ಮೆರವಣಿಗೆ ಹೊರಟಾಗ ಗಾಳಿಯಮ್ಮ ಅಕ್ಕನವರ ಗುಡಿಗಳ ಮುಂದೆ ಮಂಗಳಾರತಿ ಹಾಗೂ ಇಡುಗಾಯಿ ಒಡೆಯುವ ಪದ್ಧತಿ ಇಂದಿಗೂ ಬೆಳೆದು ನಿರಂತರವಾಗಿ ಪರಿಪಾಲಿಸುತ್ತಿದ್ದಾರೆ. ಕೆಂಪಮ್ಮದೇವಿಯ ದ್ವಾರಬಾಗಿಲ ಎಡಬದಿ ಸ್ವಲ್ಪ ಹೊರಗೆ ಅವರಸರದಮ್ಮನ ಗುಡಿಯಿದೆ.

## ಅವಸರದಮ್ಮ:

ಅವಸರದಮ್ಮ ಕೆಂಪಮ್ಮನ ಪ್ರತಿರೂಪ. ಆದಿಕರ್ನಾಟಕ ಜನಾಂಗದವರು ಪ್ರತ್ಯೇಕವಾಗಿ ದೇವರನ್ನು ಪ್ರತಿಷ್ಠಾಪಿಸಿಕೊಂಡು, ಪೂಜಿಸಿಕೊಂಡು ಬಂದ ಒಂದು ಪರಂಪರೆಯ ಒಂದು ವಿಧಾನ. ಗ್ರಾಮಸಂಸ್ಕೃತಿ ಕುಲಾಚಾರಗಳ ಹಿನ್ನೆಲೆಯಲ್ಲಿ ಮತೀಯ ಭಾವನೆ ಪ್ರಬಲವಾಗಿರುತ್ತದೆ. ಕೆಲವೊಮ್ಮೆ ಈ ಬಗೆಯ ಜಾತಿಯ



ಅವಸರದಮ್ಮ ದೇವಾಲಯ



ಈಶ್ವರ ದೇವಸ್ಥಾನ

ಲೆಕ್ಕಾಚಾರವಿದ್ದರೂ ಕೈವಾಡದವರು ಎಂಬ ಸಂಪ್ರದಾಯ ದ ವಿಧಿ ವಿಧಾನ ದಲ್ಲಿ ತೋಟಿ, ತಳವಾರ, ಗೌಡ, ಶ್ಯಾನುಭೋಗ, ಕಟ್ಟೆಮನೆ ಯಜಮಾನ, ಪೂಜಾರಿ ಹೀಗೆ ಅಧಿಕಾರ ಶ್ರೇಣಿಗಳಲ್ಲಿ ದೇವಾಲಯದ ಪಾಲುಗಾರಿಕೆ ಗ್ರಾಮಸಂಸ್ಕೃತಿಯ ಪ್ರಧಾನ ಲಕ್ಷಣ. ಇಲ್ಲಿ ಜನಾಂಗಿಕ ಭಿನ್ನ ಭಾವನೆ ಮೇಲುನೋಟಕ್ಕೆ ಕಂಡುಬಂದರೂ ಆಯಾಯಾ ಜನಾಂಗದವರು ಮಾಡಬೇಕಾದ ಗುಡಿಕೆಲಸ, ನಿಯಮಬದ್ಧವಾಗಿ ಮಾಡಲೇಬೇಕಾಗುತ್ತದೆ. ಹಾಗೆಯೇ ದೇವಾಲಯದ ರೀತಿ ರಿವಾಜಿನ ಪ್ರಕಾರ ಅಕ್ಕಿ, ಹಣ, ಕಾಯಿ, ಕೆಲವೊಮ್ಮೆ ಪ್ರಾಣಿಬಲಿಯ ಸಂದರ್ಭದಲ್ಲಿ ದೇವರಿಗೆ ಅರ್ಪಿಸಿದ ತಲೆಗಳ ಭಾಗದಲ್ಲೂ ಕರಾರುವಕ್ಕಾಗಿ ಪಾಲುದಾರಿಕೆ ಇರುತ್ತದೆ. ಇಲ್ಲಿ ಯಾವುದೇ ಬೇಧಭಾವ ಇರುವಂತಿಲ್ಲ.

ಸಾಗಸಂದ್ರಮ್ಮ ಒಂದು ಗ್ರಾಮಕೇಂದ್ರಿತ ದೇವತೆ. ಕೆಂಪಮ್ಮ ಬಹುಜನಾಂಗದ, ಧರ್ಮದ ಅಧಿದೇವತೆ. ಸಾಗಸಂದ್ರ ಈಕೆಯ ಕೇಂದ್ರ ನೆಲೆಯಾದರೂ ಕರ್ನಾಟಕದಾದ್ಯಂತ ಈ ದೇವರ ಒಕ್ಕಲಿದ್ದಾರೆ. ಅವರೆಲ್ಲರೂ



ಈಶ್ವರನ ದೇವಸ್ಥಾನದ ಹಳೇ ಕಲ್ಲುಕಂಬಗಳು

ದೇವಿಗೆ ಭಕ್ತಿಭಾವಗಳಿಂದ ನಡೆದುಕೊಳ್ಳುತ್ತಿದ್ದಾರೆ. ತಮ್ಮ ತಮ್ಮ ಮನೆಗಳ ಪುಣ್ಯಕೆಲಸದ ಸಂದರ್ಭದಲ್ಲಿ ದೇವರನ್ನು ಕರೆದುಕೊಂಡು ಹೋಗುವ ಪರಿಪಾಠವೂ ಇದೆ. ಆದರೂ ಸಾಗಸಂದ್ರದ ಕೆಂಪಮ್ಮ ದೇವಿಯ ವಿಚಾರದಲ್ಲಿ ಗಾಳಿಯಮ್ಮ, ಅವಸರದಮ್ಮ, ಅಕ್ಕನವರು ಹೀಗೆ ಒಂದೇ ದೇವತೆಯ ಆರಾಧನೆಯ ನೆಲೆಗಳು ಜಾತಿಗೊಂದರಂತೆ ಹಂಚಿಕೆಯಾಗಿರುವುದು, ಈ ನಿಯಮದಂತೆ ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ಜಾತ್ರೆ, ಅಗ್ನಿಕೊಂಡ, ತೇರು ಈ ಬಗೆಯ ವಿಶೇಷ ಸಂದರ್ಭಗಳಲ್ಲಿ ಜಾತಿಯ ಎಲ್ಲೆಗಳನ್ನು ಮೀರಿ ದೇವತಾಕಾರ್ಯದಲ್ಲಿ ಪಾಲ್ಗೊಳ್ಳುವುದೂ ಇದೆ. ಆದರೆ ಉಳಿದ ಸಂದರ್ಭಗಳಲ್ಲಿ ಆದಿಕರ್ನಾಟಕದವರು ಅವಸರದಮ್ಮನಿಗೆ, ಆದಿದ್ರಾವಿಡ ಜನಾಂಗ ಗಾಳಿಯಮ್ಮ ದೇವರಿಗೆ ಪ್ರತ್ಯೇಕ ಪ್ರತ್ಯೇಕವಾಗಿಯೇ ಪೂಜೆಮಾಡಿಸುವ ಸಂಪ್ರದಾಯ ಬೆಳೆದುಬಂದಿದೆ. ಕೆಂಪಮ್ಮದೇವಿಯ ದ್ವಾರಬಾಗಿಲು ದಾಟಿ ಒಳಗಡೆ ಪ್ರವೇಶಿಸಲು ನಿರಾಕರಿಸುವ ತಳಸಮುದಾಯದವರು ತಮ್ಮ ಅನುಕೂಲ ಹಾಗೂ ಸಂಸ್ಕೃತಿಗೆ



ಈಶ್ವರ ದೇವಸ್ಥಾನದ ಎಡಭಾಗ ಸಿಹಿನೀರಬಾವಿ

ಅನುಗುಣವಾಗಿ ಕೆಂಪಮ್ಮದೇವಿಯ ಅಪರಾವತಾರ ಎಂಬಂತೆ ಈ ಬಗೆಯ ದೇವತೆಗಳ ಗುಡಿ ನಿರ್ಮಿಸಿಕೊಂಡಿದ್ದಾರೆ. ಅದರಂತೆ ಇಂದಿಗೂ ನಡೆದುಕೊಳ್ಳುತ್ತಿದ್ದಾರೆ.

ಅವಸರದಮ್ಮನ ಗುಡಿಯು ಚಿಕ್ಕ ಪೌಳಿಯ ಸ್ವರೂಪದ ಚಿಕ್ಕ ಗುಡಿ. ಇದನ್ನು ಹಲಸಿನ ಮರದ ನಾಗೇನಹಳ್ಳಿಯ ಮೂಲದ ಶ್ರೀ ಕರಿಯಣ್ಣನ ಕುಟುಂಬದವರು ಇಂದು ಪೂಜಾರಿಕೆಯ ನಿರ್ವಹಣೆ ಮಾಡುತ್ತಿದ್ದಾರೆ. ಸಾಗಸಂದ್ರದಿಂದ ಮೂಗನಾಯಕನಕೋಟೆಯ ಆಚೆಗೆ 4 ಕಿ.ಮೀ. ದೂರದ ಹಲಸಿನಮರದ ನಾಗೇನಹಳ್ಳಿಯಿಂದ ಕರಿಯಣ್ಣನ ಕುಟುಂಬದವರು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪೂಜೆ ಮಾಡಿಕೊಂಡು ಹೋಗುವುದು ಸಾಗಸಂದ್ರದ ಸಂಪ್ರದಾಯವಾಗಿದೆ. ಮಾತ್ರವಲ್ಲ ಈ ಬಗೆಯ ಸಮುದಾಯದವರು ದೂರದೂರುಗಳಿಂದ ಅಸಂದರ್ಭಿಕವಾಗಿ ಸಾಗಸಂದ್ರ ಕ್ಕೆ ಬಂದು ಅವಸರದಮ್ಮನ ಪೂಜೆಗಾಗಿ ಕರಿಯಣ್ಣನ ಕುಟುಂಬದವರನ್ನು ಕರೆಸಿ ಕೊಳ್ಳುವುದೂ ಉಂಟು.

ಆದುದರಿಂದ ಅವಸರದಮ್ಮ ದೇವಿಗೂ ನಿರ್ದಿಷ್ಟ ಭಕ್ತರು ಒಕ್ಕಲುಗಳಿರುವುದನ್ನು ಕಾಣಬಹುದಾಗಿದೆ. ಅವಸರದಮ್ಮ ಎಂದರೆ ತ್ವರಿತವಾಗಿ ಪೂಜೆಗೊಳ್ಳಬಹುದಾದ ದೇವತೆ ಎಂಬ ಭಾವನೆ ಇದ್ದರೂ ಒಂದು ನಿರ್ದಿಷ್ಟ ಸಮುದಾಯದವರು ಮಾತ್ರ ಈ ದೇವಿಗೆ ನಡೆದುಕೊಳ್ಳುವುದನ್ನು ಗಮನಿಸಿದಾಗ ಸಮುದಾಯ ಆಧಾರಿತ ವರ್ಗೀಕರಣ ಈ ದೇವಿಯ ನಿರ್ಮಾಣದ ಹಿನ್ನೆಲೆ ಎಂಬುದು ಸ್ಪಷ್ಟವಾಗುತ್ತದೆ. ಜಾತಿಯ ವ್ಯವಸ್ಥೆ ಪ್ರಬಲವಾಗಿದ್ದ ಕಾಲಘಟ್ಟದಲ್ಲಿ ಸಮುದಾಯ ಆಧಾರಿತ ದೇವತೆಗಳ ನಿರ್ಮಿತಿ ಹಾಗೂ ಅವುಗಳ ಪೂಜೆ, ಮೆರವಣಿಗೆ ಹೊಣೆಗಾರಿಕೆಯ ಪ್ರತೀಕವಾಗಿ ಸಾಗಸಂದ್ರದಲ್ಲಿ ಈ ಬಗೆಯ ಬೇರೆ ಬೇರೆ ಹೆಸರಿನಲ್ಲಿ ದೇವರುಗಳ ರಚನೆಯನ್ನು ಕಾಣಬಹುದಾಗಿದೆ.

## ಬಣ್ಣಗಾರಿಕೆ:

ದೇವಿಯ ಜಾತ್ರೆಗೆ ಮೊದಲು ದೇವಿಗೆ, ಸೋಮಪ್ಪ, ರಾಕ್ಷಸಪ್ಪಗಳಿಗೆ ಬಣ್ಣಗಾರಿಕೆಯ ಕಾರ್ಯ ನಿಯಮವೆಂಬಂತೆ ನಡೆಯುತ್ತದೆ. ಇದು ದೇವಿಯ



ಸಾಗಸಂದ್ರ ಊರಿನ ಮಧ್ಯ ಮಾರಮ್ಮ ದೇವರು



ಸಾಗಸಂದ್ರದ ಊರ ಒಳಗೆ ಮಹಾಸತಿ ಕಲ್ಲು

ಅಪ್ಪಣೆಯ ಮೇರೆಗೆ ಶುಭದಿನ, ಶುಭಗಳಿಗೆಯಿಂದ ಆರಂಭವಾಗುತ್ತದೆ. ಬಣ್ಣಗಾರರ ವಂಶಾವಳಿ ಸಾಗಸಂದ್ರಮ್ಮನ ಪರಂಪರೆಯಲ್ಲಿದ್ದು ಆ ಮನೆತನದವರು ಮಾತ್ರ ಬಣ್ಣ ಗಾರಿಕೆಯ ಹಕ್ಕು ಪಡೆದಿದ್ದಾರೆ. ಮೊದಲಿಗೆ ಮರ-ಗಿಡಗಳ ಎಲೆ, ಹಾಲುಗಳಿಂದ ದೇಶೀ ಬಣ್ಣ ತಯಾರಿಸಿ ದೇವ ರಿಗೆ ಬಣ್ಣದ ಕಾರ್ಯ ಮಾಡುತ್ತಿದ್ದರು. ಆದರೆ ಇಂದು ಆ ಬಗೆಯ ಸಸ್ಯಸಂಪತ್ತು ನಾಶವಾಗಿರುವುದರಿಂದ ಇಂದು ಬಣ್ಣವಾಗಿ ಆಯಿಲ್ ಪೇಂಟ್‌ನ್ನೇ ಬಳಸಲಾಗುತ್ತಿದೆ ಎಂದು ಬಣ್ಣಗಾರ ಕೆಂಪರಾಜು ಅಭಿಪ್ರಾಯಪಡುತ್ತಾರೆ. ಬಣ್ಣದ ಕೆಲಸ, ದೇವಿಗೆ ಕಣ್ಣು ಕಡೆಯುವುದು, ಸೋಮಪ್ಪ, ರಾಕ್ಷಸಪ್ಪಗಳಿಗೆ

ಆಕರ್ಷಕ ಬಣ್ಣಗಾರಿಕೆ ದೇಶೀನೆಲೆಯಲ್ಲಿ ಒಂದು ಪರಂಪರೆಯಾಗಿ ಅದೇ ಬುಡಕಟ್ಟಿನವರು ನಡೆಸಿಕೊಂಡು ಬಂದಿರುವುದು ಈ ದೇವಾಲಯದ ವಿಶೇಷವಾಗಿದೆ. ಮಾತ್ರ ವಲ್ಲ ಬಣ್ಣಗಾರಿಕೆಯ 15 ದಿನಗಳ ಕಾಲ ಬಣ್ಣಗಾರರು ಕಠಿವ ವ್ರತ, ಸೇವಾನಿಷ್ಠೆ,



ಊರೊಳಗಿನ ವೀರಾಂಜನೇಯಸ್ವಾಮಿ ದೇವಾಲಯ

ಪೂಜೆ ಒಂದೊಂದು ಬಗೆಯ ಬಣ್ಣ ಹಾಕುವಾಗಲೂ ಒಂದೊಂದು ಮಂತ್ರಗಳೊಂದಿಗೆ ಬಣ್ಣಗಾರಿಕೆ ಕೆಲಸ ಮಾಡುವುದು ಮತ್ತೂ ವಿಶೇಷ. ಈ ಮೂಲಕ ಗಾಳಿ, ಬಿಸಿಲು, ಧೂಳುಗಳಿಂದ ದೇವರು, ಸೋಮಪ್ಪ, ರಾಕ್ಷಸಪ್ಪ ಈ ಮೂರ್ತಿಗಳು ಮತ್ತೂ ಆಕರ್ಷಣೆಗೊಂಡು ಅಂದಚೆಂದದ ಸೊಬಗು ಎದ್ದುಕಾಣುತ್ತದೆ.

## ಜಾತ್ರೆಯ ವೈಭವ:

ಕೆಂಪಮ್ಮ ಶಕ್ತಿದೇವತೆ, ಪಾರ್ವತಿಯ ರೂಪವೆಂದೇ ನಂಬಿಕೆ. ಶುದ್ಧ ಶೈವ ಸಂಸ್ಕಾರಗಳೊಂದಿಗೆ ದೇವಿಯ ಆರಾಧನೆ, ಉತ್ಸವ, ಜಾತ್ರೆ ನಡೆಯುತ್ತದೆ. ಪ್ರತಿವರ್ಷ ಚೈತ್ರಮಾಸದಲ್ಲಿ ಬೃಹತ್ ಜಾತ್ರೆಯೂ ನಡೆಯುತ್ತದೆ. ಜಾತ್ರೆ ಒಂದೆರಡು ದಿನಗಳಲ್ಲಿ ಮುಗಿಯುವುದಿಲ್ಲ. ಒಂದು ತಿಂಗಳ ಕಾಲ ಜಾತ್ರೆಯ ಸಡಗರ, ಊರಾಟ, ಮಡಿಲಕ್ಕಿ ಸೇವೆ, ರಥ ಸಿದ್ಧತೆ, ಬಣ್ಣಗಾರಿಕೆ ಹೀಗೆ ಒಂದೊಂದು ದೇವರ ಕೆಲಸಗಳೂ ಸಾಂಪ್ರದಾಯಿಕ ನೆಲೆಗಳಲ್ಲಿಯೇ ಜರುಗುತ್ತವೆ. ಈ ಕಾರ್ಯಕ್ಕೆಲ್ಲ ದೇವರ ಒಪ್ಪಿಗೆ, ಶುಭದಿನ ನಿರ್ಧಾರ ಹೀಗೆ ಒಂದೊಂದು ಆಚರಣೆಗಳೂ ಸಾಂಪ್ರದಾಯಿಕ ಶೈಲಿಯಲ್ಲಿ ಜರುಗುವುದು ಈ ಜಾತ್ರೆಯ ವಿಶೇಷ.

ಪೂಜಾರಿ, ಕೋಲುಕಾರರು, ಗುಡಿಗೌಡರು ಹೀಗೆ ಕೈವಾಡದವರೆಲ್ಲ ಸೇರಿ ಜಾತ್ರೆಯ ದಿನಾಂಕ ನಿರ್ಧರಿಸುತ್ತಾರೆ. ಅದರಂತೆ ಯುಗಾದಿ ಹಬ್ಬದ ಶುಭದಿನ ದೇವಿಯ ತೇರನ್ನು ದೇವಾಲಯದ ಮುಂದೆ ಇರುವ ತೇರಿನ ಮನೆಯಿಂದ ಪೂಜೆ ಪುನಸ್ಕಾರಗಳೊಂದಿಗೆ ಆಚೆಗೆ ತಳ್ಳಲಾಗುತ್ತದೆ. ರಥದ ಗಾಲಿ, ಅದರ ಕಡಾಣಿಗಳನ್ನು ಸರಿಪಡಿಸುವುದರೊಂದಿಗೆ ತೇರುಕಟ್ಟುವ ಕಾರ್ಯವೂ ಅಂದಿನಿಂದಲೇ ಆರಂಭವಾಗುವುದು.

## ಚೇಳೂರಿನ ಮೂಲ:

ಸಾಗಸಂದ್ರದ ಕೆಂಪಮ್ಮ ಚೇಳೂರಿನ ಮೂಲದವರು. ಈಕೆಯು ಚೇಳೂರಿನ ಪಟೇಲರ ವಂಶದವಳೆಂದು ಭಾವಿಸಲಾಗಿದೆ. ಚೇಳೂರಿನ ಕಸಬಾ ಪಟೇಲರಾದ ಕರೀಗೌಡರ ಮನೆಯು ಚೇಳೂರಿನ ಊರಬಾಗಿಲ ಹಿಂಭಾಗದಲ್ಲಿ, ಊರ ಬಾಗಿಲಿಗೆ ಹೊಂದಿಕೊಂಡಂತೆ ಪಶ್ಚಿಮಾಭಿಮುಖವಾಗಿದೆ. ಈ ಮನೆ ಹದಿನಾರು ಅಂಕಣದ ದೊಡ್ಡ ಮನೆಯಾಗಿದ್ದು ತೊಟ್ಟಿ ಆಕೃತಿಯಲ್ಲಿ, ಬಿಸಿಲು ಮಾಡಿನ ರೂಪದಲ್ಲಿ


ರಚನೆಯಾಗಿದೆ. ಈ ಮನೆಯು ಇಂದು ಜರಾಜೀರ್ಣವಾಗಿದ್ದು ತೀರಾ ಇತ್ತೀಚಿನವರೆಗೂ ಚೀಳೂರಿನಲ್ಲಿ ಏರ್ಪಡುತ್ತಿದ್ದ ಪೌರಾಣಿಕ ನಾಟಕಗಳ ತಯಾರಿಗಾಗಿ ಬಳಕೆಯಾಗುತ್ತಿತ್ತು. ಜೊತೆಗೆ ನಾಟಕದ ದಿನ ಬಣ್ಣದ ಮನೆಯಾಗಿ ಕಲಾವಿದರು ಪಾತ್ರಗಳ ಉಡುಗೆ-ತೊಡುಗೆ, ಬಣ್ಣ ಹಾಕಿಸಿಕೊಳ್ಳುವ ಕೆಲಸ ಇಲ್ಲಿಯೇ ನಡೆಯುತ್ತಿತ್ತು. ಸಾಗಸಂದ್ರಮ್ಮ ಚೀಳೂರಿಗೆ ಬರುವುದೆಂದರೆ ತುಂಬಾ ಪ್ರೀತಿ. ದೇವರನ್ನು ಹೊತ್ತವರು ಬಿರಬಿರನೆ ನಡೆಯಬೇಕು. ಹಾಗೆ ಬಂದ ದೇವಿ ಹಿಂತಿರುಗುವಾಗ ತುಂಬಾ ಸತಾಯಿಸುತ್ತದೆ. ದಾರಿಯೇ ಸವೆಯುವುದಿಲ್ಲ ಎಂಬ ಅಭಿಪ್ರಾಯವನ್ನು ದೇವಿಯ ಬಣ್ಣಗಾರ ಕೆಂಪರಾಜು ಅವರು ಅಭಿಪ್ರಾಯ ಪಡುತ್ತಾರೆ.

ಕೆಂಪಮ್ಮದೇವಿ ಇಂದಿಗೂ ವರ್ಷದಲ್ಲಿ ಎರಡು ಬಾರಿ ಚೀಳೂರಿಗೆ ಬರಬೇಕೆಂಬ ನಿಯಮವಿದೆ. ಹಾಗೆ ಬಂದ ದೇವರು ಮೊದಲಿಗೆ ಪೇಟೆಯ ಬೀದಿಯಲ್ಲಿ ಹಾದು ಪಟೇಲರ ಮನೆಯ ಮುಂದೆ ಇಡುಗಾಯಿ ಒಡೆಸಿಕೊಂಡು ನಂತರ ಪಟೇಲರ ವಂಶಸ್ಥರ ಮನೆಗಳಲ್ಲಿ ಗದ್ದುಗೆ ಮಾಡಿಸಿಕೊಳ್ಳುವ ಸಂಪ್ರದಾಯವಿದೆ. ಚೀಳೂರಿಗೆ ಬಂದಾಗ ಸಂಗಮೇಶ್ವರನ ಗದ್ದಿಗೆ ಗುಡಿಯ ಬಳಿ ಇಡುಗಾಯಿ ಒಡೆಸಿಕೊಂಡು, ಸಂಗಮೇಶ್ವರನ ಪೂಜೆಯ ತರುವಾಯ ದೇವಿ ಮುಂದೆ ಹೋಗುವ ಪರಿಪಾಠವಿದೆ. ಚೀಳೂರಿನ ದೃಶ್ಯೇಶ್ವರ ಹಾಗೂ ಸಂಗಮೇಶ್ವರ ದೇವರುಗಳನ್ನು ತನ್ನ ಅಣ್ಣಗಳೆಂದು ಪರಿಭಾವಿಸಿರುವುದೂ ಉಂಟು. ದೃಶ್ಯೇಶ್ವರನ ತೇರಿಗೆ ಸಾಗಸಂದ್ರದಮ್ಮನನ್ನು ಕರೆತಂದು, ಉತ್ಸವ ಮಾಡಿಸಿ, ಮಡಿಲಕ್ಕಿ ಹಾಕುವುದು ಇಂದಿಗೂ ನಡೆಯುತ್ತದೆ. ವರ್ಷದಲ್ಲಿ ಕನಿಷ್ಠ ಎರಡು ಬಾರಿಯಾದರೂ ಚೀಳೂರಿಗೆ ಹೋಗಲೇಬೇಕೆಂಬುದು ನಿಯಮ. ಪ್ರತಿ ವರ್ಷ ಸಾಗಸಂದ್ರದಲ್ಲಿ ನಡೆಯುವ ಕೆಂಪಮ್ಮದೇವಿಯ ಜಾತ್ರೆಯ ಮುನ್ನ ಚೀಳೂರಿಗೆ ಬಂದು ಮಡಿಲಕ್ಕಿ ಕಟ್ಟಿಸಿಕೊಂಡು ಹೋದ ತರುವಾಯ ಸಾಗಸಂದ್ರದಲ್ಲಿ ಜಾತ್ರಾ ಕಾರ್ಯ ಆರಂಭವಾಗುವುದು ಇಂದಿಗೂ

ಸಂಪ್ರದಾಯವಾಗಿದೆ.


ಸಾಗಸಂದ್ರದಮ್ಮನಿಗೆ ಸಂಬಂಧಿಸಿದಂತೆ ಚೇಳೂರು ಮತ್ತು ಮೂಗನಾಯಕನ ಕೋಟೆಯ ಸಂಬಂಧ ಇಂದಿಗೂ ಇದೆ. ನಲ್ಲೂರಿನಲ್ಲಿ ಗಾಳಿಸಿದ್ದಪ್ಪನ ವಂಶದವರು ಎಂಬ ಒಂದು ಮನೆತನವಿದೆ. ಈ ಮನೆತನದವರಿಗೂ ಸಾಗಸಂದ್ರ ಮತ್ತು ಮೂಗನಾಯಕನಕೋಟೆ ನಡುವಿನ ಕಳಸನಹಳ್ಳಿಗೂ ಇಂದಿಗೂ ಸಂಬಂಧವಿದೆ. ಮಾತ್ರವಲ್ಲ ಯಣ್ಣೆಕಟ್ಟೆ ದಿಣ್ಣೆಯಲ್ಲಿರುವ ಶ್ರೀ ಹೊನ್ನಸಿದ್ದಪ್ಪನವರ ವೈವಾಹಿಕ ಸಂಬಂಧ ನಿರಂತರ ನಾಲ್ಕು ತಲೆಮಾರುಗಳಿಂದ ಕಳಸನಹಳ್ಳಿಯೊಂದಿಗೆ ನಡೆದಿದೆ. ಈ ಸಂಬಂಧ ಇಂದಿಗೂ ಕಳಸನಹಳ್ಳಿ-ಯಣ್ಣೆಕಟ್ಟೆ, ನಲ್ಲೂರಿಗೂ ವೈವಾಹಿಕ ಸಂಬಂಧಗಳು ಅವರ ವಂಶವಾಹಿ ವ್ಯಾಪಕವಾಗಿ ಬೆಳೆದಿದೆ. ಇವರೆಲ್ಲರೂ ಸಾಗಸಂದ್ರ ಕೆಂಪಮ್ಮನ ಒಕ್ಕಲಾಗಿರುವುದು ವಿಶೇಷ. ಇವರೂ ಸಾಗಸಂದ್ರದ ಕೆಂಪಮ್ಮ ನಮ್ಮ ಮನೆತನದ ಹೆಣ್ಣು ಮಗಳು ಎಂದು ಹೇಳಿಕೊಳ್ಳುತ್ತಾರೆ.

ಸಾಗಸಂದ್ರದ ಕೆಂಪಮ್ಮನ ಕಲ್ಲುಗಾಲಿ ರಥೋತ್ಸವ ಬಹಳ ವಿಶೇಷ. ಇಲ್ಲಿನ



ಭೂತಪ್ಪ ದೇವಸ್ಥಾನ

ರಥದ ಚಕ್ರವು ಹಳೆಯ ಮಾದರಿಯಲ್ಲಿದೆ. ಈ ರಥದ ಗಾಲಿಯಲ್ಲಿ ನಲ್ಲೂರು ಗಾಳಿ ಸಿದ್ದಪ್ಪ ಮತ್ತು ಮಕ್ಕಳು ಸಾಗಸಂದ್ರ ಕೆಂಪಮ್ಮನ ಸೇವಾರ್ಥ ನಿರ್ಮಿಸಿಕೊಟ್ಟ ರಥಚಕ್ರ ಎಂದು ದಾಖಲಿಸಿದ್ದಾರೆ. ಮಾತ್ರವಲ್ಲ ಚೇಳೂರು, ಕಚ್ಚೇನಹಳ್ಳಿ, ಸೀಗೇನಹಳ್ಳಿ, ನಲ್ಲೂರು ಈ ಗ್ರಾಮಗಳ ಒಕ್ಕಲುಗಳು ಸಾಗಸಂದ್ರದ ಕೆಂಪಮ್ಮನ ಜಾತ್ರೆ, ಅಗ್ನಿಕೊಂಡದ ದಿನ, ರಥಬೀದಿಯ ಎಡಬಯಲಲ್ಲಿ ನಿರ್ಮಿಸಿರುವ ಕಲ್ಲು ಮಂಟಪಗಳಲ್ಲಿ ಕೊಪ್ಪಲು ಹಾಕಿ ಪಾನಕ-ಫಲಹಾರ, ಅನ್ನ ದಾಸೋಹ ನಡೆಸುತ್ತಿದ್ದ ಸಂಪ್ರದಾಯ ಇಂದಿಗೂ ಇದೆ. ಈಗ ನಿತ್ಯ ಅನ್ನ ದಾಸೋಹ ದೇವಾಲಯದ ವತಿಯಿಂದಲೇ ಏರ್ಪಟ್ಟಿರುವುದರಿಂದ ಚೇಳೂರು, ಕೋಡಿಯಾಲ, ಕಚ್ಚೇನಹಳ್ಳಿಯ ಭಕ್ತರು ಪಾನಕ ಫಲಹಾರದ ಸೇವೆ ನಡೆಸುತ್ತಾ ಬರುತ್ತಿದ್ದಾರೆ. ಇದು ಸಾಗಸಂದ್ರದ ಕೆಂಪಮ್ಮ ಚೇಳೂರಿನ ಮೂಲದವಳು ಎಂಬುದರ ನಂಬಿಕೆ ಮತ್ತು ನಂಬಿಕೆಗೆ ಪೂರಕವಾಗಿ ನಡೆದುಕೊಂಡು ಬರುತ್ತಿರುವ ಆಚಾರ ಮತ್ತು ಸಂಪ್ರದಾಯಗಳಾಗಿವೆ. ಸಾಗಸಂದ್ರದ ಚಾರಿತ್ರಿಕತೆ, ಭೌಗೋಳಿಕ ಲಕ್ಷಣ ಮತ್ತು ಅಲ್ಲಿನ ಅವಶೇಷಗಳನ್ನು ಗಮನಿಸಿದಾಗ ಬೇರೆಯದೇ ಆದ ಚಾರಿತ್ರಿಕ ಅಂಶಗಳು ಪ್ರಕಟವಾಗುತ್ತವೆ. ಸಾಗಸಂದ್ರ ತಗ್ಗಿನ ನೀರು ಸಮೃದ್ಧವಾಗಿ ನಿಲ್ಲಬಹುದಾದ ಬೆಳೆಗಳು ಹುಲುಸಾಗಿ ಬೆಳೆಯುತ್ತಿರುವ ಭೂಪ್ರದೇಶ ಎಂಬ ಅರ್ಥದ ಜೊತೆಗೆ ಸಾಗ ಮತ್ತು ಸಾಗಿ ಎಂಬ ಶರಣರು ಈ ಗ್ರಾಮದ ಮೂಲ ಪುರುಷರು. ಇವರು ಕಲ್ಯಾಣಪಟ್ಟಣದ ಕಡೆಯಿಂದ ಬಂದವರು. ಈ ಹುಲ್ಲುಗಾವಲು



ರಥಬೀದಿ, ತೇರಿನ ಮನೆ



ಸಿಡಿಕಲ್ಲು

ಪ್ರದೇಶದಲ್ಲಿ ನೆಲೆಸಿ ಶರಣರ ಮಾರ್ಗದಲ್ಲಿ ನಡೆದು ಸಂದೇಶಗಳನ್ನು ಬಿತ್ತುತ್ತಿದ್ದರು. ಅವರ ಕಾಲದಲ್ಲಿಯೇ ಊರಿನ ಹೊರಭಾಗದಲ್ಲಿ ಈಶ್ವರ ದೇವಾಲಯವಿದ್ದು ಇದು ಬಳಪಕಲ್ಲಿನ ಕಲ್ಲು ಕೂಚುಗಳಿಂದ ನಿರ್ಮಿಸಿದ ಹೊಯ್ಸಳ ಮಾದರಿಯ ದೇವಾಲಯವಾಗಿದೆ. ಮಜ್ಜನದ ಬಾವಿ, ವಿಶಾಲವಾದ ಹೂದೋಟ, ಅಂಗಳ, ಮರಗಳ ಸಾಲು ತೋಪನ್ನು ಇಂದಿಗೂ ಕಾಣಬಹುದಾಗಿದೆ. ಕೆಂಪಮ್ಮ ಈ ಬಗೆಯ ಗ್ರಾಮದ ಮೂಲಪುರುಷರಾದ ಸಾಗಿಯಾಗಿರಬಹುದೆ ಇವರು ತನ್ನ ಒಳ್ಳೆಯ ನಡಾವಳಿ, ಉಪಕಾರದಿಂದ ದೈವರೂಪವೆ ಎಂಬುದು ಸಾಗಸಂದ್ರದ ಕೆಲವರ ಕುತೂಹಲಕರ ಪ್ರಶ್ನೆಯೂ ಆಗಿದೆ.

ಕ್ರಿ.ಶ.1750 ರಲ್ಲಿ ಮೂಗನಾಯಕನಕೋಟೆ ಒಂದು ಪಾಳೆಯಪಟ್ಟು ಆಗಿದ್ದು ಮೂಗನಾಯಕ ಎಂಬ ಪಾಳೆಯಗಾರನ ಆಡಳಿತಕ್ಕೆ ಸೇರಿತ್ತು. ನಂತರ ಹಾಗಲವಾಡಿ ಪಾಳೆಯಗಾರರ ಆಡಳಿತಕ್ಕೆ ಸೇರಿದೆ. ಆ ಕಾಲದ ಒಂದು ಸ್ಮಾರಕ ಸಾಗಸಂದ್ರ ಬಂಡನಹಳ್ಳಿಯ ರಸ್ತೆಯ ಬಲಬದಿಗೆ ಈಶ್ವರ ದೇವಾಲಯಕ್ಕೆ ಸಮೀಪ ನಾಯಕರ ಸುಧಾಕರ ಅವರ ಮನೆಯ ಎದುರಿಗಿದೆ. ಇದನ್ನು ಗ್ರಾಮಸ್ಥರು ಲಿಪಿಕಲ್ಲು ಎಂದೂ ಕರೆಯುತ್ತಾರೆ. ಮಾತ್ರವಲ್ಲ ಈಶ್ವರನ ದೇವಾಲಯ ಚೋಳರ

ಕಾಲದ ರಚನೆ ಎಂದೂ ಭಾವಿಸಿದ್ದಾರೆ. ವಾಸ್ತವವಾಗಿ ಇದೊಂದು ಮಾಸ್ತಿಕಲ್ಲು. ಮೂರು ಹಂತಗಳಲ್ಲಿ ಕೆತ್ತಿರುವ ಇಲ್ಲಿ ಮಾದರಿ ಕುತೂಹಲಕಾರಿಯಾಗಿದೆ.

ಮೊದಲ ಕೆಳಹಂತದಲ್ಲಿ ಯುದ್ಧನಿರತ ಹೋರಾಟದ ಚಿತ್ರವಿದ್ದರೆ ಎರಡನೇ ಹಂತದಲ್ಲಿ ಸೋತ, ಸಾವಿನ ಸಮಾಧಿಯ ಚಿತ್ರಣಗಳಿವೆ. ಮಾಸ್ತಿಕಲ್ಲಿನ ಮೇಲ್ಭಾಗದಲ್ಲಿ ಮರಣ ಹೊಂದಿದ ಮಹಿಳೆ, ದೇವಲೋಕ ಸೇರಿದ ಸ್ವರ್ಗಾರೋಹಣದ ಸಂಕೇತದ ಚಿತ್ರಗಳಿದ್ದು ಸೂರ್ಯ-ಚಂದ್ರರ ಚಿತ್ರಗಳಿವೆ. ಇದರ ಅರ್ಥ ಆಕೆ ಯಾವುದೋ ಯುದ್ಧದಲ್ಲಿ ಹೋರಾಟ ಮಾಡಿ ವೀರಮರಣ ಹೊಂದಿ ಸ್ವರ್ಗಸ್ಥಳಾಗಿರುವುದನ್ನು ತಿಳಿಸುತ್ತದೆ. ಅಥವಾ ಆಕೆಯ ಗಂಡನೇ ಶತ್ರುಗಳೊಂದಿಗೆ ಯುದ್ಧ ಮಾಡಿ ಮರಣ ಹೊಂದಿರಬಹುದು. ಹೀಗೆ ವೀರ ಮರಣ ಹೊಂದಿದ ಗಂಡನ ಜೊತೆಗೆ ಆತನ ಹೆಂಡತಿಯನ್ನು ಚಿತೆಗೆ ಏರಿಸಿ ಆಕೆಯ ಹೆಸರಿನಲ್ಲಿ ದೇವಾಲಯ ನಿರ್ಮಿಸಿ ಆರಾಧಿಸುವ ಬಹುದೊಡ್ಡ ಸಂಪ್ರದಾಯ ಭಾರತೀಯ ಸಂಸ್ಕೃತಿಯಲ್ಲಿದೆ. ಈ ಮಾಸ್ತಿಕಲ್ಲು ಅಂತಹ ಒಂದು ವೀರವನಿತೆಯ ಸ್ಮಾರಕದ ಕುರುಹು ಇದ್ದರೂ ಇರಬಹುದೆಂದು ಊಹಿ ಸಬಹುದಾಗಿದೆ. ಪುತ್ತೂರು ಸಮೀಪದ ಉಂಬ್ಲೆಬೈಲುವಿನಲ್ಲಿರುವ ಸರಸಮ್ಮನ



ಚಿಕ್ಕಮ್ಮ ದೇವರ ದೇವಾಲಯ

ದೇವಾಲಯ ಇದಕ್ಕೊಂದು ಉದಾಹರಣೆ. ಇದನ್ನು ಕೇಂದ್ರವಾಗಿರಿಸಿಕೊಂಡು ಶಿವರಾಮ ಕಾರಂತರು 'ಸರಸಮ್ಮನ ಸಮಾಧಿ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಉಂಬ್ಳೆಬೈಲಿನ ಸರಸ್ವತಮ್ಮ ಸ್ಫುರದ್ರೂಪಿ ಹೆಣ್ಣುಮಗಳು. ಆಕೆಯನ್ನು ಅದೇ ಗ್ರಾಮದ ನೀಲಾಚಲಯ್ಯ ಎಂಬ ಮಡಿವಂತ, ಆಚಾರವಂತ ಬ್ರಾಹ್ಮಣನೊಂದಿಗೆ ವಿವಾಹ ಮಾಡಲಾಗಿತ್ತು. ಆದರೆ ನೀಲಾಚಯ್ಯ ರೋಗಿಷ್ಠ. ಪುರುಷರ ದಬ್ಬಾಳಿಕೆಯ ಪ್ರತೀಕವಾಗಿ ನೀಲಾಚಲಯ್ಯ ಸರಸ್ವತಮ್ಮಳಿಗೆ ಬಗೆಬಗೆಯ ಹಿಂಸೆಗಳನ್ನು ನೀಡಿದರೂ ಸರಸ್ವತಮ್ಮ ಕೌಟುಂಬಿಕ ಸ್ವಾಸ್ಥ್ಯದ ಹಿನ್ನೆಲೆಯಲ್ಲಿ ಅದನೆಲ್ಲ ಸಹಿಸುತ್ತಾ ಬಂದಳು. ಕೊನೆಗೆ ನೀಲಾಚಲಯ್ಯನ ರೋಗ ಉಲ್ಬಣಿಸಿ ತೀರಿಕೊಂಡನು. ಆಗ ಗ್ರಾಮಸ್ಥರು ಮಡದಿ ಸರಸ್ವತಮ್ಮನನ್ನು ತನ್ನ ಗಂಡ ನೀಲಾಚಲಯ್ಯನ ಚಿತೆಯೊಂದಿಗೆ ಅಗ್ನಿಗೆ ಆಹುತಿ ಮಾಡಿದರು. ಅದೂ ಆಕೆಯ ತೀವ್ರ ವಿರೋಧ, ಪ್ರತಿಭಟನೆಯನ್ನೂ ಲೆಕ್ಕಿಸದೆ ಹಿಡಿದು ಬಲವಂತವಾಗಿ!. 'ದೇವರಾಗುತ್ತೀಯ, ಲೋಕದ ದೇವತೆಯಾಗಿ ಎಲ್ಲರ ಪೂಜೆಗೆ, ನೆನಕೆಗೆ ಸದಾ ಒಳಗಾಗುತ್ತೀಯ' ಎಂದು ನಂಬಿಸಿ ಬಲವಂತವಾಗಿಯೇ ಆಕೆಯನ್ನು ಸತ್ತ ಗಂಡನೊಂದಿಗೆ ಬೆಂಕಿಗೆ ಹಾಕಿ ಸುಟ್ಟರು. ಹಾಗೆ ಸುಟ್ಟ ಜಾಗದಲ್ಲಿ ಒಂದು ಗುಡಿ ಕಟ್ಟಿದರು. ಅದಕ್ಕೆ ಮಾಸ್ತಿಗುಡಿ, ಮಹಾಸತಿ ಗುಡಿ ಎಂದೂ ಮಹಾಸತಿ ಸರಸ್ವತಮ್ಮ ಎಂಬ ಹೆಸರಿನಲ್ಲಿ ಕರೆದರು. ಬರುಬರುತ್ತಾ ಜನರು ಸರಸಮ್ಮನ ಗುಡಿ ಸರಸಿ ಗುಡಿಯಾಗಿ, ಊರಿನ ಕಷ್ಟ-ಸುಖ ವಿಚಾರಿಸುವ, ಸಂಕಟ ಪರಿಹರಿಸುವ, ಇಷ್ಟಾರ್ಥದ ದೈವೀರೂಪ ಪಡೆದುಕೊಂಡಿರುವ ಬಗೆಯನ್ನು ಶಿವರಾಮ ಕಾರಂತರು ಕಾದಂಬರಿ ರೂಪದಲ್ಲಿ ಸ್ವಾರಸ್ಯಕರವಾಗಿ ದಾಖಲಿಸಿದ್ದಾರೆ.

ಸಾಗಸಂದ್ರದ ಅಮ್ಮನವರ ಗುಡಿ ಮಾಸ್ತಿ ಮೂಲದ ದೇವಿಯೆ, ಏಕೆಂದರೆ ಮಾರಮ್ಮ, ಮಣ್ಣಮ್ಮ ಈ ಬಗೆಯ ಬಹುತೇಕ ಗ್ರಾಮದೇವತೆಗಳು ಅಥವಾ ಶಕ್ತಿದೇವತೆಗಳೆಲ್ಲವೂ ಮಹಾಸತಿ ಮೂಲದಿಂದಲೇ ರೂಪುಗೊಂಡವುಗಳು. ಹಾಗಂತ ಅವುಗಳ ಪ್ರಭಾವ, ಶಕ್ತಿ, ಪವಾಡ ಕಡಿಮೆಯೇನಲ್ಲ. ಕಷ್ಟಪರಿಹಾರಕ

ಶಕ್ತಿ ಕಡಿಮೆಯಾಗುವುದಿಲ್ಲ. ಭಕ್ತರುಗಳ ವಿಸ್ತರಣೆಯೂ ಹೆಚ್ಚಾಗಿರುತ್ತದೆ. ಮಾಸ್ತಿ ಮೂಲದ ಶಿರಸಿಯ ಮಾರಿಕಾಂಬೆ ಬಹು ಜನಪ್ರಿಯದೇವತೆ. ಕರ್ನಾಟಕದ ಬಹುದೊಡ್ಡ ಜಾತ್ರೆ ಶಿರಸಿ ಜಾತ್ರೆಯೇ ಆಗಿದೆ. ಈಕೆಯ ಮೂಲವೂ ಮಾಸತಿ ಎಂಬುದನ್ನು ಗಮನಿಸಿದಾಗ ಸಾಗಸಂದ್ರದಲ್ಲಿ ಇಂದಿಗೂ ಸ್ಮಾರಕವಾಗಿರುವ ಮಾಸ್ತಿಕಲ್ಲು ಇಂಥದೊಂದು ಸಂಗತಿಯತ್ತ ಬೆಳಕು ಚೆಲ್ಲುತ್ತದೆ. ಸಾವಿರ ದಂತಕಥೆಗಳಿಗಿಂತ ಚಾರಿತ್ರಿಕ ಅಥವಾ ಸಾಕ್ಷಿಮೂಲದ ಒಂದು ಸಣ್ಣ ಸುಳಿವೂ ಸತ್ಯಸಂಗತಿಯನ್ನು ಅಚ್ಚುಕಟ್ಟಾಗಿ ಕಟ್ಟಿಕೊಡುತ್ತದೆ ಎಂಬುದನ್ನು ಚಾರಿತ್ರಿಕ ಅಂಶಗಳು ಸಾಕ್ಷೀಕರಿಸುತ್ತವೆ.

ಸಾಗಸಂದ್ರದಲ್ಲಿ ಎರಡು ಬಲವಾದ ಕುರುಹುಗಳೂ ಮಹಾಸತಿ ಮೂಲಕ್ಕೆ ಹತ್ತಿರದ ಸಂಪರ್ಕ ಕಲ್ಪಿಸುತ್ತವೆ. ಮೊದಲನೆಯದು ಹುತ್ತದ ಗುಡಿ. ಹುತ್ತದ



ಚಿಕ್ಕಮ್ಮ ಮೆರವಣಿಗೆ ದೇವರು

ಗುಡಿ ಸಾಗಸಂದ್ರದ ಹೊರ ವಲಯದಲ್ಲಿ ನಿಟ್ಟೂರು ಹೊಸಕೆರೆ ರಸ್ತೆಯ ಮೂಗನಾಯಕನ ಕೋಟೆ ರಸ್ತೆಯಲ್ಲಿದೆ. ಸಾಗಸಂದ್ರದ ಕೆಂಪಮ್ಮ ದೇವಿಯ ರಥದ ಬೀದಿಯ ಕೊನೆಯ ತುದಿ ಇದೇ ಆಗಿದೆ. ರಸ್ತೆಬದಿಗೆ ಆತುಕೊಂಡಿರುವ ಹುತ್ತದ ಗುಡಿ ಒಂದು ಸಣ್ಣ ಮಂಟಪ. ಸಣ್ಣ ಮಂಟಪ ಎಂದರೆ ಅದರ ಒಳಗೆ



ಚಿಕ್ಕಮ್ಮ ದೇವರ ಕರಿ ಮತ್ತು ಕೆಂಪು ಸೋಮಗಳು

ದೇವಿಯ ವಿಗ್ರಹವಾಗಲಿ, ದೇವತೆಯ ಚಿತ್ರವಾಗಲಿ ಇಲ್ಲ. ಇದೊಂದು ಹುತ್ತ. ಮೊದಲಿಗೆ ದೊಡ್ಡ ಕೋವೆಯ ಎತ್ತರದ ಹುತ್ತ ಇದ್ದು ಈ ಕೋವೆಯೊಳಕ್ಕೆ ಸುತ್ತಮುತ್ತಲಿನ ಜನರು ತಮ್ಮ ಮನೆಯ ಹಸು, ಎಮ್ಮೆಗಳು ಕರು ಹಾಕಿದಾಗ ಅದರ ಮೀಸಲು ಹಾಲು ಅಂದರೆ ಮೊದಲು ಕರೆದ ಹಾಲನ್ನು ಹಾಕುವ ಸಂಪ್ರದಾಯವಿತ್ತು. ಇಂದಿಗೂ ಅದೇ ಬಗೆಯ ನಂಬಿಕೆಯಿದೆಯಾದರೂ ಹುತ್ತ ಕರಗಿದೆ, ಹುತ್ತದ ಕೋವೆ ಮುಚ್ಚಿಕೊಂಡಿದೆ. ಹುತ್ತವನ್ನು ಬಳಸದಂತೆ ಸಿಮೆಂಟ್‌ನಿಂದ ಪುಟ್ಟಗುಡಿ ನಿರ್ಮಿಸಲಾಗಿದೆ. ಇದಕ್ಕೆ ಕಾರಣ ಮಳೆಗೆ ಹುತ್ತದ ಕೋವೆ ಪೂರ್ಣ ಕರಗಿಹೋಗುತ್ತವೆ ಎಂಬುದು. ಜೊತೆಗೆ ಪ್ರಾಣಿಗಳು ಗಾಳಿ-ಮಳೆಯಿಂದ ಹುತ್ತ ದೇವತೆಗೆ ಮಲಿನವಾಗುತ್ತದೆ ಎಂಬುದಾಗಿದೆ. ಹುತ್ತದ ಪೂಜೆಯನ್ನು ದೇವಿಗೆ ಮೊದಲು ನಡೆಸುವ ಸಂಪ್ರದಾಯ ಇಂದಿಗೂ ಇದೆ. ಇದೇ ಹುತ್ತದಲ್ಲಿ ಚೇಳೂರಿನ ಹೆಣ್ಣುಮಗಳಾದ ಕೆಂಪಮ್ಮದೇವಿ ಪ್ರವೇಶ ಮಾಡಿ ಶಿವೈಕ್ಯಳಾದಳೆಂದು ಬಲವಾಗಿ ನಂಬಲಾಗಿದೆ. ಅದರಂತೆ ನಂಬುವ, ಆಚರಿಸುವ ನಡಾವಳಿ ಇಂದಿಗೂ

ಇದೆ. ಗ್ರಾಮದ ಒಳಗೆ ಸಾಗಸಂದ್ರದ ಕೆಂಪಮ್ಮದೇವಿಯ ಮೆರವಣಿಗೆಯಮ್ಮ ದೇವಿಯ ಗುಡಿಯಿದೆ. ಗ್ರಾಮದ ಪಶ್ಚಿಮದಿಕ್ಕಿನಲ್ಲಿರುವ ಈ ಗುಡಿ ಒಂದು ಕಾಲಕ್ಕೆ ಗ್ರಾಮದಿಂದ ಹೊರಗೆ ಇದ್ದು ಇಂದು ಗ್ರಾಮ ಬೆಳೆದಂತೆ ವಸತಿ ಗೃಹಗಳು ಈ ಗುಡಿಯ ಸುತ್ತ ಆಕ್ರಮಿಸಿಕೊಂಡಿವೆ. ಆದರೂ ಗುಡಿಯ ಪಶ್ಚಿಮಕ್ಕೆ ಇನ್ನೂ ಮನೆಗಳು ನಿರ್ಮಾಣವಾಗಿಲ್ಲ. ಈ ಗುಡಿಗೆ ಚಿಕ್ಕಮ್ಮನ ಗುಡಿ ಎಂದು ಕರೆಯಲಾಗುತ್ತಿದೆ. ಕೆಂಪಮ್ಮ ದೇವಿಯ ಮೆರವಣಿಗೆ ದೇವರು, ಸೋಮಗಳನ್ನು ಇಲ್ಲಿಯೇ ಗದ್ದುಗೆ ಮಾಡಿದ್ದು ನಾಲ್ಕು ಅಡಿ ಎತ್ತರದ ಪೀಠ ಮಾಡಿ, ಅದರ ಮೇಲೆ ಪೆಟ್ಟಿಗೆಯಲ್ಲಿ ಸಾಗಸಂದ್ರ ಕೆಂಪಮ್ಮದೇವಿಯನ್ನು ಪ್ರತಿಷ್ಠಾಪಿಸಲಾಗಿದೆ. ಇದೊಂದು ಆಕರ್ಷಕ ವಿಗ್ರಹ ಮೂರ್ತಿಯಾಗಿದ್ದು ಪಾರ್ವತಿಯ ಮಾದರಿಯಲ್ಲಿ ಕೊರಳಲ್ಲಿ ಕರಡಿಗೆ ಇರುತ್ತದೆ. ಉಳಿದಂತೆ ಛತ್ರಿ, ಚಾಮರ, ನಾಗಾಭರಣದಿಂದ ಅಲಂಕೃತಗೊಂಡ ವಿಗ್ರಹವನ್ನು ಚಿಕ್ಕಮ್ಮ ಎಂತಲೂ ಕರೆಯಲಾಗುತ್ತದೆ. ದಿನವಹಿ ಪೂಜೆ ಇಲ್ಲಿಯೂ ನಡೆಯುತ್ತದೆ. ಇದಕ್ಕೆ ಒಳಗಿನ ಗುಡಿ ಎಂತಲೂ ಕರೆಯುತ್ತಾರೆ. ದೇವಿ ಕೆಂಪಮ್ಮನಿಗೆ ಈಶ್ವರ ತಂದೆಯಾಗಿದ್ದು ಆತನನ್ನು ಎದುರಾಗಿರಿಸಿಕೊಂಡು ಸದಾ ಆತನೊಂದಿಗೆ ಸಂವಾದ ಮಾಡುತ್ತಾಳೆಂಬ ನಂಬಿಕೆ. ಇದಕ್ಕೆ ಪೂರಕವಾಗಿ ಈ ದೇವಿ ಗುಡಿಯಿಂದ ಉತ್ತರಕ್ಕೆ ನೇರವಾಗಿ 300 ಮೀ. ದೂರದಲ್ಲಿ ಈಶ್ವರನ ದೇವಾಲಯವಿದೆ. ಈಶ್ವರನ ಗುಡಿಯು ಹಳೆಯ ಕಾಲದ ಅಂದರೆ 15ನೇ



ದೊಡ್ಡಮ್ಮ ದೇವಸ್ಥಾನದ ಬಸವನ ಗುಡ್ಡೆ



ದೇವಸ್ಥಾನದ ನಿತ್ಯದಾಸೋಹದ ಛತ್ರ

ಶತಮಾನದ ಸರಿಸುಮಾರಿನ ಕಟ್ಟಡವಾಗಿದೆ. ಇದನ್ನು ಇಟ್ಟಿಗೆ ಸುಣ್ಣಕಲ್ಲು, ಗಾರೆ ಗಚ್ಚಿನಿಂದ ನಿರ್ಮಿಸಿದ್ದಾರೆ. 10 ಅಂಕಣದ ದೇವಾಲಯ, ಶಿವಲಿಂಗವಿದೆ. ದೇವಾಲಯದ ಒಳಗೆ ಅಂಕಣ ತೊಲೆಯ ಮಾದರಿಯಲ್ಲಿ ಬಳಪದ ಕಲ್ಲಿನಿಂದ ನಿಲುವುಗಲ್ಲುಗಳನ್ನು ನಿಲ್ಲಿಸಿ ದೇವಾಲಯ ನಿರ್ಮಿಸಲಾಗಿದೆ. ಇಲ್ಲಿನ ಕಲ್ಲುಗಳು ಬಳಪದ ಮಾದರಿಯ ಕಲ್ಲುಗಳಾಗಿದ್ದು ನುಣುಪಾಗಿವೆ. ಮೂರು ಅಡಿ ದಪ್ಪದ ಈ ಕಲ್ಲುಗಳು 12 ಅಡಿ ಎತ್ತರದಲ್ಲಿ ದೇವಾಲಯದ ಮಾಡನ್ನು ನಿರ್ಮಿಸಲಾಗಿದೆ. ಸುಕನಾಸಿ, ಪ್ರಾಂಗಣದ ಕಲ್ಲು, ಕಲ್ಲು ಹಾಸಿನ ಕಟ್ಟಡ. ಇದರ ಪೂರ್ವಕ್ಕೆ ಒಂದು ಬಾಗಿಲು, ದಕ್ಷಿಣಕ್ಕೆ ಮತ್ತೊಂದು ಕಿರು ಬಾಗಿಲಿದೆ. ಈ ಕಿರು ಬಾಗಿಲಿಗೆ ದಕ್ಷಿಣದ ಬಾಗಿಲ ಮೂಲಕ ಗ್ರಾಮದ ಒಳಗಿರುವ ಕೆಂಪಮ್ಮ ದೇವಿಯ ಗರ್ಭಗುಡಿ ನೇರವಾಗಿ ಕಾಣಿಸುತ್ತದೆ. ಈ ಮೂಲಕ ಕೆಂಪಮ್ಮ ದೇವಿ, ಈಶ್ವರ ದೇವರು ಪರಸ್ಪರ ಮಾತನಾಡಿಕೊಳ್ಳುತ್ತಾರೆ ಎಂದು ನಂಬಲಾಗಿದೆ. ಈಶ್ವರನ ಪೂಜೆಯಾಗುವಾಗ ಕೆಂಪಮ್ಮ ದೇವಿಯ ಎದುರೆತ್ತಿ ಮಂಗಳಾರತಿ ಮಾಡುವ ಸಂಪ್ರದಾಯ ಅದರಂತೆ ಕೆಂಪಮ್ಮನ ಪೂಜೆಯಾಗುವಾಗ ಈಶ್ವರ ದೇವರಿಗೂ ಎದುರೆತ್ತಿ ಮಂಗಳಾರತಿ ಮಾಡುವ ಸಂಪ್ರದಾಯ ಸಾಗಸಂದ್ರದಲ್ಲಿ ಇಂದಿಗೂ ಇದೆ. ಸಾಗಸಂದ್ರದಮ್ಮನಿಗೂ 16 ಎಕರೆ ಭೂಮಿಯನ್ನು ರಥದ ಬೀದಿ,

ಮೆರವಣಿಗೆ, ಅಗ್ನಿಕುಂಡ ಮೊದಲಾದ ಧಾರ್ಮಿಕ ಕಾರ್ಯಗಳ ವಿನಿಯೋಗಕ್ಕೆ ಬಿಡಲಾಗಿದೆಯೆಂದು ಹೇಳಲಾಗುತ್ತದೆ. ಈ ಹಿಂದೆ ಕೆಂಪಮ್ಮ ದೇವಿಗೆ ಸೇರಿದ ಒಟ್ಟು ಭೂಮಿ 32 ಎಕರೆ ಇದ್ದು ವಿಶಾಲವಾದ ತೋಪು ಇತ್ತು ಎಂದು ಹೇಳಲಾಗುತ್ತದೆ. ಅದರಂತೆ ಈಶ್ವರ ದೇವರಿಗೂ ಅಷ್ಟೇ ಪ್ರಮಾಣದ ಭೂಮಿಯಿದ್ದು ಗಿಡಮರಗಳು ಕಡಿಮೆಯಾಗಿವೆ. ಸಾಗಸಂದ್ರದ ಕೆಂಪಮ್ಮ ದೇವರ ತೇರುಬೀದಿಯ ಎರಡೂ ಬದಿಗೆ ದೊಡ್ಡ ದೊಡ್ಡ ಮರಗಳಿದ್ದು ಯಾತ್ರಾರ್ಥಿಗಳಿಗೆ ನೆರಳಾಗಿ, ಪೂಜೆಗೆ ಪ್ರೇರಕವಾಗುತ್ತಿತ್ತು. ಇಂದಿಗೂ ಸಣ್ಣಪುಟ್ಟ ಮರಗಳು ಮಾತ್ರ ಅವಶೇಷಗಳಂತೆ ಕಂಡುಬರುತ್ತವೆ. ದೊಡ್ಡ ದೊಡ್ಡ ಆಲ, ಹುಣಸೆ, ಹೊಂಗೆ ಈ ಬಗೆಯ ಮರಗಳು ಬಿದ್ದುಹೋಗಿವೆ.

ಸಾಗಸಂದ್ರದ ಕೆಂಪಮ್ಮ ಚೇಳೂರಿನ ಸಂಗಮೇಶ್ವರ, ವೃಷ್ಟೇಶ್ವರ ಈ ದೇವರುಗಳನ್ನು ಸೋದರರು ಎಂದೇ ನಂಬಿರುವ, ಅದರಂತೆ ಅವುಗಳ ಜಾತ್ರೆ, ಉತ್ಸವಗಳ ಕಾಲದಲ್ಲಿ ಸಾಗಸಂದ್ರದ ಅಮ್ಮ ಕಡ್ಡಾಯವಾಗಿ ಚೇಳೂರಿಗೆ ಬಂದು ಉತ್ಸವ ಮಾಡಿಸಿಕೊಂಡು, ಮಡಿಲಕ್ಕಿ ಸೇವೆ ಮಾಡಿಸಿಕೊಂಡು ಹೋಗುವ ಸಂಪ್ರದಾಯ ಇಂದಿಗೂ ಇದೆ. ಈ ಮೂಲಕ ದೈವಸಂಬಂಧಿ ನೆಲೆಯಲ್ಲಿ ನೇರವಾಗಿ ಸೋದರರನ್ನಾಗಿಸುವ ಜಾನಪದ ಪರಂಪರೆಗೆ ಅನುಗುಣವಾಗಿಯೇ ಸಾಗಸಂದ್ರದ ಕೆಂಪಮ್ಮ ದೇವಿಯ ಹುಟ್ಟಿನ ಹಿನ್ನೆಲೆಯೂ ಬೆಳೆಯುತ್ತದೆ. ಆದರೂ ಮೌಖಿಕ ಪರಂಪರೆಯ ನಂಬಿಕೆ ಮತ್ತು ಹೆಚ್ಚು ಜನಜನಿತವಾಗಿರುವ ಭಾವನೆ ಸಾಗಸಂದ್ರದ ಕೆಂಪಮ್ಮ ಮೂಲತಃ ನರಮನುಷ್ಯ ಸ್ವರೂಪದ ಹೆಣ್ಣುಮಗಳು ಎಂಬುದಾಗಿದೆ.

ಒಟ್ಟಾರೆ ದೇವಿಯ ಹುಟ್ಟಿನ ಮೂಲವನ್ನು ಕೆಣಕಬಾರದು ಎಂಬ ನಂಬಿಕೆಯ ಒಳಗೂ ಕೆಂಪಮ್ಮದೇವಿ ಚೇಳೂರಿನ ಮೂಲದವಳು, ವೀರಶೈವ ಸಂಪ್ರದಾಯಕ್ಕೆ ಸೇರಿದವಳು ಎಂಬ ನಂಬಿಕೆ ಬಲವಾಗಿದೆ. ಈ ಕಾರಣಗಳಿಂದ ಕೆಂಪಮ್ಮನ ದೇವಿ ಅವತಾರ ಅಥವಾ ಈ ಗುಡಿಯ ನಿರ್ಮಾಣದ ಕಾಲಘಟ್ಟ ಯಾವುದು ಎಂಬ ಪ್ರಶ್ನೆಯೂ ಸಹಜವಾಗಿಯೇ ಉಂಟಾಗುತ್ತದೆ.

## ಚೇಳೂರು ತೌರಬಾಗಿನ:

ದೇವಿಯ ತೌರುಮನೆ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೋಬಳಿ ಕೇಂದ್ರವೂ ಆಗಿರುವ ಚೇಳೂರು ಎಂಬುದು ಜನಪದರ ಬಲವಾದ ನಂಬಿಕೆ. ಅದರಂತೆ ನಂಬುವ, ಆ ಸಂಬಂಧಿ ದೇವಿಯನ್ನು ತವರಿಗೆ ಕರೆದು ಕಳಿಸುವ ಸಂಪ್ರದಾಯವೂ ಇದೆ. ಈ ಹಿನ್ನೆಲೆಯಲ್ಲಿ ಜಾತ್ರೆಗೆ ಮುನ್ನ ದೇವಿ ಚೇಳೂರು ತೌರ ಬಾಗಿನಕ್ಕೆ ಹೋಗುವುದು ವಾಡಿಕೆ. ಯುಗಾದಿ ಹಬ್ಬ ಮುಗಿದ ಮೂರನೇ ದಿನದಲ್ಲಿ ಮೆರವಣಿಗೆ ದೇವರು ಇದನ್ನು ಚಿಕ್ಕಮ್ಮಯ್ಯ ಎಂದೂ ಊರ ಒಳಗಣ ಅಮ್ಮ ಎಂದೂ ಕರೆಯುವುದು ವಾಡಿಕೆ. ವಾದ್ಯ ವಿಶೇಷ, ಕೈವಾಡದವರು, ಸೋಮಗಳು, ಕಳಸ, ಬಸವ ಹೀಗೆ ಒಂದು ಪುಟ್ಟ ಪರಿವಾರವೇ ದೇವಿಯ ಜೊತೆಯಲ್ಲಿ ಚೇಳೂರಿಗೆ ಹೋಗುವುದು ವಾಡಿಕೆ. ಹೀಗೆ ಚೇಳೂರಿಗೆ ಬಂದ ದೇವತೆ ಮೊದಲು ಪೇಟೆ ಬೀದಿಯಲ್ಲಿ ಹಾಯ್ದು ಊರ ಬಾಗಿಲಲ್ಲಿ ಈಡುಗಾಯಿ ಒಡೆಸಿಕೊಂಡು ತವರುಮನೆ ಎಂಬ ಭಾವನೆಯೊಂದಿಗೆ ಪಟೇಲರ ಹಳೇಮನೆ ಬಳಿ ನಿಂತು ಈಡುಗಾಯಿ ಒಡೆಸಿಕೊಂಡು ಅಂದು ಸಂಜೆ ಚೇಳೂರಿನಲ್ಲಿ ಪಟೇಲರ ವಂಶಸ್ಥರ ಮನೆಗಳಲ್ಲಿ ಗದ್ದಿಗೆ ಮಾಡಿಸಿಕೊಳ್ಳುತ್ತದೆ. ಮಾರುದಿನ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಆದ ನಂತರ ದೇವಿ ಮೊದಲಿಗೆ ಸಂಗಮೇಶ್ವರನ ಗದ್ದುಗೆಗೆ ಭೇಟಿಕೊಟ್ಟು ಅಲ್ಲಿ ಮಂಗಳಾರತಿ ಮುಗಿಸಿ ನಂತರ ಚೇಳೂರಿನ ಹೊರ ವಲಯದ ದೃಶ್ಯೇಶ್ವರ ದೇವಾಲಯಕ್ಕೆ ಬರುತ್ತದೆ. ಅಲ್ಲಿ ಮಂಗಳಾರತಿ ಮುಗಿಸಿ ಕೊಂಡು ಅಲ್ಲಿಂದ ಭಕ್ತರ ಮನೆಗಳಿಗೆ ಭೇಟಿ ಆರಂಭ ವಾಗುತ್ತದೆ. ಇದಕ್ಕೆ ದೇವರು ಮಡಿಲಕ್ಕಿಗೆ ಬರುವುದು ಎಂದು ಕರೆಯ ಲಾಗುವುದು. ಹೀಗೆ ಚೇಳೂರಿನ ಮನೆಗಳಲ್ಲಿ ಮಡಿಲಕ್ಕಿ ಸೇವೆ ತೆಗೆದುಕೊಂಡು ನಂತರ ನಲ್ಲೂರಿಗೆ ಹೋಗುತ್ತದೆ. ನಲ್ಲೂರಿನ ಗಾಳಿ ಸಿದ್ದಪ್ಪನವರ ಮನೆಯಲ್ಲಿ ದೇವರ ಗದ್ದುಗೆ, ಊರೂಟದ ಏರ್ಪಾಡು ನಡೆದು ದೇವರು ತಂಗಿದ ರಾತ್ರಿ ಗ್ರಾಮದಲ್ಲಿ ಸಾಂಸ್ಕೃತಿಕ ಉತ್ಸವವಾಗಿ ರಾತ್ರಿ ಪೂರಾ ದೇವರ ಮೆರವಣಿಗೆ,

ಸೋಮನ ಕುಣಿತ, ಕೋಲಾಟ ಹೀಗೆ ಜನಪದ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆಯುತ್ತವೆ. ಇದರಲ್ಲಿ ನಲ್ಲೂರು ಹಾಗೂ ಆ ಸುತ್ತಿನ ಹುಚ್ಚರಂಗಪ್ಪನಹಟ್ಟಿ, ಬೇಡನಕಟ್ಟೆ, ಮಲಮಾಚಕುಂಟೆ, ದಿಬ್ಬದಹಳ್ಳಿ ಗೊಲ್ಲರಹಟ್ಟಿ, ಅಂತಾಪುರ ಗ್ರಾಮಗಳ ಆಸಕ್ತ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ. ರಾತ್ರಿಯೆಲ್ಲಾ ದೇವರ ಉತ್ಸವ ನಡೆದು ಬೆಳಿಗ್ಗೆ ದೇವರು ಊರಾಡುವ, ಮಡಿಲಕ್ಕಿ ಸೇವೆಗೆ ಹೊರಟು ಮಧ್ಯಾಹ್ನದ ವೇಳೆಗೆ ಈ ಕಾರ್ಯವನ್ನು ಮುಗಿಸುತ್ತಾರೆ. ಮತ್ತೆ ಚೇಳೂರಿಗೆ ಬಂದು ಪಟೇಲರ ಮನೆಯಲ್ಲಿ ಗದ್ದಿಗೆ ಮಾಡಿ ಮಡಿಲಕ್ಕಿ ಸೇವೆ ಮುಂದುವರಿಸುತ್ತದೆ. ನಂತರ ದೇವರು ಹೊರಟು ನಿಲ್ಲುತ್ತದೆ. ಚೇಳೂರಿಗೆ ಬಂದ ದೇವಿ ಕೆಂಪಮ್ಮಳನ್ನು ಹೊರಡಿಸುವುದು ಕಷ್ಟವೆಂದು, ತುಂಬಾ ಸತಾಯಿಸುತ್ತಾಳೆ ಎಂದು ಬಣ್ಣಗಾರ ಕೆಂಪರಾಜು ಹೇಳುತ್ತಾರೆ. ಹಿಂತಿರುಗಿ ಸಾಗಸಂದ್ರಕ್ಕೆ ಹೊರಡುವಾಗಲೂ ಒಂದೊಂದೇ ಹೆಜ್ಜೆ ಇಟ್ಟು ಸಾಗುತ್ತದೆ. ಹೀಗೆ ಚೇಳೂರಿನ ಮಡಿಲಕ್ಕಿ ಕಾರ್ಯಕ್ಕೆ, ದೇವಿ ಕೆಂಪಮ್ಮ ತನ್ನ ಜಾತ್ರೆಗೆ ಅಣ್ಣಗಳಾದ ದೃಶ್ಯೇಶ್ವರ, ಸಂಗಮೇಶ್ವರರನ್ನು ಆಹ್ವಾನಿಸುತ್ತಾಳೆಂಬ ಬಲವಾದ ನಂಬಿಕೆಯಿದೆ. ಮುಂದೆ ದೇವರು ಇತರ ಒಕ್ಕಲು ಗ್ರಾಮಗಳಾದ ಕಚ್ಚೇನಹಳ್ಳಿ, ಗಡಿಯಾಕನಹಳ್ಳಿ, ಕೊಡಿಯಾಲ, ಮೂಗನಾಯಕನಕೋಟೆ ಗ್ರಾಮಗಳಲ್ಲಿ ಆಡುತ್ತಾ ಮಡಿಲಕ್ಕಿ ಸೇವೆ ತೆಗೆದುಕೊಂಡು ಹಿಂತಿರುಗುತ್ತದೆ.

## ಶರಣರ ಸಮಾಧಿ:

ಸಾಗಸಂದ್ರ ಕೆಂಪಮ್ಮ ದೇವಿಯ ಹೊರಗುಡಿಯ ಪೂರ್ವಕ್ಕೆ ಸಣ್ಣಪ್ಪಜ್ಜ ಎಂಬುವರ ಖಾಸಗಿ ಜಮೀನಿದೆ. ಈ ಜಮೀನಿನಲ್ಲಿ ಒಂದು ಪ್ರಾಚೀನ ಸಮಾಧಿ ಇದ್ದು ಇದನ್ನು ಈ ಗ್ರಾಮದ ಮೂಲಪುರುಷರದ್ದು ಎಂದು ಭಾವಿಸಿದ್ದಾರೆ. ಸಾಗಸಂದ್ರವನ್ನು ಸಾಗ-ಸಾಕಿ ಎಂಬ ಶರಣ ಶರಣೆಯರು ಪ್ರತಿಷ್ಠಾಪಿಸಿದರೆಂದೂ, ಅವರು ಕಲ್ಯಾಣ ಪಟ್ಟಣದ ಕಡೆಯಿಂದ ಬಂದು ಈಗಿನ ಸಾಗಸಂದ್ರದಲ್ಲಿ ನೆಲೆಸಿದರೆಂದು, ಅವರು ಇಲ್ಲಿ ನೆಲೆಸಿದ್ದರಿಂದಾಗಿಯೇ ಗ್ರಾಮಕ್ಕೆ ಸಾಗನಸಂದ್ರ

ಎಂದಾಗಿ ಮೌಖಿಕವಾಗಿ ಸಾಗಸಂದ್ರ ಎಂದಾಗಿದೆ. ಸಾಗ ಮತ್ತು ಸಂದ್ರ ಎಂಬ ಎರಡು ಭಿನ್ನಭಿನ್ನ ರೂಪದ ಪದಗಳ ಕೂಡಾಣಿಕೆಯಿಂದಾಗಿ ಸಾಗಸಂದ್ರ ಎಂದಾಗಿದೆ. ಅಂದರೆ ಸಾಗ ಎಂಬ ವ್ಯಕ್ತಿ ಮತ್ತು ಸಂದ್ರ ಎಂದರೆ ಸಾಗರ, ಕೆರೆ, ಜಲಧಾರೆ, ನೀರು ಹರಿಯುವ, ಸಂಗ್ರಹ ಪ್ರದೇಶ ಎಂದೆಲ್ಲಾ ಅರ್ಥಗಳಿವೆ. ಹಾಗಾಗಿ ವ್ಯಕ್ತಿ ಮತ್ತು ನೀರು ಈ ಎರಡೂ ಮೂಲದಿಂದಾಗಿ ಸಾಗಸಂದ್ರ ಎಂದಾಗಿದೆ.

ಸಾಗಸಂದ್ರದಲ್ಲಿ ಇಂದಿಗೂ ಮೌಖಿಕವಾಗಿ ಸಾಗ-ಸಾಕಿ ಎಂಬುವವರ ಬಗೆಗೆ ತಮ್ಮದೇ ಆದ ಕಥೆ ಹೇಳುತ್ತಾರೆ. ಇದಕ್ಕೆ ಮೂಲವಾಗಿ ಒಂದು ಪ್ರಾಚೀನ ಸಮಾಧಿಯನ್ನು, ಗೌರವಾದರಗಳಿಂದ ಪೂಜಿಸುವ, ಮಾತ್ರವಲ್ಲ ಕೆಂಪಮ್ಮ ದೇವತೆಯ ಮೆರವಣಿಗೆ ಉತ್ಸವ ಹಾಗೂ ದೇವಿ ತೇರನ್ನು ಏರುವ ಮೊದಲು ಊರ ಹೊರಗಿನ ಈ ಸಮಾಧಿಗೆ ಮಂಗಳಾರತಿ ಮಾಡಿಸುವ ಸಂಪ್ರದಾಯವಿದೆ. ಈ ಸಮಾಧಿ ಗ್ರಾಮದ ಮೂಲಪುರುಷರದ್ದೇ ಅಥವಾ ಗ್ರಾಮದ ಶ್ರೇಯೋಭಿವೃದ್ಧಿಗಾಗಿ ಗ್ರಾಮದ ಗೌರವ, ರಕ್ಷಣೆಗಾಗಿ ಬಲಿಯಾದ ವೀರನ ಸಮಾಧಿಯೇ ಅಥವಾ ಪ್ರತಿಯಾಗಿ ಚಿತೆ ಏರಿದ ಆತನ ಮಡದಿಯ ಸ್ಮಾರಕವೋ ಖಚಿತವಾಗಿಲ್ಲ.

### ಜಾತ್ರೆಯ ಆಚರಣೆಗಳು:

ಕೆಂಪಮ್ಮ ದೇವಿಯ ಜಾತ್ರೆ ಒಂದು ವಾರಗಳ ಕಾಲ ಕ್ರಮಬದ್ಧವಾಗಿ ನಡೆಯುತ್ತದೆ. ಈ ಒಂಬತ್ತು ದಿನಗಳೂ ಒಂದೊಂದು ವಿಶೇಷತೆ ಇರುತ್ತದೆ. ಸಾಮಾನ್ಯವಾಗಿ ಚೈತ್ರಮಾಸದ ಗುರುವಾರದಿಂದ ಆರಂಭವಾಗುವ ಜಾತ್ರಾ ಮಹೋತ್ಸವದಲ್ಲಿ ದಿನಕ್ಕೊಂದರಂತೆ ಒಂಬತ್ತು ದಿನಗಳೂ ಒಂದೊಂದು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ನಡೆಸಿಕೊಂಡು ಬರಲಾಗುತ್ತದೆ.

ಮೊದಲಿಗೆ ಅಕ್ಕನವರ ಪೂಜಾ ಕಾರ್ಯಕ್ರಮವಿದ್ದು ಇದು ಗುರುವಾರ

ರಾತ್ರಿ ಸೇವೆ ಆರಂಭವಾಗುತ್ತವೆ. ದೇವಾಲಯದ ಪೌಳಿಯ ಒಳಭಾಗದಲ್ಲಿರುವ ಅಕ್ಕನವರು ದೇವಿಗೆ ಅಭಿಷೇಕ, ರಾಕ್ಷಸಪ್ಪಗಳಿಗೆ ಮಾಂಸಾಹಾರ ಭೋಜನದ ಎಡೆ ಅರ್ಪಣೆ ಇರುತ್ತದೆ. ಈ ಸಂದರ್ಭದಲ್ಲಿ ದೇವಾಲಯದ ಹೊರಗೆ ಮರಿ, ಕೋಳಿ ಕತ್ತರಿಸಿ, ಅದರಿಂದ ತಯಾರಿಸಿಕೊಂಡು ಬಂದ ಎಡೆಯನ್ನು ಹಾಕಲಾಗುತ್ತದೆ. ಗ್ರಾಮದ ಊರ ಒಳಗಿರುವ ಚಿಕ್ಕಮ್ಮಯ್ಯ ಗುಡಿಯಿಂದ ಮಂಗಳಕಳಸ, ಆರತಿ, ಬಾನ ಹೊರಟು ರಾತ್ರಿಯೆಲ್ಲಾ ಪೂಜಾ ಕಾರ್ಯಕ್ರಮ ನಡೆಯುತ್ತದೆ.

## ದೇವರಿಗೆ ಲಿಂಗಧಾರಣೆ:

ಶೈವ ಸಂಪ್ರದಾಯದಲ್ಲಿ ಲಿಂಗಪೂಜೆಗೆ ವಿಶೇಷ ಸ್ಥಾನಮಾನ. ಶಿವಾಚಾರದ ಪ್ರಕಾರ ಶಿವಪೂಜೆಗೆ ಮೊದಲ ಗೌರವ. ಬಸವಾದಿ ಶಿವಶರಣರ ಕಟ್ಟುಲಿಂಗದ ಪರಿಕಲ್ಪನೆ ಇದೇ ಆಗಿದೆ. ಅಂಗದ ಮೇಲೆ ಲಿಂಗ ಧರಿಸಿದವನೇ ಶಿವಭಕ್ತ. ಈತ ಇರುವಲ್ಲಿಯೇ ಶಿವನ ಸಾಕ್ಷಾತ್ಕಾರ ರೂಪ. ಇದೇ ಲಿಂಗಧಾರಣೆಯ ಮಂತ್ರ. ಸಾಗಸಂದ್ರದ ಕೆಂಪಮ್ಮನಿಗೆ

ಜಗನ್ಮಾತೆ ಪರ ಜಗವ ಗೆದ್ದವಳೆ ಪರ
ಶಿವನ ಕುಮಾರತಿ ನಿತ್ಯಮಂಗಳೆ ಲಿಂಗರೂಪಿ
ನಿಜರೂಪದಮ್ಮ ಹುತ್ತಮೇಗಳ ಕುಮಾರತಿ
ನಿತ್ಯಪೂಜೆಯ ಕೊಂಬ ಶಿವಕುಮಾರತಿ ಪರ

ಹೀಗೆ ಹೊಗಳುವಾಗ ಆಕೆಯು ಹುತ್ತರೂಪಿ, ಪರಶಿವನ ಮಗಳೆಂದು ನಿತ್ಯಪೂಜೆ ಪಡೆಯುವ ಲಿಂಗಧಾರಣೆ ಎಂದೆಲ್ಲಾ ಹೇಳುತ್ತಾರೆ. ಇದರ ಪ್ರಕಾರವಾಗಿಯೇ ಆಚರಣೆಯೂ ರೂಢಿಯಲ್ಲಿದೆ. ಇದರ ಪ್ರಕಾರ ಜಾತ್ರೆಯ ಮುನ್ನ ಮೊದಲ ಕಾರ್ಯ ಲಿಂಗಧಾರಣೆ. ಇದು ಕ್ರಮಬದ್ಧವಾಗಿ, ಶಾಸ್ತ್ರೋಕ್ತವಾಗಿ ನೆರವೇರುತ್ತದೆ. ಇದಕ್ಕೆ ಲಿಂಗಧಾರಣೆ ಮತ್ತು ಶಿವಪೂಜೆ ಕಾರ್ಯಕ್ರಮ ಎಂದೇ

ಕರೆಯಲಾಗುವುದು.

ಮೂಗನಾಯಕನಕೋಟೆಯ ಮಠದ ಅಯ್ಯನವರ ಪಿರಕದವರು ಇಂದಿಗೂ ವಂಶಪಾರಂಪರ್ಯವಾಗಿ ಲಿಂಗಧಾರಣೆ ಹಾಗೂ ಲಿಂಗಪೂಜೆಯ ಕಾರ್ಯವನ್ನು ನೆರವೇರಿಸುತ್ತಾ ಬರುತ್ತಿದ್ದಾರೆ. ಈ ಸಂದರ್ಭದಲ್ಲಿ ದೇವಿಗೆ ಪುಣ್ಯಾವರ್ಧನೆ, ಲಿಂಗಧಾರಣೆ ಹಾಗೂ ಲಿಂಗಪೂಜೆ, ಅಭಿಷೇಕ ಈ ಎಲ್ಲವೂ ಒಮ್ಮೆಗೆ ನಡೆಯುತ್ತದೆ. ಮೂಗನಾಯಕನಕೋಟೆಯ ವೇ|| ಸುರೇಶ್ ಹಾಗೂ ಅಳಿಲಘಟ್ಟದ ವೇ|| ಗಿರೀಶ್ ಸಂಗಡಿಗರು ಕೂಡಿಕೊಂಡು ಈ ಲಿಂಗಧಾರಣೆಯ ಕಾರ್ಯವನ್ನು ನೆರವೇರಿಸುತ್ತಾ ಬರುತ್ತಿದ್ದಾರೆ. ಇದಾದ ತರುವಾಯ ಪ್ರಥಮ ಆರತಿ, ಬಾನ, ಮಡೆ ಕಾರ್ಯಕ್ರಮ ನಡೆಯುತ್ತದೆ. ಇದು ಮೂಗನಾಯಕನಕೋಟೆಯ ಭಕ್ತರಿಂದ ನೆರವೇರುತ್ತದೆ. ಹಾಲುಮತ ಸಮುದಾಯದವರು ಆರತಿ, ದೇವಿಯ ಸೋಮಪ್ಪ, ರಾಕ್ಷಸಪ್ಪಗಳಿಗೆ ಮಾಂಸಾರಾಧನೆ, ಎಡೆಗಳನ್ನು ಅಂದು ಅರ್ಪಿಸುತ್ತಾರೆ. ಆರತಿ, ಬಾನ, ಮಡೆಯ ಈ ಕಾರ್ಯದಲ್ಲಿಯೂ ಮೂಗನಾಯಕನಕೋಟೆಯಿಂದ ಆರತಿ ಬರುವಾಗ ನಡೆಮುಡಿ, ಅರೆ ವಾದನಗಳೊಂದಿಗೆ ಆಗಮಿಸುವುದು. ಅದನ್ನು ಗೌರವಯುತವಾಗಿ ಸಾಗಸಂದ್ರದ ದೇವಾಲಯದ ಕೈವಾಡದವರು ಸ್ವಾಗತಿಸುವುದು ಒಂದು ಸೌಹಾರ್ದ ಕಾರ್ಯಕ್ರಮವಾಗಿ ಆಕರ್ಷಕವಾಗಿ ನಡೆಯುತ್ತದೆ. ಈ ದಿನದಿಂದ ಜಾತ್ರೆಯ ರಂಗು ಆರಂಭವಾಗುತ್ತದೆ.

## ಅಗ್ನಿಕೊಂಡ ಉತ್ಸವ:

ಸಾಮಾನ್ಯವಾಗಿ ಅಗ್ನಿಕೊಂಡ ಸೇವೆ ಶಕ್ತಿ ದೇವತೆಗಳ ಆರಾಧನೆಯ ಒಂದು ಪ್ರಮುಖ ಭಾಗ. ಗಾವು ಸಿಗಿಯುವುದು, ಸಿಡಿ ಇವುಗಳಂತೆ ಅಗ್ನಿಕೊಂಡ ಹಾಯುವುದು ಒಂದು ಪವಿತ್ರ ವ್ರತ ಎಂಬಂತೆ ಜನಪದರು ಭಾವಿಸಿದ್ದಾರೆ. ಮನುಷ್ಯ ತನ್ನ ಕರ್ಮಫಲದ ನಾಶದ ರೂಪವಾಗಿ ಕನಿಷ್ಟ ದಂಡನೆಯ ಪ್ರಮಾಣದಲ್ಲಿ ದೇವರ ಹೆಸರಿನಲ್ಲಿ ಬೆಂಕಿ ಕೆಂಡದ ಮೇಲೆ ನಡೆದುಹೋಗುವುದು

ಇಲ್ಲಿನ ಪ್ರಧಾನ ಆಶಯ. ಈ ಮೂಲಕ ತಪ್ಪಿನ ದೋಷ ನಿವಾರಣೆಯಾಗಿ ಮುಂದಿನ ಒಳಿತಿಗೆ ಪ್ರೇರಕ ಎಂಬುದು ಜನಪದರ ನಂಬಿಕೆ. ಅದೇ ನಂಬಿಕೆಯನ್ನು ವೈಚಾರಿಕವಾಗಿ ವ್ಯಾಖ್ಯಾನಿಸಿದ್ದಾರೆ. ಬಹುತೇಕ ಶಕ್ತಿದೇವತೆಗಳು ಪುರುಷರ ಅಹಂಕಾರ, ಸ್ತ್ರೀ ದೌರ್ಜನ್ಯದ ಪ್ರತೀಕವಾಗಿ ಆಕೆ ಬಲವಂತವಾಗಿ ಚಿತೆಯೇರಿ ಪ್ರಾಣಾರ್ಪಣೆ ಮಾಡಿಕೊಂಡವಳು. ನಂತರ ಮಾಸ್ತಿ ಮಹಾಸತಿಯಾಗಿ, ಮಹಾದೇವಿಯಾಗಿ ಜನಾಂತರಂಗದಲ್ಲಿ ಭಕ್ತಿ ಭಾವನೆಗೆ ಪ್ರೇರಕಳಾಗಿದ್ದಾಳೆ ಎಂಬುದಾಗಿ ವ್ಯಾಖ್ಯಾನಿಸುತ್ತಾರೆ. ಹಾಗಾಗಿ ಮಣ್ಣಮ್ಮ, ಚೌಡಮ್ಮ, ಕೆಂಪಮ್ಮ, ದುರ್ಗಿ, ಮಾರಮ್ಮ, ಕೊಲ್ಲಾಪುರದಮ್ಮ ಈ ಬಗೆಯ ದೇವತೆಗಳ ಉತ್ಸವದಲ್ಲಿ ಅಗ್ನಿಕೊಂಡ ಆಚರಣೆ ಒಂದು ಪವಿತ್ರ ವ್ರತವಾಗಿ ರೂಪುಗೊಳ್ಳುತ್ತದೆ. ಇದೇ ಹಿನ್ನೆಲೆಯಲ್ಲಿ ಸಾಗಸಂದ್ರದ ಕೆಂಪಮ್ಮದೇವಿಗೂ ಅಗ್ನಿಕೊಂಡ ಸೇವೆ ಆಕರ್ಷಕವಾಗಿ ನೆರವೇರುತ್ತದೆ.

ಅಗ್ನಿಕೊಂಡ, ಅಗ್ನಿಗೊಂಡ, ಕೆಂಡ ತುಳಿಯುವುದು ಮುಂತಾದ ಜನಪದ ಭಾವನೆಗಳಿಂದ ಕರೆದುಕೊಳ್ಳುವ ಅಗ್ನಿಕೊಂಡ ಉತ್ಸವ ಸಾಗಸಂದ್ರದಲ್ಲಿ ಬೃಹತ್ ಪ್ರಮಾಣದಲ್ಲಿ ನೆರವೇರುತ್ತದೆ. ಮೊದಲ ದಿನ ದೇವಿಗೆ ಪುಣ್ಯಸ್ನಾನ, ಲಿಂಗದೀಕ್ಷೆ, ಪ್ರಥಮ ಆರತಿ, ಮಡೆ, ಬಾನ, ದೇವರ ಮೆರವಣಿಗೆ, ಮಡಿಲಕ್ಕಿ ಇವೆಲ್ಲವೂ ಮುಗಿದು ಎರಡನೇ ದಿನದಲ್ಲಿ ಬೆಳಗಿನ ಜಾವ ಸೂರ್ಯೋದಯ ಸಂದರ್ಭದಲ್ಲಿ ಅಗ್ನಿಕೊಂಡ ಸೇವೆ ನಡೆಯುತ್ತದೆ. ಮೊದಲು ದೇವಿ ಅಳಿಲಘಟ್ಟಕ್ಕೆ ಮಡಿಲಕ್ಕಿ ಸೇವೆಗೆ ಹೋಗುತ್ತದೆ. ಅಂದು ಸಾಗಸಂದ್ರ ಅಳಿಲಘಟ್ಟದ ನಡುವಿನ ರಸ್ತೆ ಅಲಂಕಾರಗೊಂಡು ದೇವಿಯನ್ನು ಸಡಗರದಿಂದ ಕರೆದುಕೊಂಡು ಹೋಗುತ್ತಾರೆ. ಜಾತ್ಯಾತೀತವಾಗಿ ಗ್ರಾಮಸ್ಥರ ಮನೆಗಳಲ್ಲಿ ಮಡಿಲಕ್ಕಿ ಸೇವೆ, ಸೋಮಗಳ ಕುಣಿತ, ಅಳಿಲಘಟ್ಟದ ವಿವಿಧ ದೇವರುಗಳಿಗೆ ಪೂಜೆ ಮುಗಿಸಿಕೊಂಡು ಸಂಜೆ ವೇಳೆಗೆ ಸಾಗಸಂದ್ರಕ್ಕೆ ಹಿಂತಿರುಗುತ್ತದೆ. ನಂತರ ಈ ವೇಳೆಯಲ್ಲಿ ನಡೆಯುವ ದೇವರ ಮೆರವಣಿಗೆ, ಕತ್ತಿ ಹೂಳ್ಗ, ಚಾಟಿ ಹೂಳ್ಗ ಸೇವೆಗಳು

ರಂಜನೀಯವಾಗಿರುತ್ತವೆ. ಮನೆಮನೆಗಳಿಗೂ ಹೋಗುವ ಮುನ್ನ ಅಗ್ನಿಕೊಂಡದ ಮೆರವಣಿಗೆ ನಡೆಯುತ್ತದೆ.

ಅಗ್ನಿಕೊಂಡದ ಗುಂಡಿ ಕೆಂಪಮ್ಮದೇವಿಯ ಹೊರಗುಡಿಯ ಮುಂಭಾಗದಲ್ಲಿ ರಥಬೀದಿಯಲ್ಲಿದೆ. ಇದನ್ನು ಸಂಸ್ಕಾರಗಳಿಂದ ಅಗ್ನಿಗುಂಡಿ ಶುದ್ಧಿ ಮಾಡಲಾಗುತ್ತದೆ. ಕೋಲುಕಾರರು ಅಗ್ನಿಕುಂಡಕ್ಕೆ ಬೇಕಾದ ಒಂದೇ ಜಾತಿಯ ಸೌದೆಯನ್ನು ಅದರಲ್ಲಿಯೂ ಹುಣಸೆ ಸೌದೆಯನ್ನು ಮಾತ್ರ ಸಂಗ್ರಹಿಸಿ ಹಿಂದಿನ ದಿನವೇ ಸಿಗಿದು ಸಿದ್ಧ ಮಾಡಿ ಇಟ್ಟುಕೊಂಡಿರುತ್ತಾರೆ. ದೇವರ ತೀರ್ಥ, ಪ್ರಸಾದ ತಂದು ಈ ಕಟ್ಟಿಗೆಯ ಮೇಲೆ ಹಾಕಿ ಅರ್ಧರಾತ್ರಿಯ ಸುಮಾರಿಗೆ ನಿಗಿನಿಗಿ ಕೆಂಡ ಸಿದ್ಧವಾಗುತ್ತದೆ. ಕೆಂಪಮ್ಮದೇವಿಯ ಆಗಮನವಾಗುತ್ತದೆ. ಅಗ್ನಿಕೊಂಡದ ಬಳಿಗೆ ದೇವಿಯ ಮೆರವಣಿಗೆಯಮ್ಮ, ಪಟ್ಟದ ಬಸವ ಹಾಗೂ ಕಳಸ ಹೊತ್ತ ಹೆಣ್ಣುಮಗಳು ಬರುತ್ತಾರೆ. ಕಳಸವನ್ನು ಗ್ರಾಮದ ಒಳಗಿನ ಗುಡಿಯ ಕೆಂಪಮ್ಮದೇವಿಯ ಗುಡಿಯಿಂದ ಮೈನೆರೆಯದ ಕೋರುಹುಡುಗಿ ದೇವಿಯ ಕಳಸ ಹೊರುವುದು ಸಾಮಾನ್ಯ. ವಿಶೇಷವಾಗಿ ಪೂಜಾರಿಗಳ ಮನೆತನಕ್ಕೆ ಸೇರಿದ ಹೆಣ್ಣುಮಗು ಕಳಸ ಹೊರುವುದು ರೂಢಿಯಾಗಿದೆ. ಹೊಸ ಸೀರೆ, ಹೊಸ ರವಿಕೆಯುಟ್ಟ ಹೆಣ್ಣುಮಗು ಕಳಸ ಹೊರುತ್ತದೆ. ಮುಂದೆ ಬಸವ, ಅದರ ಹಿಂದೆ ಕಳಸ ಹೊತ್ತ ಹುಡುಗಿ, ಮಗ್ಗುಲಲ್ಲಿ ಕೆಂಪಮ್ಮ ದೇವರನ್ನು ಹೊತ್ತವರು ನಿಂತಿರುತ್ತಾರೆ. ಸೂರ್ಯೋದಯವಾಗುವುದಕ್ಕೂ ಮುಂಚೆ ದೇವಿಯ ಎದುರಿನಲ್ಲಿ ಅಗ್ನಿಕುಂಡ, ಅಗ್ನಿಗುಂಡಿಗೆ ಪೂಜೆ ನಡೆಯುತ್ತದೆ. ಮಹಾಮಂಗಳಾರತಿ ನಡೆದ ತರುವಾಯ ಮೊದಲು ದೇವಿಯ ಪಟ್ಟದ ಬಸವನನ್ನು ಅಗ್ನಿಕುಂಡದಲ್ಲಿ ನುಗ್ಗಿಸಿ ನಡೆಸಲಾಗುವುದು. ಅದರ ಹಿಂದೆ ಕಳಸ ಹೊತ್ತ ಹೆಣ್ಣುಮಗು ಹೋಗುತ್ತದೆ. ನಂತರ ನೆರೆದಿದ್ದ ಸಾವಿರ, ಸಾವಿರ ಜನಸ್ತೋಮ ನಿಧಾನವಾಗಿ ಒಬ್ಬೊಬ್ಬರಂತೆ ಬೆಂಕಿಯಲ್ಲಿ ನಡೆಯುತ್ತಾರೆ. 10-15 ಅಡಿ ದೂರದ ಬೆಂಕಿಯ ರಾಶಿಯಲ್ಲಿ ನಡೆಯುವುದು ಮೊದಲಿಗೆ ಭಯಾನಕ ಅನ್ನಿಸಿದರೂ ನಂತರ ಹರ್ಷವೆನಿಸುತ್ತದೆ.

ಬರಿಕಾಲಲ್ಲಿ ಬೆಂಕಿಯ ಮೇಲೆ ನಡೆದರೂ ಸುಟ್ಟ ಅನುಭವವಾಗಲಿ, ನೋವು, ಬೊಬ್ಬೆಯಾಗಲಿ ಆಗುವುದಿಲ್ಲ. ಇದೇ ಅಗ್ನಿಕೊಂಡದ ವಿಶೇಷ.

## ಅಗ್ನಿಕೊಂಡದ ಫಲಗಳು:

ಕೆಂಪಮ್ಮದೇವಿಯ ಅಗ್ನಿಕೊಂಡ ತುಳಿಯುವುದರಿಂದ ಹಲವು ಬಗೆಯ ದೋಷಗಳಿಗೆ ಪರಿಹಾರ ಎಂಬ ನಂಬಿಕೆ ಬಲವಾಗಿದೆ. ಶಾರೀರಿಕ ತೊಂದರೆಗಳಾದ ಮೈಕೈಗಳಲ್ಲಿ ಮೂಡುವ ನರಗುಳ್ಳೆ, ವಾಸಿಯಾಗದ ಗಾಯಗಳು, ಖಾಯಿಲೆ, ತಲೆಬೇನೆ ಇವು ವಾಸಿಯಾಗುವುದೆಂದು ಬಲವಾಗಿ ನಂಬಲಾಗಿದೆ. ಜೊತೆಗೆ ಮಕ್ಕಳ ಫಲ, ವಿವಾಹ ಸಮಸ್ಯೆ, ಕೌಟುಂಬಿಕ ಸಮಸ್ಯೆ ಈ ಬಗೆಯ ಸಮಸ್ಯೆ ಪರಿಹಾರವಾಗುತ್ತವೆ ಎಂದು ನಂಬಲಾಗಿದೆ. ಈ ಬಗೆಗೆ ಮೊದಲೇ ಹರಕೆ ಕಟ್ಟಿಕೊಂಡು ಅನುಕೂಲ ಪಡೆದು ಅಥವಾ ಶುಭಫಲ ಅಪೇಕ್ಷಿಸಿಯೂ ಅಗ್ನಿಕೊಂಡ ಹಾಯುವ ಸಂಪ್ರದಾಯ ಬೆಳೆದುಬಂದಿದೆ. ಪ್ರತಿವರ್ಷ ಜಾತ್ರೆಯ ಬಹುದೊಡ್ಡ ಆಕರ್ಷಣೆಯಾಗಿ, ಅಗ್ನಿಕುಂಡ ಉತ್ಸವ ನಡೆಯುತ್ತದೆ. ಜಾತ್ರೆ ಆರಂಭವಾದ ಎರಡನೇ ದಿನ ಭಾನುವಾರ ಬೆಳಗಿನ ಜಾವಕ್ಕೆ ಸರಿಯಾಗಿ ಅಗ್ನಿಕುಂಡ ಉತ್ಸವ ಆಕರ್ಷಕವಾಗಿ ನೆರವೇರುತ್ತದೆ. ಹಿಂದಿನ ರಾತ್ರಿ ಬಂದು ಸಾಗಸಂದ್ರದಲ್ಲಿ ತಂಗಿದ್ದ ಭಕ್ತರು ಬೆಳಗಿನ ಅಗ್ನಿಕೊಂಡ ಉತ್ಸವದಲ್ಲಿ ಭಾಗವಹಿಸುತ್ತಾರೆ. ಇದು ಈ ಜಾತ್ರೆಯ ಬಹುದೊಡ್ಡ ಆಕರ್ಷಣೆಯಾಗಿದ್ದು ಸುಮಾರು 8 ರಿಂದ 10 ಸಾವಿರ ಭಕ್ತರು ಕಲೆಯುವುದು ಈ ಉತ್ಸವದ ವಿಶೇಷವಾಗಿದೆ. ಇದು ಸಾಗಸಂದ್ರದ ಕೆಂಪಮ್ಮದೇವರ ಜಾತ್ರೆಯ ಬಹುದೊಡ್ಡ ಆಕರ್ಷಣೆ.

## ಮಹಾರಥೋತ್ಸವ:

ಸಾಗಸಂದ್ರದ ಕೆಂಪಮ್ಮದೇವಿಯ ರಥೋತ್ಸವವೂ ಒಂದು ಜನಾಕರ್ಷಣೆಯಾಗಿದೆ. ದೇವಿಗೆ ಸೇರಿದ ತೇರುಬೀದಿ, ರಥಬೀದಿ, ರಥದ ಮನೆ ಪ್ರತ್ಯೇಕವಾಗಿಯೇ ನಿರ್ಮಾಣವಾಗಿದೆ. ಎರಡು ಬಲವಾದ ಕಲ್ಲುಗಾಲಿ (ಚಕ್ರ)

ಗಳಿದ್ದು ಮರದ ಎತ್ತರವಾದ ತೇರನ್ನು 15 ದಿನಗಳಿಗೂ ಮುಂಚಿತವಾಗಿಯೇ ಸಂಪ್ರದಾಯಬದ್ಧವಾಗಿ ತೇರು ಕಟ್ಟುವ ಕಾರ್ಯ ಆರಂಭವಾಗುತ್ತದೆ. ಇದಕ್ಕೆ ತೇರುಕಟ್ಟುವ ಕಾರ್ಯ ಎಂದೇ ವಿಶೇಷವಾಗಿ ಕರೆದು ಯುಗಾದಿಯ ದಿನದಿಂದಲೇ ಕಾರ್ಯಾರಂಭವಾಗುತ್ತದೆ. ಕೆಂಪಮ್ಮ ಊರಾಡುವುದು (ಮಡಿಲಕ್ಕಿ ಸೇವೆ) ಮುಗಿಸಿ ಹಿಂತಿರುಗಿ ಸಾಗಸಂದ್ರಕ್ಕೆ ಬಂದ ತರುವಾಯ ಲಿಂಗಧಾರಣೆ, ಬಾನ, ಮಡೆ ಗ್ರಾಮದ ಆರತಿ, ಮೂಗನಾಯಕನಕೋಟೆಯವರ ಆರತಿ, ರಾಕ್ಷಸಪ್ಪಗಳಿಗೆ ಭೋಜನಾರಾಧನೆ, ಅಕ್ಕನವರ ಪೂಜೆ ನಡೆದು ಅಗ್ನಿಕುಂಡದ ಮಹಾಕಾರ್ಯಕ್ರಮ ಇರುತ್ತದೆ. ಅಗ್ನಿಕುಂಡ ಉತ್ಸವ ಭಾನುವಾರ ಪ್ರಾತಃಕಾಲ ನೆರವೇರಿದರೆ ಮಹಾರಥೋತ್ಸವ ಭಾನುವಾರ ಮಧ್ಯರಾತ್ರಿಯಿಂದ ಆರಂಭವಾಗುತ್ತದೆ. ಭಾನುವಾರ ಬೆಳಗಿನ ಜಾವದಿಂದ ಸಂಜೆಯತನಕ ದೇವಿಯ ಬಗೆಬಗೆಯ ಅಲಂಕಾರ ಸೇವೆ, ಹರಕೆ, ಉತ್ಸವ, ಮದ್ದು ಸುಡುವುದು, ಮೆರವಣಿಗೆ ಜನಪದ ಕುಣಿತಗಳ ಆಕರ್ಷಕ ಕಾರ್ಯಕ್ರಮವಿರುತ್ತದೆ.

ಸಂಜೆಯಾದಂತೆ ಸುತ್ತಮುತ್ತಲಿನ ಎಲ್ಲ ಹಳ್ಳಿಗಳಿಂದ ಭಕ್ತರು ಬಂದು ಶನಿವಾರದ ಅಗ್ನಿಕೊಂಡ ಉತ್ಸವದಲ್ಲಿ ಭಾಗಿಯಾಗಲು ಕೊಪ್ಪಲುಗಳಲ್ಲಿ ತಂಗಿ ವಿವಿಧ ಸೇವಾಕಾರ್ಯ ಮಾಡುತ್ತಾರೆ. ಹೊರ ಊರುಗಳ ಅಪಾರ ಒಕ್ಕಲುಗಳು ಸೇರುತ್ತಾರೆ.

ರಾತ್ರಿ 10 ಗಂಟೆಯ ಸುಮಾರಿಗೆ ದೇವರಿಗೆ ವಿಶೇಷ ಮಂಗಳಾರತಿ ಸೇವೆ ಮುಗಿಸಿ ದೇವಿಯನ್ನು ಸಕಲ ಮಂಗಳವಾದ್ಯಗಳೊಂದಿಗೆ ಸೋಮನ ಕುಣಿತ, ಕತ್ತಿ ಹೂಳ್ಗ, ಚಾಟಿ ಹೂಳ್ಗ ಸೇವೆಗಳೊಂದಿಗೆ ದೇವಿಯನ್ನು ಅಲಂಕೃತಗೊಂಡ ರಥದ ಮಧ್ಯಪೀಠದಲ್ಲಿ ಕುಳ್ಳಿರಿಸಲಾಗುತ್ತದೆ. ಸುಂದರವಾದ ಅಲಂಕಾರ, ವರ್ಣಮಯ ಹೂವಿನ ಅಲಂಕಾರ, ಹೆಚ್ಚು ಹೂವಿನಿಂದಲೇ ದೇವಿಯ ರಥ ತುಂಬಿಹೋಗಿರುತ್ತದೆ. ಹೀಗೆ ಅಲಂಕೃತಗೊಂಡ ದೇವಿಯ ಶಾಸ್ತ್ರೋಕ್ತ ಪೂಜೆ, ಉತ್ಸವ ಮುಗಿದು ಸರಿರಾತ್ರಿ ವೇಳೆಗೆ ರಥಕ್ಕೆ ಕಟ್ಟಿರುವ ಬಲವಾದ ಹಗ್ಗಕ್ಕೆ

ಭಕ್ತರೆಲ್ಲರೂ ದೇವಿಯ ಹೆಸರು ಹೇಳಿ ತೇರು ಎಳೆಯುತ್ತಾರೆ. ಇದೊಂದು ಮಹಾ ಐಭೋಗವಾಗಿ ಪರಿಣಮಿಸುತ್ತದೆ. ರಥದ ಮೇಲೆ ಅಲಂಕೃತಗೊಂಡ ದೇವಿ ರಥದ ತಿರುಗಾಟಕ್ಕೆ ಸಣ್ಣದಾಗಿ ವಾಲುತ್ತ, ಓರೆನೋಟ ಬೀರುತ್ತ ರಥ ಸಾಗುವ ರೀತಿ, ಭಕ್ತರ ಭಾವಪರವಶಭಾವದ ಒಗ್ಗಟ್ಟು ಹುಮ್ಮಸ್ಸು ಅತ್ಯಂತ ಆಕರ್ಷಕವಾದ ಸಂದರ್ಭ. ರಥಾನಂದದ ಮಹಾ ಸಂದರ್ಭ ಇದಾಗಿರುತ್ತದೆ.

ಹೀಗೆ ಹೊರಗುಡಿಯ ಅಂಗಳದಿಂದ ನಿಧಾನವಾಗಿ ಹೊರಟ ರಥ ಒಂದು ಫರ್ಲಾಂಗ್ ದೂರದಲ್ಲಿರುವ ತನ್ನ ಮೂಲಕ್ಕೆ ಹುತ್ತದ ಗುಡಿಯ ತನಕವೂ ಹರಿಯುತ್ತದೆ. ಹುತ್ತದಮ್ಮನಿಗೆ ಪೂಜೆ, ಮಹಾಮಂಗಳಾರತಿ ಮುಗಿಸಿ ದೇವಿಯ ರಥ ಹಿಂತಿ ರುಗುವುದು ಒಂದು ಭಾವೋದ್ರೇಕದ ಭಕ್ತಭಾವದ ರಸಗಳಿಗೆಯಾಗಿ ಪರಿಣಮಿಸುತ್ತದೆ.

ಆಕರ್ಷಕ ಸೋಮನಕುಣಿತ, ಚಾಟಿ ಹೂಳ್ಗದವರಿಂದ ಮೈದುಂಬಿ ಚಾಟಿ ಹೊಡೆದುಕೊಳ್ಳುವುದು, ಕತ್ತಿ ಹೂಳ್ಗದವರ ವೀರಾಭಿನಯ, ಜನಪದ ಅರೇವಾದ್ಯ, ಚಿಟ್ಟುಮೇಳ ಒಂದೊಂದೂ ರೋಚಕವಾಗಿ ರುದ್ರನರ್ತನದಂತೆ ಭಾವಪರವಾಗಿ ತನ್ನ ಇರುವನ್ನು ಮೀರಿನಿಂತ ರಸೋಲ್ಲಾಸ ಕ್ಷಣವಾಗಿ ಈ ರಥೋತ್ಸವದ ಮಧ್ಯರಾತ್ರಿ ಪರಿಣಮಿಸುತ್ತದೆ. ತಿರುಗಿ ಅದೇ ಉತ್ಸಾಹ, ಸಡಗರದಿಂದ ದೇವಿ ಹಿಂತಿರುಗಿ ರಥದ ಮಂಟಪದ ಬದಿಗೆ, ಅಗ್ನಿಕೊಂಡದ ಸಮೀಪ ನಿಲ್ಲುತ್ತದೆ. ಆಗ ಮೂಲಗುಡಿ, ಹೊರಗುಡಿ, ಅವಸರದಮ್ಮ, ಗಾಳಿಯಮ್ಮ ಅಕ್ಕನವರು ಹೀಗೆ ದೇವಾಲಯದ ಬದಿಯ ಎಲ್ಲ ದೇವರುಗಳಿಗೆ ಏಕಕಾಲದಲ್ಲಿ ಮಹಾಮಂಗಳಾರತಿಯಾಗಿ ದೇವಿ ಕೆಂಪಮ್ಮನ ರಥೋತ್ಸವದ ಕಾರ್ಯ ಮುಕ್ತಾಯವಾಗುತ್ತದೆ.

## ಕಂಚಿನ ಕುದುರೆ ಉತ್ಸವ:

ಶ್ರೀ ಕೆಂಪಮ್ಮದೇವಿಯ ಅಗ್ನಿಕೊಂಡ ಮತ್ತು ರಥೋತ್ಸವಗಳು ದೇವಿಯ ವೈಭವಪೂರಿತ ಆಚರಣೆಗಳು. ಸುತ್ತಮುತ್ತಲ ಗ್ರಾಮಗಳ ಭಕ್ತರು, ಆಸಕ್ತರು ಕಲೆಯುವುದರ ಜೊತೆಗೆ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಿಂದಲೂ ಭಕ್ತರು ಭಾಗವಹಿಸುವುದು ಈ ಎರಡು ಸಂದರ್ಭಗಳಲ್ಲಿ ಅಧಿಕ. ಆದರೂ ಸಂಪ್ರದಾಯದಂತೆ ಈ ಉತ್ಸವಗಳಾದ ತರುವಾಯವೂ ಐದು ದಿನಗಳ ಕಾಲ ಒಂದೊಂದು ಉತ್ಸವದಂತೆ ದೇವಿಯ ಮೆರವಣಿಗೆ ಏರ್ಪಡುತ್ತದೆ. ಮಹಾ ರಥೋತ್ಸವ ಮುಗಿದ ನಂತರದ ರಾತ್ರಿ ನಡೆಯುವ ಕಂಚಿನ ಕುದುರೆ ಉತ್ಸವವೂ ದೇವಿಯ ಮೆರವಣಿಗೆ, ಸೋಮಗಳ ಕುಣಿತ, ಚಾಟಿ ಸೇವೆ, ಖಡ್ಗ ಹೇಳುವುದು ನಡೆಯುತ್ತದೆ. ಈ ಉತ್ಸವದಲ್ಲಿ ದೇವಿಗೆ ವಾನದ ಮಾದರಿಯಲ್ಲಿ ಕುರ್ಜು ಕಟ್ಟಿ ಅದರ ಮುಂದೆ ಅಲಂಕೃತಗೊಂಡ ದೇವಿಯ ಕುದುರೆಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಅದರ ಹಿಂದೆ ಕೆಂಪಮ್ಮ ದೇವಿಯ ವಿಗ್ರಹ, ಮೂರ್ತಿಯನ್ನು ಪೀಠದಲ್ಲಿ ಕುಳ್ಳಿರಿ ಹೂವಿನ ಅಲಂಕಾರ ಮಾಡಲಾಗುತ್ತದೆ. ಇದು ಕೆಂಪಮ್ಮ ದೇವಿ ಕುದುರೆ ಮೇಲೆ ಕುಳಿತು ಅಶ್ವಾರೂಢಳಾಗಿ ಜಗತ್ ವೀಕ್ಷಣೆಗೆ ಹೊರಟಳೆಂಬ ಪ್ರತೀತಿ ಇದೆ. ವಿವಿಧ ಭಕ್ತರು ತಮ್ಮ ಇಷ್ಟಾರ್ಥಗಳ ಈಡೇರಿಕೆ ಪರಿಹಾರ ರೂಪದಲ್ಲಿಯೂ ಕಂಚಿನ ಕುದುರೆಯ ಉತ್ಸವದ ಏರ್ಪಾಡಿನಲ್ಲಿ ಭಾಗವಹಿಸುತ್ತಾರೆ. ರಾತ್ರಿ ಕಾಲದಲ್ಲಿ ನಡೆಯುವ ಈ ಉತ್ಸವದಲ್ಲಿ ದೀಪಗಳ ಅಲಂಕಾರ ವಿಶೇಷ ಕಳೆಯನ್ನು ತರುತ್ತದೆ.

## ಆನೆ ಉತ್ಸವ:

ಆನೆ ಉತ್ಸವವೂ ಆರನೆಯ ರಾತ್ರಿ ದೇವಿಯ ಮೆರವಣಿಗೆಯ ರೂಪದಲ್ಲಿ ಆಚರಿಸಲಾಗುತ್ತಿದೆ. ಬಗೆಬಗೆಯ ಹೂವುಗಳಿಂದ ಅಲಂಕೃತಗೊಂಡ ದೇವಿಯನ್ನು ಆನೆಯ ಅಂಬಾರಿಯ ಮೇಲೆ ಕೂರಿಸಿ ಮೆರವಣಿಗೆ ಹೊರಡಿಸುವುದಕ್ಕೆ ಆನೆ

ಉತ್ಸವ ಎಂದು ಕರೆಯುತ್ತಾರೆ. ದೇವಿಯು ಅಂಬಾರಿ ಮೇಲೆ ಕುಳಿತು ಲೋಕ ವೀಕ್ಷಣೆಗೆ ಹೋಗುತ್ತಾಳೆ ಎಂಬುದು ಈ ಉತ್ಸವದ ಪ್ರತೀತಿ. ಹಿಂದೆಲ್ಲಾ ಜೀವಂತ ಆನೆಯನ್ನು ದೇವಿಯ ಆನೆ ಉತ್ಸವದಲ್ಲಿ ಬಳಸುತ್ತಿದ್ದು ಇಂದು ಜೀವಂತ ಆನೆ ತರಲು ಸಾಧ್ಯವಾಗುವುದಿಲ್ಲ. ಹಾಗಾಗಿ ಆನೆಯ ಗೊಂಬೆಯ ರೂಪದಲ್ಲಿ ಅಲಂಕರಿಸಿ, ದೇವಿಯ ಮುಂದೆ ನಿಲ್ಲಿಸಲಾಗುತ್ತದೆ. ನಂತರ ಅಲಂಕಾರಗೊಳಿಸಿ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮೆರವಣಿಗೆ ಹೊರಡಿಸುವುದಕ್ಕೆ ಆನೆ ಉತ್ಸವ ಎಂದು ಕರೆಯಲಾಗುವುದು. ಈ ಉತ್ಸವ ಕೂಡ ದೇವಿಯ ದೇವಾಲಯದಿಂದ ಹೊರಟು ರಥಬೀದಿ, ಗ್ರಾಮಗಳಲ್ಲಿ ಮೆರವಣಿಗೆ ಹಾಯ್ದು ನಂತರ ಕೆಂಪಮ್ಮದೇವಿಯ ಹೊರಗುಡಿಯಲ್ಲಿ ದೇವಿಗೆ ಪ್ರತ್ಯೇಕ ಪೀಠದ ವ್ಯವಸ್ಥೆ ಮಾಡಲಾಗುತ್ತದೆ. ಮುಂದಿನ ಎರಡು ದಿನಗಳಲ್ಲಿಯೂ ದೇವರ ಮೆರವಣಿಗೆ ಉತ್ಸವ ಇರುತ್ತದೆ.

### ಹೂವಿನ ಅಡ್ಡಪಲ್ಲಕ್ಕಿ ಉತ್ಸವ:

ಹೂವಿನ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಮೆರವಣಿಗೆ ದೇವಿ ಕೆಂಪಮ್ಮಳನ್ನು ಅಡ್ಡಪಲ್ಲಕ್ಕಿಯಲ್ಲಿ ಕೂರಿಸಿ, ಹೂವಿನಿಂದ ಅಲಂಕರಿಸಿ, ದೇವಾಲಯದಿಂದ ಹೊರಡಿಸಿ ಮೆರವಣಿಗೆ ನಡೆಸಲಾಗುವುದು. ಇದೊಂದು ವಿಶೇಷವಾಗಿರುತ್ತದೆ. ಇದುವರೆಗೆ ಪೆಟ್ಟಿಗೆ ಅಮ್ಮನನ್ನು ಅದರಿಂದ ಹೊರತೆಗೆದು ಅಡ್ಡಪಲ್ಲಕ್ಕಿಯಲ್ಲಿ ಕೂರಿಸುವುದು, ಅದನ್ನು ಇಬ್ಬರು ಪೂಜಾರಿಗಳ ಹೊತ್ತು ಸೋಮ, ಚಾಳಿಹೊಳ್ಗ, ಖಡ್ಗ ಹೂಳ್ಗದವರು, ವಾದ್ಯ ವಿಶೇಷಗಳೊಂದಿಗೆ ಮೆರವಣಿಗೆ ಆಕರ್ಷಕವಾಗಿರುತ್ತದೆ.

### ಮುತ್ತಿನ ಪಲ್ಲಕ್ಕಿ ಉತ್ಸವ :

ಮುತ್ತಿನ ಪಲ್ಲಕ್ಕಿ ಉತ್ಸವ ದೇವಿಯ ಮೆರವಣಿಗೆ ಹಾಗೂ ಹೊರಗಣ ಗುಡಿಯಿಂದ ಹೊರಟು ಮತ್ತದೇ ಗುಡಿಗೆ ತಲುಪುವ ಉತ್ಸವದ ಕೊನೆಯ

ದಿನ. ಮುತ್ತಿನ ಪಾಲಿಕೆ ಉತ್ಸವವೂ ವಿಶೇಷ ಆಕರ್ಷಣೆಗೆ ಒಳಗಾಗುವ ಉತ್ಸವ. ಕಡೇ ರಾತ್ರಿ ಉತ್ಸವವಾಗಿ ಇಂದೂ ಸಹ ಅಪಾರ ಜನರು ಸೇರಿರುತ್ತಾರೆ. ದೇವಿಯನ್ನು ಪಲ್ಲಕ್ಕಿಯ ಮೇಲೆ ಕೂರಿಸಿ ಅಲಂಕಾರಗೊಳಿಸಿ, ಅದಕ್ಕೆ ಮುತ್ತಿನಸರ, ಒಡವೆ, ಹೂವುಗಳಿಂದ ಅಲಂಕಾರ ಮಾಡಲಾಗುತ್ತದೆ. ಹೀಗೆ ಅಲಂಕಾರಗೊಂಡ ದೇವಿಯನ್ನು ದೇವಾಲಯದಿಂದ ವಾದ್ಯವಿಶೇಷಗಳೊಂದಿಗೆ ಮೆರವಣಿಗೆ ಹೊರಟು ದೇವಿ ರಾಜಬೀದಿ, ಅಂಗಡಿಬೀದಿಗಳಲ್ಲಿ ಉತ್ಸವ ಹೊರಡುತ್ತದೆ. ಇಲ್ಲಿನ ಸೋಮನ ಕುಣಿತ, ಕೋಲಾಟ ಹೀಗೆ ಜನಪದ ಕಲೆಗಳ ಪ್ರದರ್ಶನವೂ ಇರುತ್ತದೆ. ದೇವಿಯನ್ನು ವಿಶೇಷ ಮುತ್ತುಗಳಿಂದ ಅಲಂಕಾರಗೊಳಿಸಿ ಮೆರವಣಿಗೆಯಲ್ಲಿ ತರುವುದು ಇಂದಿನ ವಿಶೇಷವಾಗಿರುತ್ತದೆ.

**ಹಗಲು ಪರಿಸೆ:**

ಕೆಂಪಮ್ಮದೇವಿಯ ಜಾತ್ರೆ ಒಂಬತ್ತು ದಿನಗಳ ಕಾಲ ನಡೆಯುತ್ತದೆ. ದಿನಕ್ಕೊಂದು ಉತ್ಸವ, ಆಚರಣೆ, ಮೆರವಣಿಗೆ ಹೀಗೆ ಸಾಂಪ್ರದಾಯಿಕ ವಿಧಿ ವಿಧಾನಗಳೊಂದಿಗೆ ಜಾತ್ರೆ ನಡೆಯುತ್ತದೆ. ಹೀಗೆ ಜಾತ್ರೆಯ ಈ ಒಂಬತ್ತು ದಿನಗಳ ಕಾಲ ದೇವತೆ ಕೆಂಪಮ್ಮ ತಮ್ಮ ಮೂಲಸ್ಥಾನ ಊರೊಳಗಣ ಗದ್ದಿಗೆ ಗುಡಿಯಿಂದ, ಮೊದಲ ದಿನ ಕಳಸ-ಕನ್ನಡಿಯೊಂದಿಗೆ ವಾದ್ಯ ವಿಶೇಷಗಳೊಂದಿಗೆ ಕಾಶಿ ವ್ರತಧಾರಿಗಳೊಂದಿಗೆ ಸೋಮಪ್ಪಗಳು, ಪಾತಪ್ಪಗಳು ಹಾಗೂ ಕತ್ತಿ ಹೊಳ್ಗದವರು ಚಾಟಿ ಹೊಳ್ಗದವರೊಂದಿಗೆ ದೇವಿಯನ್ನು ಹೊರಗುಡಿಗೆ ಜಾತ್ರೆಯ ಸಲುವಾಗಿ ತಂದವರು ಮತ್ತೆ ಅದೇ ಗುಡಿಗೆ ಗದ್ದಿಗೆ ಮಾಡುವ ಕಾರ್ಯವೂ ಇಂದೇ ಇರುತ್ತದೆ. ಇದಾದ ಇಡೀ ದಿನ ವಿಶೇಷ ಪೂಜೆ, ಹರಕೆ ಸಂಪ್ರದಾಯ ಈ ಎಲ್ಲ ಕಾರ್ಯಗಳೂ ನಡೆಯುತ್ತವೆ. ಅಂಗಡಿ, ಮಳಿಗೆ, ಸಂತೆಯ ಮಾದರಿಯ ವಸ್ತುಗಳ ಮಾರಾಟ ಈ ಎಲ್ಲವೂ ಇರುತ್ತದೆ. ಕಡೆ ಪರಿಸೆ ಎಂಬ ವಿಶೇಷ ಭಾವನೆಯೊಂದಿಗೆ ಸುತ್ತಮುತ್ತಲ ಅಪಾರ ಜನರೂ ಸೇರುತ್ತಾರೆ. ಬೆಳಿಗ್ಗೆ ಪೂಜೆ, ಮಹಾಮಂಗಳಾರತಿ ನಡೆದು ಸಂಜೆಗೆ ಮೆರವಣಿಗೆ ದೇವಿಯನ್ನು ಗುಡಿಯಿಂದ

ಹೊರಡಿಸಲಾಗುತ್ತದೆ. ಒಂಭತ್ತು ದಿನ ಹೊರಗಿನ ಗುಡಿಯಲ್ಲಿ ಮೆರವಣಿಗೆಯ ದೇವತೆಯಾಗಿ, ಗದ್ದಿಗೆ ಮಾಡಿದ್ದ, ಕೆಂಪಮ್ಮ ದೇವಿಯನ್ನು ಕಡೇ ಪರಿಸೆಯ ದಿನ ರಾತ್ರಿವಾನದ ಮೇಲೆ ಅಲಂಕಾರಗೊಳಿಸಿ ವೈಭವ ಮೆರವಣಿಗೆ ಊರಾಡುವುದು ನಡೆದು, ಸೋಮನ ಸಮೇತ ತಂದು ದೇವಿಯನ್ನು ಊರ ಒಳಗಿನ ಗುಡಿಯಲ್ಲಿ ಗದ್ದಿಗೆ ಮಾಡಲಾಗುತ್ತದೆ. ವಿವಿಧ ಸೋಮಪ್ಪಗಳನ್ನು ಮೆರವಣಿಗೆ, ಕುಣಿತ ಮಾಡಿಸಿ ಇಲ್ಲಿಯೇ ಇರಿಸಲಾಗುತ್ತದೆ. ವಾದ್ಯ ಪರಿಕರಗಳನ್ನು ಇದೇ ಗುಡಿಯಲ್ಲಿ ಸಂಗ್ರಹಿಸಿಡಲಾಗುವುದು. ಹೀಗೆ ಒಂಭತ್ತು ದಿನಗಳ ಕಾಲ ವಿಶೇಷವಾಗಿ ಜನಪದ ಜಾತ್ರೆಯಾಗಿ ವಿವಿಧ ಆಚರಣೆ, ವಿವಿಧ ಗ್ರಾಮದವರ ಸೇವೆ, ಧರ್ಮಕಾರ್ಯ ನಡೆದು ದೇವಿಯನ್ನು ನೆಲಮನೆಗೆ ಸೇರಿಸುವ ಕಾರ್ಯವೂ ಉತ್ಸವವಾಗಿ ಆಕರ್ಷಕವಾಗಿ ನಡೆಯುತ್ತದೆ.

**ಕೊಪ್ಪಲುಸೇವೆ**:

ಸಾಗಸಂದ್ರದ ಕೆಂಪಮ್ಮ ಅಪಾರ ಭಕ್ತರನ್ನೊಳಗೊಂಡಿದೆ. ದೂರದ ಬಿಜಾಪುರ, ಬೆಂಗಳೂರು, ಶಿವಮೊಗ್ಗ, ಮೈಸೂರು, ಕೋಲಾರ ಕಡೆಗಳಲ್ಲೂ ಒಕ್ಕಲಿದ್ದಾರೆ. ಜಾತ್ರೆಯ ಕಾಲಕ್ಕೆ ಈ ಎಲ್ಲ ಭಕ್ತರು ದೇವಿಯ ಸೇವೆಗಾಗಿ ಆಗಮಿಸುತ್ತಾರೆ. ಬಂದ ಭಕ್ತರಿಗೆ ಸಾಗಸಂದ್ರದಲ್ಲಿ ಮೊದಲಿಗೆ ವಸತಿಗೃಹ ಇರಲಿಲ್ಲ. ಬದಲಿಗೆ ದೇವಸ್ಥಾನದ ರಥಬೀದಿಗೆ ಎದುರಾಗಿ ಸಾಲು ಮಂಟಪಗಳಿದ್ದು ಅವುಗಳು ಕಲ್ಲು ಚಪ್ಪಡಿಗಳಿಂದ ನಿರ್ಮಿಸಿದ ಮಂಟಪಗಳಾಗಿದ್ದವು. ಹೊರಗಿನಿಂದ ಬಂದವರು ಮೊದಲಿಗೆ ಈ ಮಂಟಪಗಳನ್ನು ಗುಡಿಸಿ, ಸಾರಿಸಿ ನಂತರ ಅಲ್ಲಿ ತಂಗುವುದು, ಮೀಸಲು ಎಡೆ, ಅವರಿಗೆ ಊಟದ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಹೀಗೆ ಒಮ್ಮೆ ಬಂದು ಕೊಪ್ಪಲಲ್ಲಿ ಬಿಡಾರ ಹೂಡಿದವರು ಒಂದು ವಾರದ ಕಾಲ ದೇವಿಯ ಎಲ್ಲಾ ಪೂಜಾ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು.

ಹೀಗೆ ಕೊಪ್ಪಲು ನಿರ್ಮಿಸಿರುವವರಲ್ಲಿ ಚೇಳೂರು, ಕೊಡಿಯಾಲ, ನಲ್ಲೂರು, ಕಚ್ಚೇನಹಳ್ಳಿ ಈ ಭಾಗದ ಭಕ್ತರು ಅಧಿಕವಾಗಿದ್ದಾರೆ. ನಿರ್ದಿಷ್ಟ ಕುಟುಂಬದವರು

ನಿರ್ದಿಷ್ಟ ಕೊಪ್ಪಲು ಅಥವಾ ಮಂಟಪಗಳಲ್ಲಿ ಬೀಡುಬಿಡುತ್ತಿದ್ದುದು ನಿಯಮವಾಗಿತ್ತು. ಹೀಗೆ ಕೊಪ್ಪಲು ಹಾಕಿಕೊಂಡವರು ದೇವಿಯ ಅಗ್ನಿಕೊಂಡ ಹಾಗೂ ರಥೋತ್ಸವದ ದಿನಗಳಂದು ದೇವರಿಗೆ ಬರುವ ಭಕ್ತರಿಗೆ ಅವರವರ ಸಾಮರ್ಥ್ಯದ ಅನುಸಾರ ಪಾನಕ, ಫಲಹಾರ, ಕೋಸಂಬರಿ ತಯಾರಿಸಿ ಸಾರ್ವಜನಿಕವಾಗಿ ಹಂಚುವುದು ಇಲ್ಲಿನ ವಾಡಿಕೆಯಾಗಿತ್ತು. ಇದನ್ನು ಸೇವಾರ್ಥ ಎಂಬಂತೆ ನೆರವೇರಿಸಿಕೊಂಡು ಹೋಗುತ್ತಿದ್ದರು. ಇತ್ತೀಚೆಗೆ ಮಂಟಪಗಳು ಬಿದ್ದು ಹೋಗಿವೆ. ಕಚ್ಚೇನಹಳ್ಳಿ ಕುಟುಂಬದವರು ಮಾತ್ರ ತಮ್ಮ ಪೂರ್ವಿಕರ ಹೆಸರಲ್ಲಿ ಒಂದು ಮಂಟಪವನ್ನು ಹೊಸದಾಗಿ ನಿರ್ಮಿಸಿದ್ದಾರೆ. ಬಂದ ಒಕ್ಕಲುಗಳು ಪೂಜೆ ಮುಗಿಸಿಕೊಂಡು, ದೇವಸ್ಥಾನದ ದಾಸೋಹದಲ್ಲಿ ಊಟ ಸ್ವೀಕರಿಸಿ ಮರಳಿ ತಮ್ಮ ತಮ್ಮ ಗ್ರಾಮಗಳಿಗೆ ಹೋಗುತ್ತಾರೆ. ಖಾಸಗಿ ಹಾಗೂ ರಾಜ್ಯ ಸಾರಿಗೆಯ ವಾಹನಗಳ ವ್ಯವಸ್ಥೆ ರಾಜ್ಯ ಹೆದ್ದಾರಿಗೆ ರಸ್ತೆ ಸಾರಿಗೆ ಸಂಪರ್ಕ ಕಲ್ಪಿಸಿರುವುದರಿಂದ ತಿರುಗಾಟ ಸುಧಾರಿಸಿದೆ. ಹಾಗಾಗಿ ಪೂಜೆ ಮತ್ತಿತರ ಕಾರಣಕ್ಕೆ ದೇವಸ್ಥಾನದಲ್ಲಿ ಹಾಗೂ ಹೊರಗಿನ ಬಿಡಾರಗಳಲ್ಲಿ ತಂಗುವುದು ಇಲ್ಲವಾಗುತ್ತಿದೆ.

## ಅನ್ನದ ಹರಿವಾಣ:

ಅನ್ನ ಸಂತರ್ಪಣೆ, ಅನ್ನ ದಾಸೋಹ, ಅನ್ನ ಛತ್ರ ಎಂದೆಲ್ಲಾ ಕರೆಯಲ್ಪಡುವ ಅನ್ನದ ಹರಿವಾಣ ಸೇವೆ ನಿತ್ಯ ದಾಸೋಹದ ಮಾದರಿಯಲ್ಲಿ ನಡೆಯುತ್ತದೆ. ದೇವಿಯ ಆಲಯ ಅನ್ನ ಸಂತೃಪ್ತಿಯ ನೆಲೆಯೂ ಆಗುತ್ತಿರುವುದು ವಿಶೇಷ. ಹೊರಗಳ ಗುಡಿಯ ಹಿಂಭಾಗದ ದೇವಾಲಯಕ್ಕೆ ಹೊಂದಿಕೊಂಡಂತೆ ಒಂದು ದಾಸೋಹ ಭವನವಿದೆ. ಇದರಲ್ಲಿ ವರ್ಷದ ಎಲ್ಲ ದಿನಗಳೂ ತಪ್ಪದೆ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಅನ್ನ ದಾಸೋಹದ ಏರ್ಪಾಡು ಆಗಿದೆ. ಇದು ದೇವಾಲಯ ಅಭಿವೃದ್ಧಿ ಸಮಿತಿಯವರು ಖಾಸಗಿಯಾಗಿ ಮಾಡಿಕೊಂಡಿರುವ ವ್ಯವಸ್ಥೆಯಾಗಿದೆ. ಮೊದಲಿಗೆ ಈ ದೇವಸ್ಥಾನಕ್ಕೆ ಬರುವ ಭಕ್ತರು ತಮ್ಮ ತಮ್ಮ ಮನೆಗಳಿಂದ ಊಟದ ಬುತ್ತಿ ಕಟ್ಟಿಕೊಂಡು ಬರುತ್ತಿದ್ದರು. ಚೇಳೂರು ಕಡೆಯ ಭಕ್ತರು

ಹೊರಗುಡಿಯ ತೇರು ಬೀದಿಯ ಬದಿಗೆ ಮಂಟಪಗಳಲ್ಲಿ ಅಡಿಗೆ ಮಾಡಿಸಿ, ಭಕ್ತರಿಗೆ ಹಾಕಿಸುತ್ತಿದ್ದರು. ಕೆಲವರು ಹೆಸರುಬೇಳೆ, ನೀರುಮಜ್ಜಿಗೆ ದಾನ, ಅರವಂಟಿಕೆಯನ್ನು ಇಡುತ್ತಿದ್ದರು. ಆದರೂ ಅಪಾರ ಭಕ್ತಸ್ತೋಮದ ನಡುವೆ ಎಲ್ಲರೂ ಈ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಹೋಟೆಲ್‌ಗಳ ಮೊರೆಹೋಗುತ್ತಿದ್ದರು. ಅಲ್ಲಿ ದೊರೆಯುತ್ತಿದ್ದ ಆಹಾರ ಸೇವಿಸಿ ಸೇವಾಕಾರ್ಯ ಮುಗಿಸಿ ಹಿಂತಿರುಗುತ್ತಿದ್ದರು.  ಈಗ ಪರಿಸ್ಥಿತಿ ಬದಲಾಗಿದೆ. ದೇವಸ್ಥಾನಕ್ಕೆ ಬರುವ ಪ್ರತಿಯೊಬ್ಬರಿಗೂ ಪುಷ್ಕಳವಾದ ಅನ್ನ, ಸಾರು, ಮಜ್ಜಿಗೆಯ ವ್ಯವಸ್ಥೆಯನ್ನು ದೇವಸ್ಥಾನದ ದಾಸೋಹ ಸಮಿತಿಯವರು ನಿಷ್ಠೆಯಿಂದ ನೆರವೇರಿಸಿಕೊಂಡು ಬರುತ್ತಿದ್ದಾರೆ. ಜಾತ್ರೆಯ ಸಂದರ್ಭಗಳಲ್ಲಿ ದಾಸೋಹ ಛತ್ರದಲ್ಲಿ ಕುಳಿತು ಊಟ ಮಾಡುವುದಕ್ಕೂ ಸ್ಥಳವಿಲ್ಲದಂತೆ ಜನ ಸೇರುವುದರಿಂದ ಕೆಲವೊಮ್ಮೆ ಹೊರಗೂ ಊಟದ ವ್ಯವಸ್ಥೆ ಮಾಡಲಾಗುತ್ತದೆ. ಜೊತೆಗೆ ಹಗಲು ಪರಿಷೆಯಂದು ಬೆಳಿಗ್ಗೆಯಿಂದ ಸಂಜೆಯತನಕ ವಿಶೇಷ ಸಿಹಿಭೋಜನದ ಏರ್ಪಾಡು ಅಪಾರ ಭಕ್ತರಿಗೆ ಸಂತಸ ತಂದಿರುವ ಅಂಶವಾಗಿದೆ. ಶುದ್ಧ ನೀರಿನ ಕೊಳಾಯಿ, ಊಟಕ್ಕೆ ಎಲೆ, ತಟ್ಟೆ ಸೌಲಭ್ಯ ಎಲ್ಲ ದೇವಾಲಯ ಸಮಿತಿಯವರು ನಿಷ್ಠೆಯಿಂದ ವ್ಯವಸ್ಥೆ ಮಾಡಿದ್ದಾರೆ. ಇದು ಸಾಗಸಂದ್ರ ಕೆಂಪಮ್ಮ ದೇವಿಯ ಪ್ರಮುಖ ಆಕರ್ಷಣೆಯೂ ಆಗಿದೆ.

### ಸೋಮನ ಕುಣಿತ:

ಸೋಮನಕುಣಿತ ಸಾಗಸಂದ್ರಮ್ಮನ ವಿಶೇಷ ಆಕರ್ಷಣೆ. ಬಹುತೇಕ ಶಕ್ತಿದೇವತೆಗಳು ತಮ್ಮ ತಮ್ಮ ಬಂಟರಾಗಿ, ಕಾವಲುಗಾರರಾಗಿ, ರಕ್ಷಾಮೂರ್ತಿಗಳಾಗಿ ಈ ಬಗೆಯ ಪುರುಷ ವೀರರನ್ನು ಸೃಷ್ಟಿಸಲಾಗುತ್ತಿದೆ. ಸಾಗಸಂದ್ರದಮ್ಮನ ಪರಂಪರೆಯಲ್ಲಿಯೂ ಸೋಮನ ಕುಣಿತದವರು, ಚಾಟಿ ಊಳಿಗದವರು, ಕತ್ತಿ ಊಳಿಗದವರು ದೇವರನ್ನು ಆಡಿಸುವವರು ಹೀಗೆ ಒಂದು ವ್ಯವಸ್ಥಿತವಾದ ಪರಂಪರೆಯಿದೆ. ಆ ಪರಂಪರೆಯಲ್ಲಿ ಸೋಮನಕುಣಿತದವರೂ

ಒಂದು ನಿರ್ದಿಷ್ಟ ವ್ರತಧಾರಿಗಳಿದ್ದಾರೆ. ಇವರೆಲ್ಲರೂ ದೇವಾಲಯದ ಪೂಜಾರಿಕೆಯ ವಂಶಸ್ಥರು ಎಂಬುದು ಮತ್ತೂ ವಿಶೇಷ. ಗುಂಡಣ್ಣ, ಕೆಂಪರಾಜು, ರಾಜಣ್ಣ, ಕರಡಿ ಕೃಷ್ಣಮೂರ್ತಿ, ನಟರಾಜು, ಕೆಂಪಯ್ಯ, ಕಾಂತರಾಜು ಇವರುಗಳು ಸಾಗಸಂದ್ರದ ಪ್ರಮುಖ ಸೋಮನಕುಣಿತದ ಕಲಾವಿದರಾಗಿದ್ದಾರೆ.

## ಚಾಟಿ ಹೂಳ್ಗದವರು:

ದೇವಿಯ ಮೆರವಣಿಗೆಯಲ್ಲಿ ಸೋಮನ ಕುಣಿತದ ಜೊತೆಗೆ ಚಾಟಿ ಊಳಿಗದವರಿಗೂ ವಿಶೇಷ ಸ್ಥಾನಮಾನ ದೇವರ ಮುಂದೆ ಚಾಟಿ ಹೊಡೆದು ಕೊಳ್ಳುತ್ತಾ ದೇವಿಗೆ ಸಮಾಧಾನ ಮಾಡುವುದು ಅಥವಾ ಕೆಲವೊಮ್ಮೆ ದೇವಿಯನ್ನು ರಂಗೇರಿಸುವ ಕೆಲಸವನ್ನು ಈ ಚಾಟಿ ಹೂಳ್ಗದವರು ನಡೆಸುತ್ತಾರೆ. ದೇವರು ಆಡಿಸುವಾಗ ಅಗ್ನಿಕೊಂಡದ ಸಂದರ್ಭದಲ್ಲಿ ಚಾಟಿ ಸೇವೆ ಇರುತ್ತದೆ. ಕಚ್ಚೆಪಂಚೆ ಹಾಕಿ ತಲೆಗೆ ಪೇಟ ಸುತ್ತಿ, ಬರಿಮೈಯಲ್ಲಿ ಒಂದು ಮಾರುದ್ದದ ನೂಲು ಹಗ್ಗವನ್ನು ಚಾಟಿಯನ್ನಾಗಿ ಮಾಡಿಕೊಂಡು ಅದರಿಂದ ತಮ್ಮ ಬರಿಯ ಮೈಗೆ ಬಾರಿಸಿಕೊಳ್ಳುತ್ತಾ ಆವೇಶಭರಿತವಾಗಿ ಕುಣಿಯುವುದು ಚಾಟಿ ಹೂಳ್ಗದ ಪ್ರಮುಖ ಕಾಯಕವಾಗಿದೆ.

## ಕತ್ತಿ ಹೂಳ್ಗದವರು:

ಕತ್ತಿ ಹಿಡಿದ ವೀರರು ದೇವಿಯ ರಕ್ಷಣೆಗೆ ಸದಾ ಸಿದ್ಧ ಎಂಬ ಸಂದೇಶ ಕೊಡುವುದು ದೇವಿಯ ಘನತೆ, ಗೌರವಕ್ಕೆ ಕುಂದು ಬಂದಾಗ ದೇವಿಯ ಹೆಸರಿನಲ್ಲಿ ಬಲಿದಾನಕ್ಕೂ ಸಿದ್ಧರಾಗುವುದು ಇದರ ಮೂಲ ಉದ್ದೇಶ. ಹಾಗಾಗಿಯೇ ಕತ್ತಿ ಹೂಳ್ಗದ ಪರಂಪರೆ ಜನಪದೀಯವಾಗಿ ಹೆಸರಾಗಿದೆ. ಸಾಗಸಂದ್ರದ ಕೆಂಪಮ್ಮ ದೇವಿಯ ಪರಂಪರೆಯಲ್ಲಿಯೂ ಕತ್ತಿ ಹೂಳ್ಗದ ಸಂಪ್ರದಾಯವಿದೆ. ದೇವಾಲಯದ ಪೂಜಾರಿಕೆ ಪರಂಪರೆಗೆ ಸೇರಿದ 16 ಕುಟುಂಬಗಳಲ್ಲಿ ಕತ್ತಿ ಹೂಳ್ಗದವರೂ ವ್ರತಧಾರಿಗಳಾಗಿದ್ದಾರೆ. ದೇವರ ಉತ್ಸವ, ಪರಊರಿಗೆ ದೇವರು ಹೋಗುವುದು,

ಅಗ್ನಿಕೊಂಡ ಈ ಸಂದರ್ಭಗಳಲ್ಲಿ ಕತ್ತಿ ಹೂಳ್ಗದವರಿಗೆ ವಿಶೇಷ ಗೌರವ. ತಲೆಯ ಮೇಲೆ ಕೆಂಪುವಸ್ತ್ರದ ಪೇಟ, ಕಚ್ಚೆಪಂಚೆ (ಇದನ್ನು ಕಾಶಿ ಹಾಕುವುದು ಎಂದೂ ಕರೆಯುತ್ತಾರೆ). ಒಂದು ಕೈಯಲ್ಲಿ ಕತ್ತಿ, ಇನ್ನೊಂದು ಕೈಯಲ್ಲಿ ಗಗ್ಗರ ಹಿಡಿದು ಆವೇಶದಿಂದ ಕುಣಿಯುತ್ತಾರೆ. ದೇವರ ಮುಂದೆ ಬಲಗೈ ಕತ್ತಿಯಿಂದ ಎಡ ಅಂಗೈಯ ಮೇಲೆ ಕತ್ತರಿಸುವ ಹಾಗೆ ಹೊಡೆದುಕೊಳ್ಳುವುದು, ಕೆಲವು ಕಡೆ ಎದೆಗೆ ಬಾಕಿನಿಂದ ತಿವಿದುಕೊಳ್ಳುವ ವೀರಗಾರರೂ ಇರುತ್ತಾರೆ. ಇದೊಂದು ರೋಚಕ ಆಚರಣೆಯಾಗಿ ನೃತ್ಯವನ್ನು ಮಾಡುತ್ತಾರೆ. ಇದಕ್ಕೆ ಪೂರಕವಾಗಿ ದೇವರ ಬಗೆಗೆ ಹೇಳುಪದ ಹಾಡುತ್ತಾರೆ. ಇದಕ್ಕೆ ದೇವರನ್ನು ಹೊಗಳುವುದು, ಹೂಳ್ಗ ಎಂದೂ ಕರೆಯುತ್ತಾರೆ.

## ಸೌಹಾರ್ದತೆಯ ಸಾಗಸಂದ್ರ:

ಸಾಗಸಂದ್ರ ಎಂಬ ಈ ಒಂದು ಪುಟ್ಟ ಗ್ರಾಮವನ್ನು ಧಾರ್ಮಿಕವಾಗಿ ಅದರ ವ್ಯಾಪ್ತಿಯಲ್ಲಿ ಅಳಿಲಘಟ್ಟ, ಮೂಗನಾಯಕನಕೋಟೆ, ಚೇಳೂರು ಈ ಮೂರು ಗ್ರಾಮಗಳೊಂದಿಗೆ ಪುರಾಣಗಳೊಂದಿಗೆ ಬೆಸೆಯುತ್ತಾ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಸಾಮರಸ್ಯತೆ ಕಾಯ್ದುಕೊಳ್ಳುತ್ತಾ ಜನಾಂಗಿಕ ಭಿನ್ನಬೇಧವಿದ್ದರೂ ಸಾಮಾಜಿಕ ಐಕ್ಯತೆಯೊಂದಿಗೆ ಬದುಕುತ್ತಾ ಮಾವ, ದೊಡ್ಡಪ್ಪ, ಕಾಕ, ಅತ್ತೆ, ದೊಡ್ಡಕ್ಕ ಹೀಗೆ ಸೋದರಸಂಬಂಧ ಕಲ್ಪಿಸುತ್ತಾ ಇಂದಿಗೂ ಒಂದಾಗಿ ನಡೆದುಕೊಳ್ಳುತ್ತಿರುವುದು ಸಾಗಸಂದ್ರದ ವಿಶೇಷವಾಗಿದೆ. ಸಾಗಸಂದ್ರದ ಕೆಂಪಮ್ಮ ದೇವಿಗೆ ಶಿಷ್ಟರು, ಪರಿಶಿಷ್ಟರು ಸಮಾನವಾಗಿ ನಡೆದುಕೊಳ್ಳುವ ಏಕತಾನವಾಗಿ ವರ್ತಿಸುತ್ತಾ ಬರುವ ರೀತಿನೀತಿಗಳು ಈ ದೇವಿಯ ಸಾಮರಸ್ಯದ ಸಂಕೇತವಾಗಿದೆ. ಜೊತೆಗೆ ಈ ದೇವಿಯ ಆಚರಣೆಯನ್ನು ಕೇಂದ್ರವಾಗಿರಿಸಿಕೊಂಡು ಬೆಳೆದು ಬಂದಿರುವ ಸೋಮನ ಕುಣಿತ, ಮಣೇವು ಕುಣಿತ, ಕತ್ತಿ ಊಳಿಗದ ಕುಣಿತ ಈ ಬಗೆಯ ಜನಪದ ಕಲೆ ಬಯಲುಸೀಮೆಯ ವಿಶೇಷ. ಧಾರ್ಮಿಕ-ಸಾಂಸ್ಕೃತಿಕ ಈ ಎರಡು ಪ್ರಕಾರಗಳಲ್ಲೂ ಸೋಮನಕುಣಿತದ ಕಲಾವಿದರಿದ್ದಾರೆ. ಕೆಂಪಮ್ಮ

ದೇವಿಗೆ ಸೀಮಿತವಾಗಿ ದೇವರನ್ನು ಆಡಿಸುವ ಕಾಯಕದೊಂದಿಗೆ ಸಂಪ್ರದಾಯ ಬದ್ಧತೆ ಇಲ್ಲಿನ ಸೋಮನ ಕುಣಿತದ ಒಂದು ಬಗೆಯಾದರೆ, ಕಾಂತರಾಜು, ರಾಜಣ್ಣ (ಗುಂಡಣ್ಣ), ಚಿಕ್ಕಕೆಂಪಯ್ಯ, ಕರಡಿ ಕೃಷ್ಣಮೂರ್ತಿ, ದೊಡ್ಡಕೆಂಪಯ್ಯ ಈ ಬಗೆಯ ಸೋಮನಕುಣಿತದ ಕಲಾವಿದರು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿೂ ಹವ್ಯಾಸಿ ಹಾಗೂ ವೃತ್ತಿ ಕಲಾವಿದರಾಗಿ ಸೋಮನ ಕುಣಿತಕ್ಕೆ ಹೆಸರಾಗಿದ್ದಾರೆ. ಈ ದೇವರನ್ನು ಕುರಿತು ಕಥೆ ಹೇಳುತ್ತಾರೆ. ಹೂಳ್ಗದ ಸೇವೆಗಾರರು, ದೇವಿಯ ಮಹಿಮಾವಳಿಯನ್ನು ರಸವತ್ತಾಗಿ ಹೊಗಳುವ ಮೂಲಕ ದೇವಿಯ ಚರಿತ್ರೆಯನ್ನು ಮೌಖಿಕವಾಗಿ ಹೆಚ್ಚು ವಿಸ್ತರಿಸಿದ್ದಾರೆ. ಸಾಗಸಂದ್ರದ ಕೆಂಪಮ್ಮನ ಕುರಿತು ದೇವರು ಕರೆಯುವ ಪದ, ಕೋಲುಪದ, ಸೋಬಾನೆ ಪದಗಳೂ ರೂಪಿತಗೊಂಡಿವೆ. ಹಾಡುವ ಪರಂಪರೆಯೂ ಇಲ್ಲವಾಗುತ್ತ ಮಾಧ್ಯಮಗಳ ಮೇಲಾಟದಲ್ಲಿ ಜನಪದ ಹಾಡುಗಾರಿಕೆ ಮಾಯವಾಗುತ್ತಿದೆ. ಇಲ್ಲಿನ ಹಾಡುಗಳಲ್ಲಿ ಕೆಂಪಮ್ಮನನ್ನು ಶಿವನ ಕುಮಾರತಿ ಎಂದೂ ಹುತ್ತದಲ್ಲಿ ಒಡಮೂಡಿದವಳೆಂದು ವೀರಭದ್ರನ ಕುಮಾರತಿ ಎಂದೂ, ಚೀಳೂರ ಮಗಳೆಂದು ಉಲ್ಲೇಖಿಸಲಾಗಿದೆ. ಈ ಮೂಲಕ ಪುರಾಣ, ಐತಿಹಾಸಿಕತೆಯನ್ನು ಸಮೀಕರಿಸಿದೆ. ಈ ಎಲ್ಲ ವಿವರಣೆಗಳ ನಿರೂಪಣೆ ಇಲ್ಲಿನ ನಡಾವಳಿಯಲ್ಲಿ ಇಂದಿಗೂ ಆಚರಣೆಯಲ್ಲಿವೆ.

## ಅನುಬಂಧ

## ಕೆಂಪಮ್ಮದೇವಿಯ ಹೊಗಳುಪದ (ಹೂಳ್ಗ)

ಜಗನ್ಮಾತೆಪರ ಜಗನ ಗೆದ್ದವಳೆ ಪರ
ಜಗದ ರಾಯನ ಕೂಡಿ ನಿತ್ಯ ಪೂಜೆಗೊಂಬ
ನಿಜರೂಪಧಾರಿಣಿ ಛತ್ರಿ ಊಳಿಗದಮ್ಮ
ಹುತ್ತಮಾಳಗದಮ್ಮ ಶಿವನ ಕುಮಾರತಿ ಬಹುಪರ.

ಸಾಲಸತ್ರಿಗೆ ನಿಜಕೆಂಪೇ ಪರ
ಪತ್ತು ಪವಾಡಪುರುಷ
ಅರವತ್ತು ಗಾವುದದ ಅರಿವು ಬಲ್ಲೆ
ಮೂವತ್ತು ಗಾವುದದ ಮನವ ಬಲ್ಲೆ
ಪರಮೇಶ್ವರನ ಮಗಳೆ ಬಹುಪರ.

ಚೇಳೂರಿನಿಂದ ಬಂದ ನಮ್ಮಮ್ಮ
ಸಾಗಸಂದ್ರದ ಹೆದ್ದು ಬಾರೆಯಲ್ಲಿ
ಏಳು ಆಳುದ್ದ ಹುತ್ತಗಳ ಕ್ವಾವಿಯೊಳಗೆ
ಹುತ್ತದಮ್ಮಳಾಗಿ ಪ್ರಸನ್ನವಾದವಳೇ
ಶುಕ್ರವಾರದ ಪೂಜೆ ಪಡೆದು ನರಲೋಕಕ್ಕೆ ಬಂದವಳೇ ಪರ.

ಒಂಬೈನೂರ ಏಳು ಗೌಡಾಳಿಕೆಗೆ ಒಲಿದು
ಒಂಬೈನೂರೇಳು ಸಲುಪಾಲಿಕೆಗೆ ಒಲಿದು
ಬಲಗೈ ಧರ್ಮಗಳ ಕೊಟ್ಟು
ಕುಣಿ ಎಂದು ಕುಣಿಸಿದಮ್ಮ

ಮೆರೆ ಎಂದು ಮೆರೆಸಿದಮ್ಮ
ಬಲಭುಜದ ಕೆಂಪವ್ವ ಬಹುಪರ

ಮುತ್ತಿನ ಮಲೆಕಟ್ಟಿನವಳು
ಬಾಯಿಬೀಗದವಳು
ಆದಿತ್ಯವಾರದ ಆರ್ತಿಗಾರ್ತಿ
ಸೋಮವಾರದ ಶಿವಪೂಜೆಗಾರ್ತಿ
ಮಂಗಳವಾರದ ಮಹೇಂದ್ರಜಾಲೆ
ಬುಧವಾರದ ಬುದ್ದಿಮಂತೆ
ಶುಕ್ರವಾರದ ಸೂತ್ರವೇಣಿ ಪರ

ಒಣಗಿದ ಮರ ಚಿಗುರಿಸಿದೆ
ನೆರಳು ಭಾಗ್ಯ ನೀಡಿದವಳು
ಮಕ್ಕಳಿಲ್ಲದ ಹುಟ್ಟು ಬಂಜೆಯರಿಗೆ
ತೊಟ್ಟಿಲು ತೂಗಿಸಿದೆ ಸಾಗಸಂದ್ರದ
ಸಾಲು ತೋಪಿನ ಕೆಂಪೇಬೋಪರ.

ತಣ್ಣಂದ ಹೊತ್ತಿನಲ್ಲಿ ಸಮಗದ್ದಿಗೆ ಮಾಡಿ
ಹಕ್ಕಿ ಪಕ್ಷಿ ಗೂಡು ಸೇರುವ ಹೊತ್ತಿನಲ್ಲಿ
ಕುರಿ ಹೋಗಿ ಸಿರಿ ಬರೋ ಹೊತ್ತಿನಲ್ಲಿ
ಹೂವು ಹೊಂಬಾಳೆ ಪೂಜೆ ನಿನಗೆ
ಸಂಗನಬಸಪ್ಪನವರು ಸಮಗದ್ದಿಗೆ ಹೂಡೋ
ಮುನ್ನೂರು ಮೂವತ್ತು ಕೋಟಿ ಹೂಪೂಜೆ ನಿನಗೆ.

ಶನಿವಾರದ ಪುಣ್ಯಕಾಲದಲ್ಲಿ
ಕೆಂಡಕೊಂಡಕೆ ಹೋಗೋ ಸಮಯದಲ್ಲಿ
ಮೂಡಾಪಡುವ ತೆಂಕಾಬಡುವ
ಉತ್ಸವದ ಮೆರವಣಿಗೆ ಹೊರಡಿಸಿ
ಒಂಬೈನೂರ ಏಳು ಕೈವಾಡದವರು
ಮೂರು ಚಾಟಿ ಹೂಳ್ಗ, ಮೂರುಕತ್ತಿ ಹೂಳ್ಗ
ನಿನ್ನ ಪಾದಕೆ ಪ್ರೀತಿ ಮಾಡಿ ಅವಸರ ಮಾಡದೆ
ದೂಸರ ಮಾಡದೆ ಕೊಂಡ ಹಾಯ್ದಿ ಬೋಪರ.

ಏಕ್ಕನ ಜಗದೀಶ್ವರಿ ಪರ
ಮುಕ್ಕಣ ಶಿವನ ಮಗಳೆ
ಮೂರು ಲೋಕದವಳೆ
ಚೀಳೂರ ಕರುಣಾಮಂತ್ರಬಲ್ಲೆ
ಇದ್ದೂರ ಮಾಯಮಂತ್ರ ಬಲ್ಲೆ
ಚಿಕ್ಕಮುಖದ ಚಲುವೆ
ರೊಪ್ಪದ ಹೆಬ್ಬುಲಿ ಬೋಪರ.

ಕರಡಿಗೆಯೊಳಗಣ ಲಿಂಗ ನಿನಗೆ
ಕಾವಿ ವಸ್ತ್ರದವಳೆ, ಮೂರು ಹೊತ್ತಿನ ಶಿವಪೂಜೆಯವಳೆ
ಲಿಂಗವಂತರ ಮಗಳೆ, ಲಿಂಗಧಾರಣಿ ರೂಪೇ
ಈಶ್ವರನ ಕುಮಾರತಿ, ಚಂದ್ರನಂತ ಮುತ್ತಿನ ಮೂಗುತಿ ಬೋಪರ

ಜಲಜಲನೆ ಬಂದವಳೆ
ಜಲದಿ ಗಂಗಮ್ಮ ನೀನೆ

ಬಲದಲ್ಲಿ ನೋಡಿದರೆ ಬ್ರಹ್ಮದೇವರ ರೂಪು
ಎಡದಲ್ಲಿ ನೋಡಿದರೆ ಅಣ್ಣ ವೀರಭದ್ರನ ರೂಪು
ನಿಂತು ನೋಡಿದರೆ ಶಿವನ ರೂಪೇ ಪರ.
ಒಂಭತ್ತು ಹೂಳ್ಗದವರ ಮೇಲೆ ದಯವಿರಲಮ್ಮ
ಮಕ್ಕಳ ಮೇಲೆ ಪ್ರೀತಿ ಇರಲಮ್ಮ
ಒಕ್ಕಲ ಮೇಲೆ ಇಷ್ಟವಿರಲಮ್ಮ
ಸೋಮಶೇಖರ ಚಿತ್ರಶೇಖರ ಕೂಡಿ
ವೀರಭದ್ರನ ತಂಗಿ ವಿಭೂತಿಧಾರಣಿಯೇ ಪರ.

ಸತ್ಯದಲ್ಲಿ ಸಾಹಸವಂತೆ
ಹುತ್ತದಿಂದ ಮೇಲೆದ್ದು ಬಂದೆ
ಗಾಳಿ ಕಂಡೆ, ಪೀಡೆ ಕಂಡೆ, ಪಿಶಾಚಿ ಕಂಡೆ
ನೀರು ನೇಣು ಬೆಂಕಿ ಸಾವಿಗೆ
ಹನ್ನೆರಡು ವರ್ಷ ಮೈಯುಂಡ ಗಾಳಿ
ಹೋಗು ಹೊಗಲಾರದ ಬಂಡ ಗಾಳಿಗಳನ್ನೆಲ್ಲಾ
ಹೊಡೆದೊಡೆದು ಮಾತಾಡಿಸಿ ಹೊಡೆದೋಡಿಸಿದವಳು
ನಿಂತರೆ ನೀನು ನಿಶಾಚರ ರೂಪೆ
ಕುಂತರೆ ಜಲಧಿ ಗಂಗಾಮಾತೆ ಬೋಪರ.

## ದೇವಿಯ ಸೋಮನ ಕುಣಿಸೋ ಪದ

ಬಣ್ಣದ ಸೀರೆಯ ಬಾಗಿಸಿ ಉಡುವವಳೇ
ಹೆಣ್ಣೇ ನೀ ಯಾರ ಮಗಳಮ್ಮ, ಹುತ್ತದ
ರೂಪಾರತಿಯಾಗಿ ಹೊಡೆದವಳು.

ಗದ್ದಿಗೆ ಮೇಲಿಂದ ಎದ್ದು ಬಾರೆ ಕೆಂಪಮ್ಮ
ಅಣ್ಣ ಬಂದಾವನೆ ಕರೆಯಾಕೆ, ಚೇಳೂರ
ಮೊಗ್ಗ ತಂದಾವನೆ ಮುಡಿಯಾಕೆ.

ಏಳಮ್ಮ ಕೆಂಪಮ್ಮ ಎಷ್ಟೊತ್ತು ಸುಖನಿದ್ರೆ
ಆನೆ ಅಂಬಾರಿ ಕರೆಯಾಕೆ, ಆನೆ ಅಂಬಾರಿ
ಕರೆಯಾಕೆ ಬಂದಾವೆ ಚೇಳೂರ ಕಾಗದ ಬಂದಾವೆ ಕರೆಯಾಕೆ.

ಚೇಳೂರ ಸೇದೋ ಬಾವಿಯ ಮೇಲೆ
ಕೊಡಪಾನನಿತ್ತು ಕರೆದವರೆ, ಗೆಳೆತೇರು
ಚೋಕಾಲಿ ಆಟ ಮರೆತಾರೆ ಆಗಲ್ಲಿ
ಗಿಳಿ ಬಂದು ನೀರ ಕಲಕ್ಯಾವೆ.

ಮುಕ್ಕಣ್ಣ ಶಿವನಿಗೆ ಮಕ್ಕಳೆಷ್ಟು ಮಂದಿ
ಅಣ್ಣ ತಂಗೇರು ಅವರಡು ಕೆಂಪಮ್ಮ
ಜಪ ಮಾಡಿ ಕುಂತಾಳೆ ಜಗಮಂಡೆ.

ಹುತ್ತದಾ ಕ್ಯಾವೆಗೆ ಆರು ದಿವಸಕ್ಕೆ
ಹುಟ್ಟಿದೇಳು ದಿನಕೆ ಶಿವಪೂಜೆ ಕೆಂಪಮ್ಮಗೆ
ಆಕಾಶದ ಗಂಟೆ ಗಳಿರಾಗೋ.

ಸಾಗಸಂದ್ರದಮ್ಮ ಸಾಲು ತೋಪಿನ ಕೆಂಪೆ
ಸಾಲುಗಟ್ಟಿವರೆ ಭಕ್ತರು, ಅಗ್ನಿಕೊಂಡಕೆ
ಅವಸರದಿಂದ ಬಾರವ್ವ.

ರಾಗಿಯ ಕಾಳಿನಷ್ಟು ರೇಷೆಯ ಹುಟ್ಟವಳೆ
ಮೈಸೂರ ನೆರಿಗೆ ಗರಿಯವಳೆ ಕೆಂಪಮ್ಮ
ಚೇಳೂರಿಗೆ ಬೀಸೆವಳೆ ಕೊನೆಸೆರಗ.

ಕೆಂಪಮ್ಮನ ತೋಪಿನಲ್ಲಿ ಬಾಳೆಯ ಚಪ್ಪರ
ಬಾಗಿ ನೋಡವಳೆ ತೌರೂರ ಕೆಂಪಮ್ಮ
ಚೇಳೂರ ಬೀದಿಯ ನಡುವಿನ ಕಳಸಾವ.

ಹೂವಿಲ್ಲವೆಂದು ಹೂವಿಗೋಗಲು ಬೇಡ
ಹೂವೆ ನಮ್ಮಣ್ಣನ ಅರಮನೆ ತೋಪಲ್ಲಿ
ಈರಭದ್ರನ ಹೂವರಳಿ ನನ್ನ ಕರೆದಾವೆ.

ಮಗ್ಗಿಲ್ಲವೆಂದು ಮಗ್ಗಲಾಗಲು ಬೇಡ
ಮಗ್ಗಿನ ಹೂವು ಬಿರಿದಾವು, ಚೇಳೂರ
ತೇರಿನಾರತಿ ಬಂದಾವು.

ತಾಯಿ ಕೆಂಪಮ್ಮ ಗುಡಿಗೆ ಹೋಗೋದು ನೋಡು
ಎಳೆಬಾಳೆ ಕಂಬ ಸುಳಿ ಹೊಂಬಾಳೆ
ಮುತ್ತಿನ ಕಂಬ ನಗುತಾವೆ.

ಎಳೆಯ ಬೆಳದಿಂಗಳು ಬಳಿಯ ನೀಲಿನಾಮ
ಬೆಳಗಾಲದ ತನಕ ಮೆರವಣಿಗೆ ಕೆಂಪಮ್ಮಗೆ
ಮಂಗಳಾರತಿ ನಾಳೀಗೆ.

ಬೀದಿಯ ಅಮ್ಮ ಬಾಗಿಲು ಬಗ್ಗಿ ಬಂದ್ಲು
ಬಾಲಸೋಮಪ್ಪನ ದೊರೆ ಕಾಣೆ ಕೆಂಪಮ್ಮ
ಬಾಗಿ ಬಂದವಳೆ ಬಾಗಿನಕೆ.

ಅಮ್ಮನ ಗುಡಿಮುಂದೆ ಗಮ್ಮೆಂಬೋದೇನೆಂಬೆ
ಗಂಡು ಭೂತಾಳೆ ಗಜನಿಂಬೆ, ಕೆಂಪಮ್ಮನ
ಹೂವು ಹೊಂಬಾಳೆ ಕುಣಿದಾವು.

**ಮಾಹಿತಿ ನೀಡಿದವರು:**

1) ಶ್ರೀ ಎಸ್.ಸಿ. ದೊಡ್ಡಯ್ಯ, ನಿ.ಎ. ಇಂಜಿನಿಯರ್, ಅಧ್ಯಕ್ಷರು, ಜಿಲ್ಲಾ ನಾಯಕರ ಸಂಘ, ತುಮಕೂರು ಹಾಗೂ ಅಧ್ಯಕ್ಷರು, ಕೆಂಪಮ್ಮ ದೇವಸ್ಥಾನ ಅಭಿವೃದ್ಧಿ ಸಮಿತಿ
2) ಶ್ರೀ ಎಸ್.ಕೆ. ದೊಡ್ಡಕೆಂಪಯ್ಯ, ಗ್ರಾ.ಪಂ. ಸದಸ್ಯರು, ಪ್ರಧಾನ ಅರ್ಚಕರು, ಸಾಗಸಂದ್ರ
3) ಶ್ರೀಮತಿ ಗೌರಮ್ಮ, ಪಟೇಲ್ ಸಿದ್ದೇಗೌಡರ ಮಗಳು, ಚೇಳೂರು
4) ಪ್ರೊ|| ಎಸ್.ಬಸವರಾಜು, ಪ್ರಾಧ್ಯಾಪಕರು, ಕುವೆಂಪು ಮಹಾವಿದ್ಯಾಲಯ, ಚನ್ನಪಟ್ಟಣ
5) ಶ್ರೀ ಎನ್.ಸಿ. ಹೇಮಂತಕುಮಾರ್, ಗ್ರಾ.ಪಂ. ಸದಸ್ಯರು, ನಲ್ಲೂರು
6) ಶ್ರೀ ಬಣ್ಣದ ಕೆಂಪರಾಜು, ಬಣಗಾರರು, ಸಾಗಸಂದ್ರ
7) ಶ್ರೀಮತಿ ಹನುಮಕ್ಕ, ಜನಪದ ಕಲಾವಿದೆ, ಯಣ್ಣೆಕಟ್ಟೆ
8) ಶ್ರೀ ಕಾಂತರಾಜು, ಸಾಗಸಂದ್ರ
9) ಶ್ರೀ ಸಿ.ಎಂ. ಹಿತೇಶ್ ಮೇಲೇಗೌಡ, ಮಾಜಿ ಗ್ರಾ.ಪಂ. ಅಧ್ಯಕ್ಷ, ಚೇಳೂರು

**ಆಕರ ಗ್ರಂಥಗಳು**:

1) ತುಮಕೂರು ಜಿಲ್ಲಾ ಜಾತ್ರೆಗಳು, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
2) ತುಮಕೂರು ಜಿಲ್ಲಾ ಜಾನಪದೀಯ ನೆಲೆಗಳು, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ, ತುಮಕೂರು ವಿಶ್ವವಿದ್ಯಾಲಯ, ತುಮಕೂರು
3) ಕರ್ನಾಟಕ ಗ್ರಾಮ ಚರಿತ್ರೆ ಕೋಶ, ಗುಬ್ಬಿ ತಾಲ್ಲೂಕು, ಜಿ.ಸಂಪಾದಕ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
4) ಜಾನಪದ ಸಂಪನ್ನರು, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಸಿರಾ.
5) ಹಾಗಲವಾಡಿ ಪಾಳೆಯಗಾರರು : ಡಾ.ಡಿ.ಎನ್. ಯೋಗೀಶ್ವರಪ್ಪ
6) ತುಮಕೂರು ಜಿಲ್ಲಾ ದರ್ಶನ : ಸಂ. ಸಿ.ಎನ್. ಭಾಸ್ಕರಪ್ಪ
7) ಗುಬ್ಬಿ ತಾಲ್ಲೂಕು ಗ್ರಾಮ ಚರಿತ್ರೆ ಕೋಶ: ಸಂ. ಡಾ.ಚಿಕ್ಕಣ್ಣ ಯಣ್ಣೆಕಟ್ಟೆ